ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಕನ್ನಡ ಕಾದಂಬರಿಗಳಲ್ಲಿ ಮಾಧವಿ : ಒಂದು ಅಧ್ಯಯನ

ನಿಬಂಧಕಾರರು

ಶ್ರುತಿ ವೈ.ಜೆ.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಸಿ.ಪಿ.ಕೃಷ್ಣಕುಮಾರ್

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

[illegible]

[illegible]

[illegible]

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೦೯–೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

"ಕನ್ನಡ ಕಾದಂಬರಿಗಳಲ್ಲಿ ಮಾಧವಿ : ಒಂದು ಅಧ್ಯಯನ"

ನಿಬಂಧಕಾರರು

ಶ್ರುತಿ ವೈ.ಜೆ.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಸಿ.ಪಿ.ಕೃಷ್ಣಕುಮಾರ್

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೦೯–೧೦

ದೃಢೀಕರಣ ಪತ್ರ

೨೦೦೯-೧೦ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00422**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ ವೈ.ಜೆ.ಶ್ರುತಿ ಅವರು ನನ್ನ ಮಾರ್ಗದರ್ಶನದಲ್ಲಿ **"ಕನ್ನಡ ಕಾದಂಬರಿಗಳಲ್ಲಿ ಮಾಧವಿ : ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೨೫-೦೮-೨೦೧೦

(ಡಾ. ಸಿ.ಪಿ.ಕೃಷ್ಣಕುಮಾರ್)
ಮಾರ್ಗದರ್ಶಕರು
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿ ವಿದ್ಯಾರ್ಥಿಯಾಗಿ ಅಧ್ಯಯನ ಮಾಡುತ್ತಿರುವ ನಾನು ಡಾ. ಸಿ.ಪಿ.ಕೃಷ್ಣಕುಮಾರ್ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ **"ಕನ್ನಡ ಕಾದಂಬರಿಗಳಲ್ಲಿ ಮಾಧವಿ : ಒಂದು ಅಧ್ಯಯನ"** ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಸಂಶೋಧನ ನಿಬಂಧವನ್ನು ಸಿದ್ಧಪಡಿಸಿರುತ್ತೇನೆ. ಈ ಸಂಶೋಧನಾ ನಿಬಂಧವನ್ನು ಈ ಮೊದಲು ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಬೇರಾವುದೇ ಪದವಿ ಅಥವಾ ಡಿಪ್ಲೋಮೋಗಳಿಗಾಗಲಿ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
೨೫-೦೮-೨೦೧೦

(ವೈ.ಜೆ.ಶ್ರುತಿ)
ಕ್ರಮಸಂಖ್ಯೆ **KVTMKS-00422**
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಪರಿವಿಡಿ

***

ಅಧ್ಯಾಯ – ೧

ಪ್ರಸ್ತಾವನೆ

ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯವೂ ಆಗುತ್ತದೆ. ಹಾಗಾಗಿ ಕನ್ನಡ ಸಾಹಿತ್ಯವು ಪ್ರಾಚೀನ ಸಾಹಿತ್ಯ-ಗಳಲ್ಲೊಂದಾಗಿದೆ. ಅಪಾರವಾದ ಸಾಹಿತ್ಯ ರಚನೆಯಿಂದಾಗಿ ಸಮೃದ್ಧಿಹೊಂದಿರುವ ಕನ್ನಡ ಸಾಹಿತ್ಯವು ವಿಶ್ವಸಾಹಿತ್ಯದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ.

ನಮ್ಮ ಕನ್ನಡ ಸಾಹಿತ್ಯ ಕೃತಿಗಳು ಚಂಪೂ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ.... ಮೊದಲಾದ ಪ್ರಾಚೀನ ಸಾಹಿತ್ಯ ರೂಪಗಳಿಂದಲ್ಲದೇ, ಸಣ್ಣಕಥೆ, ಭಾವಗೀತೆ, ನಾಟಕ, ಕಾದಂಬರಿ, ಮಹಾಕಾವ್ಯ... ಮುಂತಾದ ಹೊಸಗನ್ನಡ ಸಾಹಿತ್ಯ ಪ್ರಕಾರವಾದ ಕಾದಂಬರಿಯು ಅತ್ಯಂತ ಸ್ವತಂತ್ರವಾದ, ಸ್ವಚ್ಛಂದವಾದ ನಿರ್ಮಾಣದಿಂದಾದ ಸಾಹಿತ್ಯ ಪ್ರಕಾರವಾಗಿದೆ.[೧]

೨೦ನೆಯ ಶತಮಾನದಲ್ಲಿ ಕತೆ, ನೀಳ್ಗತೆ, ವಿಮರ್ಶೆ, ಪ್ರಬಂಧ ಮತ್ತು ಕಾದಂಬರಿಗಳೆಂಬ ಶಾಖೋಪಶಾಖೆಗಳಾಗಿ ಬೆಳೆದ ಗದ್ಯಸಾಹಿತ್ಯದ ಒಂದು ಪ್ರಮುಖ ಭಾಗವೇ 'ಕಾದಂಬರಿ' ಎಂದು ಹೇಳಬಹುದು. ಓದುಗರಿಗೆ ಆಸಕ್ತಿಯನ್ನುಂಟುಮಾಡಿ ಅವರ ಮೆಚ್ಚುಗೆಯನ್ನು ಪಡೆಯುವ ಸುಂದರ ಶೈಲಿಯ ಸರಳಗದ್ಯ ರೂಪವೇ ಕಾದಂಬರಿ ಎನ್ನಬಹುದು. ಜನಜೀವನದಲ್ಲಿ ನಡೆಯುವ ಘಟನೆಗಳು, ಕ್ರಿಯೆಗಳು, ಅನುಭವಗಳು, ಸಂಗತಿಗಳು ಕಾದಂಬರಿಯಲ್ಲಿ ಚಿತ್ರಿತವಾಗುತ್ತವೆ. ಕಾದಂಬರಿಗಳು ಕಥಾಸಂವಿಧಾನ, ಚಾತುರ್ಯ, ಸುಂದರಶೈಲಿ, ಚಮತ್ಕಾರಪೂರ್ಣವಾದ ಸಂಭಾಷಣೆ, ಕುತೂಹಲಯುಕ್ತವಾದ ಕಥೆ, ಹಾಸ್ಯ ಇವುಗಳಿಂದ ಜನಪ್ರಿಯ ಓದಿನ ಮಾಧ್ಯಮವಾಗಿವೆ. ಸಮಾಜದ ಇತಿಹಾಸ ಮತ್ತು ಗತವೈಭವಗಳ ಚಿತ್ರಣವನ್ನು ಯಥಾವತ್ತಾಗಿ ತರಲು ಜೀವಕಳೆಯಿಂದ ಕೂಡಿದ ಶಬ್ದಗಳ ರಚನೆಯು ಕಾದಂಬರಿಯ ಮುಖ್ಯ ಉದ್ದೇಶ. ಪಾತ್ರ ರಚನಾ ಕೌಶಲವೇ ಇದರ ಹಿರಿಮೆಯ ಹೆಗ್ಗುರುತು. ಕಾದಂಬರಿಯಲ್ಲಿ ಶ್ರವ್ಯಕಾವ್ಯ – ದೃಶ್ಯಕಾವ್ಯಗಳ ಮಿಲನವನ್ನು ಕಾಣಬಹುದು. ಈ ಕಾರಣಗಳಿಂದ ಕಾದಂಬರಿ 'ಕರತಲರಂಗಭೂಮಿ', ಅಂಗೈ ಮೇಲಣ ನಾಟಕ. ಆದ್ದರಿಂದ

---

೧. 'ಕನ್ನಡ ಸಾಹಿತ್ಯಕೋಶ' – ರಾಜಪ್ಪ ದಳವಾಯಿ, ಪು.ಸಂ. ೮೭.

"ಕಾದಂಬರಿಯನ್ನೋದುವ ವಾಚಕರು ನಾಟಕವನ್ನು ನೋಡುವ ಪ್ರೇಕ್ಷಕರೂ ಆಗಬೇಕಾಗುತ್ತದೆ" ಎಂದು ರಾಷ್ಟ್ರಕವಿ ಕುವೆಂಪುರವರು ಹೇಳಿರುವುದು ಸಮಂಜಸ-ವಾಗಿದೆ.[೧]

೧೯ನೆಯ ಶತಮಾನದಲ್ಲಿ ಪ್ರಾರಂಭವಾದ ಕಾದಂಬರಿ ಸಾಹಿತ್ಯವು ಈಗ ಅದ್ಭುತವಾಗಿ ಪ್ರಸಿದ್ಧಿಯನ್ನು ಹೊಂದಿದೆ. ೧೯ನೆಯ ಶತಮಾನದ ಕೊನೆಯಲ್ಲಿ ಇಂಗ್ಲಿಷ್ ಕಾದಂಬರಿಕಾರರ ಪ್ರಭಾವಕ್ಕೆ ನಮ್ಮ ದೇಶದ ಲೇಖಕರು ಒಳಗಾದರು. ಆಗ ಇದರ ಪರಿಣಾಮ ಬಂಗಾಳ ಮತ್ತು ಮಹಾರಾಷ್ಟ್ರಗಳಲ್ಲಿ ಮೊದಲು ಕಾಣಬಂದಿತು. ಬಂಕಿಮಚಂದ್ರರೂ ಆಪ್ಟೆಯವರೂ ಕಾದಂಬರಿ ಯುಗದ ಶಕಪುರುಷರಾದರು.

ಕನ್ನಡದಲ್ಲಿ ಬಿ.ವೆಂಕಟಾಚಾರ್ಯರು ಮತ್ತು ಗಳಗನಾಥರು ಮೊದಲಿಗರಾಗಿ ಕಾದಂಬರೀ ಧ್ವಜವನ್ನು ಹಾರಿಸಿದರು. ವೆಂಕಟಾಚಾರ್ಯರು ಬಂಕಿಮಚಂದ್ರರ ಕಾದಂಬರಿಗಳನ್ನು ಮೂಲದ ಸ್ವಾರಸ್ಯ ಕೆಡದಂತೆ ಕನ್ನಡಕ್ಕೆ ಅನುವಾದಿಸಿದರು. ಗಳಗನಾಥರು ಆಪ್ಟೆಯವರ ಮರಾಠಿ ಕಾದಂಬರಿಗಳನ್ನು ಅಂದವಾಗಿ ಅನುವಾದಿಸಿದರು. ಇವರು ಸ್ವತಂತ್ರ ಐತಿಹಾಸಿಕ ಕಾದಂಬರಿಗಳನ್ನೂ ರಚಿಸಿ, ಹೊಸಗನ್ನಡದ ಗದ್ಯಲೇಖಕರಿಗೂ ಮಾರ್ಗದರ್ಶಕರಾದರು.

ಅನಂತರ ಗುಲ್ವಾಡಿ ವೆಂಕಟರಾಯರು ೧೮೯೯ರಲ್ಲಿ ಬರೆದ 'ಇಂದಿರಾ' ಎಂಬ ಕನ್ನಡದ ಪ್ರಥಮ ಸ್ವತಂತ್ರ ಕಾದಂಬರಿಯು ಕನ್ನಡ ಕಾದಂಬರಿ ಸಾಹಿತ್ಯದ ಮಿನುಗುತಾರೆಯಾಯಿತು. ಅನಂತರ ಎಂ.ಎಸ್.ಪುಟ್ಟಣ್ಣನವರ 'ಮಾಡಿದ್ದುಣ್ಣೊ ಮಹಾರಾಯ' ಎಂಬ ಸ್ವತಂತ್ರ ಕಾದಂಬರಿಯು ಕಾದಂಬರಿ ಸಾಹಿತ್ಯದಲ್ಲಿ ಗಮನಾರ್ಹ ವಾದುದು.

೨೦ನೆಯ ಶತಮಾನವನ್ನು ಕಾದಂಬರಿಗಳ ಹೆಚ್ಚಳ ಯುಗವೆಂದು ಕರೆಯಬಹುದು.[೨] ಏಕೆಂದರೆ ೧೯೩೦ರಿಂದೀಚೆಗೆ ಅನೇಕ ಶ್ರೇಷ್ಠ ಸ್ವತಂತ್ರ ಕಾದಂಬರಿಗಳು ಕನ್ನಡದಲ್ಲಿ ರಚಿತವಾದವು, ರಚಿತವಾಗುತ್ತಲೂ ಇದ್ದು ಆಧುನಿಕ ಗದ್ಯಸಾಹಿತ್ಯದ ಕೀರ್ತಿಯನ್ನು ಹೆಚ್ಚಿಸಿವೆ. ಕುವೆಂಪುರವರ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು', ಕಾರಂತರ 'ಮರಳಿಮಣ್ಣಿಗೆ', ಅ.ನ.ಕೃ.ರವರ 'ಸಂಧ್ಯಾರಾಗ', ತ.ರಾ.ಸು.ರವರ 'ಹಂಸಗೀತೆ', ಕೆ.ವಿ.ಅಯ್ಯರ್‌ರವರ 'ರೂಪದರ್ಶಿ'......

---

೧. ಕನ್ನಡ ಸಾಹಿತ್ಯ ಚರಿತ್ರೆಯ ಸಂಕ್ಷಿಪ್ತ ಪರಿಚಯ, ಪು. ಸಂ. ೧೩೪.
೨. ಅದೇ,

ಮೊದಲಾದವು ಒಂದೊಂದು ವಿಶಿಷ್ಟಗುಣಗಳಿಂದ ಕೂಡಿ ಕನ್ನಡ ಜನಜೀವನ ಇತಿಹಾಸ, ಸಂಸ್ಕೃತಿ, ಘನತೆ, ಗಾಂಭೀರ್ಯ ಇವೇ ಮೊದಲಾದ ಅಂಶಗಳನ್ನು ಶಾಶ್ವತವಾಗಿರಿಸಿವೆ. ಈ ದೃಷ್ಟಿಯಿಂದ ಪೌರಾಣಿಕ ಕಾದಂಬರಿಗಳೂ ಹೊರತಾಗಿಲ್ಲ.

ಕನ್ನಡ ಸಾಹಿತ್ಯ ರಚನೆಯ ವಸ್ತುಕ್ಷೇತ್ರ ವಿಸ್ತಾರವಾದುದು, ಪುರಾಣದಿಂದ ಆಧುನಿಕ ವಸ್ತುವಿಷಯದವರೆಗೂ ವ್ಯಾಪಿಸಿದೆ. ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದ ಇತ್ತೀಚಿನ ಆಧುನಿಕ ಕಾಲದವರೆಗೂ ಪುರಾಣದ ವಸ್ತು, ಪಾತ್ರಗಳನ್ನಾಧರಿಸಿ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳು ರಚನೆಯಾಗಿವೆ, ರಚನೆಯಾಗುತ್ತಿವೆ. ಭಾರತೀಯರ ಜನಪ್ರಿಯ ಪುರಾಣ ಕೃತಿಗಳಾದ 'ರಾಮಾಯಣ' ಹಾಗೂ 'ಮಹಾಭಾರತ' ಗ್ರಂಥಗಳು ಕನ್ನಡ ಸಾಹಿತ್ಯವನ್ನು ಸಂಪದ್ಭರಿತಗೊಳಿಸುವಲ್ಲಿ ತಮ್ಮ ಪ್ರಭಾವ ಬೀರಿರುವುದನ್ನು ಕಾಣಬಹುದು. ಉದಾ: ಪ್ರಾಚೀನ ಕಾಲದ ಪಂಪ ಕವಿಯು ವ್ಯಾಸ ವಿರಚಿತ 'ಮಹಭಾರತ' ಗ್ರಂಥವನ್ನು ಆಕರವಾಗಿಟ್ಟುಕೊಂಡು 'ವಿಕ್ರಮಾರ್ಜುನ ವಿಜಯಂ' ಎಂಬ ಕೃತಿಯನ್ನು ಕನ್ನಡದಲ್ಲಿ ರಚಿಸಿದನು. ಇದರಿಂದಾಗಿ ಪಂಪ ಕನ್ನಡದ "ಆದಿಕವಿ" ಎಂಬ ಬಿರುದಿಗೆ ಪಾತ್ರನಾದ. ಹಾಗೆಯೇ ಆಧುನಿಕ ಕಾಲದಲ್ಲಿ ಕುವೆಂಪುರವರು 'ರಾಮಾಯಣ'ವನ್ನು ಆಕರವಾಗಿಟ್ಟುಕೊಂಡು 'ಶ್ರೀ ರಾಮಾಯಣ ದರ್ಶನಂ' ಎಂಬ ಮಹಾಕಾವ್ಯವನ್ನು ರಚಿಸಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದರು.

ಹೀಗೆ ಕನ್ನಡ ಸಾಹಿತ್ಯವು ಅಭಿವೃದ್ಧಿ ಪಥದತ್ತ ಸಾಗುವಲ್ಲಿ ಹಾಗೂ ಕನ್ನಡ ಸಾಹಿತ್ಯ ನಿರ್ಮಾಣಕಾರರು ತಮ್ಮ ಪ್ರತಿಭೆಯನ್ನು ಸಾಕಾರಗೊಳಿಸುವಲ್ಲಿ ಪುರಾಣ ಗ್ರಂಥಗಳು ತಮ್ಮ ದಟ್ಟವಾದ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ.

ಹಾಗೆ ನೋಡಿದರೆ ಕನ್ನಡದಲ್ಲಿ ಪೌರಾಣಿಕ ವಸ್ತುವನ್ನು ಸ್ತ್ರೀವಾದಿ ನೆಲೆಯಿಂದ ವಿಶ್ಲೇಷಿಸಿ ಕೃತಿಗಳನ್ನು ರಚಿಸುವ ಒಂದು ಪರಂಪರೆಯೇ ಇತ್ತೀಚೆಗೆ ಹುಟ್ಟಿಕೊಂಡಿದೆ. ಅನುಪಮಾರವರಿಂದ ಆರಂಭವಾದ ಈ ಪರಂಪರೆಯಲ್ಲಿ ಎಚ್.ವಿ.ಸಾವಿತ್ರಮ್ಮ, ಎಸ್.ವಿ.ಪ್ರಭಾವತಿ, ನಳಿನಿಮೂರ್ತಿ, ಎಂ.ಎಸ್.ವೇದಾ ಮುಂತಾದವರ ಕಾದಂಬರಿ ಕೃತಿಗಳು ವಿಫುಲವಾಗಿ ಸೃಷ್ಟಿಯಾಗಿವೆ. ಈಗಾಗಲೇ ನಮ್ಮ ಹಿರಿಯ ಲೇಖಕಿ **ಅನುಪಮಾ ನಿರಂಜನ**ರವರು ಮಹಾಭಾರತ ಕಾವ್ಯದಲ್ಲಿ ಬಿಂದು ಮಾತ್ರವಾಗಿರುವ **'ಮಾಧವಿಯ ಕಥೆ'**ಯನ್ನು ತಮ್ಮ ಕಾದಂಬರಿಯ ವಸ್ತುವಾಗಿಟ್ಟುಕೊಂಡು **'ಮಾಧವಿ'** ಎಂಬ ಪೌರಾಣಿಕ ಕಾದಂಬರಿಯನ್ನು ಬರೆದಿದ್ದಾರೆ. ಇದೇ ವಸ್ತುವನ್ನಾಧರಿಸಿ

ಎಂ.ಎಸ್.ವೇದಾರವರು **'ಕಪ್ಪು ಕಿವಿಯ ಬಿಳಿಯ ಕುದುರೆಗಳು'** ಎಂಬ ಶೀರ್ಷಿಕೆಯಡಿ-ಯಲ್ಲಿ ಕಾದಂಬರಿಯನ್ನು ರಚಿಸಿದ್ದಾರೆ.

ಇಡೀ ಕನ್ನಡ ಸಾಹಿತ್ಯದಲ್ಲಿ ಇದುವರೆಗೆ ಮಾಧವಿ ಕಥೆಯನ್ನು ಆಧರಿಸಿ ರಚನೆಗೊಂಡಿರುವ ಕಾದಂಬರಿಗಳು ಎರಡೇ. ಮೊದಲನೆಯದು ಅನುಪಮಾ ನಿರಂಜನರ 'ಮಾಧವಿ', ಮತ್ತೊಂದು ಎಂ.ಎಸ್.ವೇದಾರವರ 'ಕಪ್ಪುಕಿವಿಯ ಬಿಳಿಯ ಕುದುರೆಗಳು'. ಈ ಎರಡೂ ಕೃತಿಗಳಿಗೆ ಮೂಲ ಆಕರ ಮಹಾಭಾರತದ 'ಮಾಧವಿ ಕಥೆ'ಯೇ ಆಗಿದೆ. ಆದ್ದರಿಂದ ಪುರಾಣದ ಪಾತ್ರವೊಂದನ್ನು ಕಾದಂಬರಿಯ ವಸ್ತುವಾಗಿಸಿಕೊಂಡ ಅನುಪಮಾ ನಿರಂಜನ ಮತ್ತು ಎಂ.ಎಸ್.ವೇದಾರವರು, ಕ್ರಮವಾಗಿ ತಮ್ಮ 'ಮಾಧವಿ' ಮತ್ತು 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಎಂಬ ಕಾದಂಬರಿಗಳಲ್ಲಿ ಮಾಧವಿಯ ಜೀವನ ವೃತ್ತಾಂತವನ್ನು ಕುರಿತು ಮೂಲಕ್ಕಿಂತ ಭಿನ್ನವಾಗಿ ಚಿತ್ರಿಸಿರುವ ರೀತಿಯ ಸಮಗ್ರ ಅಧ್ಯಯನದ ಸಂಗ್ರಹ ಸ್ವರೂಪವೇ "ಕನ್ನಡ ಕಾದಂಬರಿಗಳಲ್ಲಿ ಮಾಧವಿ : ಒಂದು ಅಧ್ಯಯನ"ವಾಗಿದೆ. ಹಾಗಾಗಿ ಈ ಕಾದಂಬರಿಗಳ ಅಧ್ಯಯನದ ದೃಷ್ಟಿಯಿಂದ ಮೂಲ ಮಹಾಭಾರತದ 'ಮಾಧವಿ ಕಥೆ'ಯನ್ನು ತಿಳಿಯುವುದು ಅವಶ್ಯ.

'ಮಹಾಭಾರತ'ದ ಉದ್ಯೋಗಪರ್ವದಲ್ಲಿ ಗಾಲವಋಷಿಯ ಕತೆಯಲ್ಲಿ ಮಾಧವಿ ಕಥೆಯು ಚಿತ್ರಿತವಾಗಿದೆ. ಹಾಗಾಗಿ ಉದ್ಯೋಗಪರ್ವದ ೧೧೪, ೧೧೭, ೧೧೮, ೧೧೯, ೧೨೦ನೆಯ ಶ್ಲೋಕಗಳಲ್ಲಿ ಪ್ರಮುಖವಾಗಿ ಮಾಧವಿಯ ಉಲ್ಲೇಖ ಇರುವುದು ಕಂಡುಬರುತ್ತದೆ. ಜೊತೆಗೆ ಮಾಧವಿಯ ಬದುಕಿನಲ್ಲಿ ಬರುವ ಇತರ ಪಾತ್ರಗಳಾದ ಗಾಲವ ವಿಶ್ವಾಮಿತ್ರ, ಯಯಾತಿ, ದಿವೋದಾಸ, ಹರ್ಯಶ್ವ, ಉಶೀನರ, ಇವರ ಬಗೆಗೆ 'ಮಹಾಭಾರತ'ದ ಉದ್ಯೋಗಪರ್ವದ ೧೦೬, ೧೦೭, ೧೦೮, ೧೧೫; ಆದಿಪರ್ವದ ೬೯, ೭೮, ೮೭; ಸಭಾಪರ್ವದ ೮, ದ್ರೋಣಪರ್ವದ ೬೩, ಶಾಂತಿಪರ್ವದ ೨೮, ಅನುಶಾಸನಪರ್ವದ ೨೭೧ನೇ ಶ್ಲೋಕಗಳಲ್ಲಿ ಉಲ್ಲೇಖಗಳಿವೆ.[೧] ಎಂಬುದಾಗಿ ಅನುಪಮಾರವರು ತಮ್ಮ 'ಮಾಧವಿ' ಕಾದಂಬರಿಯ ಮುನ್ನುಡಿಯಲ್ಲಿ ತಿಳಿಸಿದ್ದಾರೆ.

ಮಹಾಭಾರತದ ಉದ್ಯೋಗಪರ್ವದಲ್ಲಿ ನಾರದರು ದುರ್ಯೋಧನನಿಗೆ **ಗಾಲವ ಋಷಿಯ ಕಥೆ**ಯನ್ನು ಹೇಳುತ್ತಾರೆ. **ಗಾಲವ ಮತ್ತು ಗರುಡ**ರೆಂಬ ದ್ವಿಜದ್ವಯರು ಋಷಭಪರ್ವತ ಶೀಕರದಲ್ಲಿಳಿದು ಅಲ್ಲಿ ತಪಸ್ವಿನಿಯಾದ 'ಶಾಂಡಿಲೀ' ಎಂಬ

೧. ಅನುಪಮಾ ನಿರಂಜನ, 'ಮಾಧವಿ', ಪು.ಸಂ. ೫, ೬.

ಬ್ರಾಹ್ಮಣಿಯನ್ನು ಸಂದರ್ಶಿಸಿದರು. ಆ ತಪಸ್ವಿನಿಯ ಆತಿಥ್ಯದಿಂದ ಪ್ರಯಾಣದ ಆಯಾಸವನ್ನು ನೀಗಿಸಿಕೊಂಡ ಗರುಡ-ಗಾಲವರು ಶಾಂಡಿಲಿಯ ಅನುಜ್ಞೆಯನ್ನು ಪಡೆದುಕೊಂಡು ಬಂದ ಹಾದಿಯನ್ನು ಹಿಡಿದು ಹೊರಟುಹೋದರು. ಆದರೆ ವಿಶ್ವಾಮಿತ್ರನು ಅಪೇಕ್ಷಿಸಿದ್ದ ವಿಶೇಷ ಲಕ್ಷಣಗಳುಳ್ಳ ಕುದುರೆಗಳನ್ನು ಸಂಪಾದಿಸಲು ಗಾಲವನಿಗೆ ಸಾಧ್ಯವಾಗಲಿಲ್ಲ.

ಇತ್ತ ಕುದುರೆಗಳನ್ನು ಹುಡುಕಿಕೊಂಡು ಖಗಪತಿಯಾದ ಗರುಡನ ಮೇಲೆ ಕುಳಿತು ಬರುತ್ತಿದ್ದ ಗಾಲವನನ್ನು ವಾಗ್ಮಿಗಳಲ್ಲಿ ಶ್ರೇಷ್ಠನಾದ ವಿಶ್ವಾಮಿತ್ರನು ಮಾರ್ಗ-ಮಧ್ಯದಲ್ಲಿ ನೋಡಿ ಗರುಡನ ಸಮ್ಮುಖದಲ್ಲಿಯೇ ಅವನನ್ನು ಸಂಬೋಧಿಸಿ ಹೇಳಿದನು: "ಬ್ರಾಹ್ಮಣ! ನೀನಾಗಿಯೇ ಗುರುದಕ್ಷಿಣೆಯನ್ನು ಕೊಡಲು ಪ್ರತಿಜ್ಞೆ ಮಾಡಿರುವೆ. ಅದನ್ನು ಕೊಡಬೇಕಾದ ಕಾಲವೀಗ ಸನ್ನಿಹಿತವಾಗಿದೆ. ಆದರೆ ನೀನು ಯಾವ ರೀತಿಯಲ್ಲಿ ಯೋಚಿಸುತ್ತಿರುವೆಯೆಂಬುದು ನನಗೆ ತಿಳಿಯದು. ಇನ್ನೂ ಕಾಲವು ಮೀರಿಲ್ಲವೆಂದೇ ನೀನು ಭಾವಿಸಿರಬಹುದು. ಆದರೆ ನೀನು ಕೊಟ್ಟಾಗ ತೆಗೆದುಕೊಳ್ಳಲು ನಾನು ಸಿದ್ಧನಿಲ್ಲ. ಇನ್ನು ಸ್ವಲ್ಪಕಾಲದೊಳಗಾಗಿ ನೀನು ನನಗೆ ಗುರುದಕ್ಷಿಣೆಯನ್ನು ತಂದುಕೊಡಬೇಕು. ನಿನ್ನ ಕಾರ್ಯವು ಯಾವ ರೀತಿಯಲ್ಲಿ ಎಷ್ಟು ಶೀಘ್ರವಾಗಿ ಸಿದ್ಧಿಸುವುದೋ ಅದನ್ನೀಗಲೇ ವಿಚಾರ ಮಾಡು".

ವಿಶ್ವಾಮಿತ್ರನ ಆ ಮಾತುಗಳನ್ನು ಕೇಳುತ್ತಲೇ ಗಾಲವನು ಅಗಾಧವಾದ ದುಃಖಸಾಗರದಲ್ಲಿ ಮುಳುಗಿಹೋದನು. ದುಃಖಿತನಾಗಿದ್ದ ಗಾಲವನನ್ನು ಕಂಡು ಗರುಡನು, ವಿಶ್ವಾಮಿತ್ರರ ಗುರುದಕ್ಷಿಣೆಯ ವಿಷಯವಾಗಿ ತಾವಿಬ್ಬರೂ ಕುಳಿತು ಸಮಾಲೋಚಿಸಿ ಒಂದು ನಿರ್ಧಾರಕ್ಕೆ ಬರೋಣವೆಂದು ಗಾಲವನಿಗೆ ಸಾಂತ್ವನದ ಮಾತುಗಳನ್ನು ಹೇಳಿದನು. ಗಾಲವನು ತನ್ನ ಗುರುವಿಗೆ ಸಮಗ್ರವಾದ ಗುರುದಕ್ಷಿಣೆ-ಯನ್ನು ಕೊಡದೇ ನಿಶ್ಚಿಂತೆಯಿಂದ ಕುಳಿತಿರಲು ಆತನಿಂದ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ, ಎಂಬುದನ್ನರಿತಿದ್ದ ಗರುಡನು ಆ ಬಗ್ಗೆಯೇ ಚಿಂತಿಸುತ್ತಿದ್ದನು.

ಗರುಡನು ಗಾಲವನಿಗೆ, ಧನವು ಮೂರು ಲೋಕಗಳಲ್ಲಿಯೂ ಸರ್ವಕಾಲ-ಗಳಲ್ಲಿಯೂ ಇರುವ ವಸ್ತುವಾಗಿದೆ. ನೀನು ಅಭಿಲಾಷಿಸಿರುವ ಕುದುರೆಗಳು ಹಣವಿಲ್ಲದೇ ಸಿಕ್ಕಲಾರವು. ಈ ಕಾರಣದಿಂದಾಗಿ ದೇವತೆಗಳನ್ನು ಪ್ರಾರ್ಥಿಸುವುದರಿಂದ ಧನವನ್ನು ಪಡೆಯಬಹುದೇ ಹೊರತು ಬೇರಾವ ಮಾರ್ಗದಿಂದಲೂ ಧನವನ್ನು ಪಡೆಯುವ ಸಾಧ್ಯತೆಯಿಲ್ಲ. ಆದುದರಿಂದ ನೀನು ರಾಜರ್ಷಿಯ ಕುಲದಲ್ಲಿ ಹುಟ್ಟಿರುವ

ಸತ್ಕುಲ ಪ್ರಸೂತನಾದ ಯಾವನಾದರೊಬ್ಬ ರಾಜನನ್ನು ಧನಕ್ಕಾಗಿ ಪ್ರಾರ್ಥಿಸು. ಆದರೆ ಆ ರಾಜನು ನಮಗೆ ಧನಕೊಡುವ ಕಾರಣದಿಂದ ಪ್ರಜೆಗಳನ್ನು ಸುಲಿಗೆ ಮಾಡಬಾರದು, ನಮ್ಮ ಅಭಿಲಾಷೆಯನ್ನು ಪೂರ್ಣಗೊಳಿಸುವ ಸಾಮರ್ಥ್ಯವಿರುವ ರಾಜನೊಬ್ಬನನ್ನು ಧನಕ್ಕಾಗಿ ಯಾಚಿಸು, ಎಂದು ಹೇಳಿದ ಗರುಡನು ಮತ್ತೆ ಕ್ಷಣಕಾಲ ಯೋಚಿಸಿ ಗಾಲವನ್ನು ಕುರಿತು, ಸೋಮವಂಶದಲ್ಲಿ ಹುಟ್ಟಿರುವ ರಾಜನೊಬ್ಬನಿದ್ದಾನೆ. ಆತ ನನ್ನ ಸ್ನೇಹಿತನೂ ಆಗಿದ್ದು, ಅವನಿಗೆ ಈ ಪ್ರಪಂಚದಲ್ಲಿ ಅಪಾರವಾದ ಐಶ್ವರ್ಯವಿದೆ. ಅವನ ಬಳಿಗೆ ನಾವಿಬ್ಬರೂ ಪ್ರಯಾಣ ಮಾಡೋಣ. ಆ ರಾಜನ ಹೆಸರು ಯಯಾತಿ. ಅವನು ನಹುಷನ ಮಗನಾಗಿದ್ದು, ಸತ್ಯವಿಕ್ರಮನಾಗಿದ್ದಾನೆ. ನಾನು ನಿನ್ನ ಪರವಾಗಿ ಪ್ರಾರ್ಥಿಸಿದ್ದೇ ಆದರೆ, ನೀನೂ ಅವನನ್ನು ಯಾಚಿಸಿದೆಯಾದರೆ ಅವನು ನಿನಗೆ ಬೇಕಾದಷ್ಟು ಧನವನ್ನು ಕೊಡುತ್ತಾನೆ. ನನಗೆ ತಿಳಿದಿರುವಂತೆ ಧನದ ನಾದ ಕುಬೇರನಲ್ಲಿರುವಂತೆಯೇ ಅವನಲ್ಲಿಯೂ ಅಪಾರವಾದ ಧನವಿರುವುದು. ಅವನನ್ನು ಪ್ರಾರ್ಥಿಸಿ, ದಾನ ಪಡೆದು ಗುರುಗಳಿಗೆ ಕೊಡಬೇಕಾದ ದಕ್ಷಿಣೆಯನ್ನು ತೀರಿಸಿಬಿಡು ಎಂದನು.

ಈ ರೀತಿಯಾಗಿ ಗರುಡ-ಗಾಲವರಿಬ್ಬರೂ ಮಾತನಾಡುತ್ತಾ, ಮುಂದೇನು ಮಾಡಬೇಕೆಂಬುದನ್ನೂ ಯೋಚಿಸುತ್ತಾ ಪ್ರತಿಷ್ಠಾನಪುರದಲ್ಲಿದ್ದ ನರಶ್ರೇಷ್ಠನಾದ ಯಯಾತಿ ಸಮೀಪಕ್ಕೆ ಹೋದರು. ರಾಜನಿಂದ ಸುಸ್ವಾಗತವನ್ನು ಪಡೆದು ಅರ್ಘ್ಯ-ಪಾದ್ಯಾದಿಗಳಿಂದ ಸತ್ಕೃತರಾದನಂತರ, ಅವರ ಆಗಮನದ ಕಾರಣವನ್ನು ಯಯಾತಿಯು ಪ್ರಶ್ನಿಸಿದನು. ಅದಕ್ಕೆ ಉತ್ತರವಾಗಿ ಗರುಡನು ಗಾಲವನ್ನು ಕರೆದುಕೊಂಡು ಬಂದ ವಿಚಾರವನ್ನು ತಿಳಿಸಿದನು.

ತಪೋನಿಧಿಯಾದ ಗಾಲವನು ಗರುಡನ ಪರಮಮಿತ್ರ. ಗಾಲವನು ಹತ್ತು ಸಾವಿರ ವರ್ಷಗಳ ಕಾಲ ವಿಶ್ವಾಮಿತ್ರನ ಶಿಷ್ಯನಾಗಿದ್ದನು. ಇವನು ಮಾಡಿದ ಸೇವೆಯಿಂದ ಸುಪ್ರೀತನಾದ ವಿಶ್ವಾಮಿತ್ರನು ಶಿಷ್ಯನಿಗೆ ಉಪಕಾರ ಮಾಡುವ ಇಚ್ಛೆಯಿಂದಾಗಿ ಅನೇಕ ಬಾರಿ ಇಚ್ಛೆ ಬಂದೆಡೆಗೆ ಹೋಗಲು ಅನುಮತಿ ಇತ್ತನು. ವಿಶ್ವಾಮಿತ್ರನು ಯಾವ ಗುರುದಕ್ಷಿಣೆಯನ್ನೂ ಅಪೇಕ್ಷಿಸಲಿಲ್ಲ. ಆದರೆ ಗಾಲವನು ಮಾತ್ರ ಶಿಷ್ಟಾಚಾರವನ್ನು ಬಿಡಲೊಪ್ಪದೇ ವಿಶ್ವಾಮಿತ್ರನನ್ನು ಕುರಿತು ಬಾರಿ ಬಾರಿಗೂ ಪ್ರಾರ್ಥಿಸಿದನು. "ಭಗವನ್! ತಮಗೆ ಯಾವ ರೂಪದಲ್ಲಿ ಗುರುದಕ್ಷಿಣೆಯನ್ನರ್ಪಿಸಲಿ, ಗುರುದಕ್ಷಿಣಾರೂಪವಾಗಿ ಯಾವ ವಸ್ತುವನ್ನು ತಂದುಕೊಡಲಿ?" ಎಂದು ಒಮ್ಮೆ ಹೇಳಿ

ಸುಮ್ಮನಾಗಲಿಲ್ಲ. ಗುರುದಕ್ಷಿಣೆಯು ಯಾವ ರೂಪದಲ್ಲಿರಬೇಕೆಂಬುದನ್ನು ತಿಳಿಸಬೇಕೆಂದು ವಿಶ್ವಾಮಿತ್ರನನ್ನು ಪದೇ ಪದೇ ಒತ್ತಾಯಪಡಿಸಿದನು.

ಗಾಲವನ ಒತ್ತಾಯದಿಂದಾಗಿ ಸ್ವಲ್ಪ ಕೋಪಗೊಂಡ ವಿಶ್ವಾಮಿತ್ರನು ಗಾಲವ ನಿರ್ಧನನೆಂಬುದನ್ನು ತಿಳಿದಿದ್ದರೂ ಗುರುದಕ್ಷಿಣೆಯು ಇದೇ ರೂಪದಲ್ಲಿರಬೇಕೆಂದು ನಿರ್ದೇಶಿಸಿ ಹೇಳಿದನು.

ಏಕತಃ ಶ್ಯಾಮಕರ್ಣಾನಾಂ ಶುಭ್ರಾಣಾಂ ಶುದ್ಧ ಜನ್ಮನಾಮ್।
ಅಷ್ಟೌ ಶತಾನಿ ಮೇ ದೇಹಿ ಹಯಾನಾಂ ಚನ್ದ್ರವರ್ಚಸಾಮ್।
ಗುರ್ವರ್ಥೋ ದೀಯತಾಮೇಷ ಯದಿ ಗಾಲವ ಮನ್ಯ ಸೇ॥[೧]

"ಗಾಲವ! ಒಳ್ಳೆಯ ಜಾತಿಯಲ್ಲಿ ಹುಟ್ಟಿರುವ **ಎಂಟುನೂರು ಕುದುರೆಗಳನ್ನು** ತಂದುಕೊಂಡು. ಅವುಗಳು **ಚಂದ್ರನಂತೆ ಬೆಳ್ಳಗಿರಬೇಕು.** ಆದರೆ ಅವುಗಳ **ಒಂದು ಕಿವಿಯು ಮಾತ್ರ ಕಪ್ಪುಬಣ್ಣದ್ದಾಗಿರಬೇಕು.** ನೀನು ಗುರುದಕ್ಷಿಣೆಯನ್ನು ಕೊಡಲೇಬೇಕೆಂದು ನಿಶ್ಚಯಿಸಿರುವುದಾದರೆ ಗುರ್ವರ್ಥವಾಗಿ ನಾನು ಹೇಳಿದ ಈ ಲಕ್ಷಣಗಳುಳ್ಳ ಎಂಟುನೂರು ಕುದುರೆಗಳನ್ನು ತಂದುಕೊಡು".

ಹೀಗೆಂಬುದಾಗಿ ತಪೋಧನನಾದ ವಿಶ್ವಾಮಿತ್ರನು ಕುಪಿತನಾಗಿ ಗಾಲವನಿಗೆ ಹೇಳಿಬಿಟ್ಟನು. ಇಂತಹ ಕಠಿಣ ಪರೀಕ್ಷೆಗೆ ತುತ್ತಾಗುವೆನೆಂದು ಗಾಲವನು ಎಣಿಸಿರಲಿಲ್ಲ. ವಿಶ್ವಾಮಿತ್ರನ ಮಾತನ್ನು ಕೇಳುತ್ತಲೇ ಅಂತಹ ಬಹುಮೂಲ್ಯದ ಗುರುದಕ್ಷಿಣೆಯನ್ನು ತರಲು ಅಶಕ್ತನಾಗಿ ಮಹತ್ತರವಾದ ಶೋಕದಿಂದ ಪರಿತಪಿಸುತ್ತಿದ್ದ ಗಾಲವನು ಗರುಡನ ಸಲಹೆಯಂತೆ ಯಯಾತಿ ಮಹಾರಾಜನಲ್ಲಿ ಗುರುದಕ್ಷಿಣಾರೂಪವಾದ ಬಹುಮೌಲ್ಯದ ಕದುರೆಗಳನ್ನು ಭಿಕ್ಷೆಯಾಗಿ ಪಡೆದು ಗುರುವಿಗದನ್ನು ದಾನಮಾಡಿ ನಿರ್ವ್ಯಥನಾಗಿ ಮುಂದೆ ನಿಶ್ಚಿಂತೆಯಿಂದ ತಪಸ್ಸು ಮಾಡುವ ಸಲುವಾಗಿ ಯಯಾತಿಯ ಬಳಿಗೆ ಬಂದುದಾಗಿ ಗರುಡನು ಸವಿವರವಾಗಿ ರಾಜನಿಗೆ ತಿಳಿಸಿದನು. ಜೊತೆಗೆ ಶಂಕದಲ್ಲಿ ಹಾಕಿದ ಕ್ಷೀರದಂತೆ ಯಯಾತಿ ಗಾಲವನಿಗೆ ಕೊಡುವ ದಾನವು ಶೋಭಿಸುತ್ತದೆ ಎಂಬುದಾಗಿ ದಾನದ ಮಹತ್ವವನ್ನು ಕುರಿತು ಗರುಡನು ಯಯಾತಿಗೆ ಹೇಳಿದನು.

ಸಾವಿರಾರು ಯಾಗಗಳನ್ನು ಮಾಡಿದ್ದ, ದಾನಿಯಾದ, ದಾನಪತಿಯಾದ, ಚಕ್ರವರ್ತಿಯಾದ, ರಾಜೋಚಿತವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ, ಸರ್ವರಾಜರಿಗೂ ರಾಜನಾದ ಯಯಾತಿಯು ಗರುಡನು ಹೇಳಿದ ಮಾತುಗಳನ್ನು ಮನಸ್ಸಿನಲ್ಲಿ ಬಾರಿ

೧. 'ಮಹಾಭಾರತ'–ಉದ್ಯೋಗಪರ್ವ–೧೧ನೇ ಸಂಪುಟ, ಪು. ೫೬೮.

ಬಾರಿಗೂ ಜಾಗರೂಕತೆಯಿಂದ ವಿಮರ್ಶಿಸತೊಡಗಿದನು. ಸೂರ್ಯವಂಶೋತ್ಪನ್ನರಾದ ಅನೇಕ ಇತರ ರಾಜರನ್ನು ಬಿಟ್ಟು ಈ ದ್ವಿಜದ್ವಯರು ದಾನವನ್ನಪೇಕ್ಷಿಸಿ ತನ್ನಲ್ಲಿಗೇ ಬಂದಿರುವುದು ತನ್ನ ಪುಣ್ಯ, ತನ್ನ ಜನ್ಮ ಸಾರ್ಥಕವಾಯಿತು. ತನ್ನ ಕುಲ ದೇಶವೇ ಉದ್ಧಾರವಾಗಿ ಹೋಯಿತು ಎಂದು ಯಯಾತಿ ಸಂತಸಪಟ್ಟನು. ಆದರೆ ಇತ್ತೀಚೆಗೆ ಅವನ ಅಪಾರವಾಗಿದ್ದ ಐಶ್ವರ್ಯವು ಕ್ಷೀಣಿಸಿದ್ದು, ಮಹತ್ತರವಾದ ಆಶೆ-ಆಕಾಂಕ್ಷೆಗಳಿಂದ ತನ್ನ ಬಳಿಗೆ ಬಂದಿದ್ದ ಆ ದ್ವಿಜದ್ವಯರ ಆಗಮನವನ್ನು ನಿರರ್ಥಕಗೊಳಿಸಲು ಇಚ್ಛಿಸದ ಯಯಾತಿಯು, ತಾನು ಕೊಡುವ ಯಾವ ವಸ್ತುವಿನಿಂದ ಗಾಲವ -ಗರುಡರು ಅಭಿಲಾಷಿಸಿ ಬಂದಿರುವ ಕಾರ್ಯದ ಸಿದ್ಧಿಯಾಗುವುದೋ ಅಂತಹ ಒಂದು ವಸ್ತುವನ್ನು ಅವರಿಗೆ ಕೊಡುವುದಾಗಿ ಮನಸ್ಸಿನಲ್ಲಿ ಆಲೋಚಿಸಿದನು.

ಲೋಕದಲ್ಲಿ ಒಬ್ಬನ ಆಶೆಯನ್ನು ವಿನಾಶಗೊಳಿಸುವುದು 'ದೇಹಿ' ಎಂದವನಿಗೆ 'ಇಲ್ಲ' ಎಂದು ಹೇಳಿಬಿಡುವುದು, ಇದಕ್ಕಿಂತಲೂ ಪಾಪಿಷ್ಠವಾದದು ಬೇರೊಂದಿಲ್ಲವೆಂದು ಭಾವಿಸಿದ ಯಯಾತಿಯು ತನ್ನ ಮಗಳು ಮಾಧವಿಯನ್ನು ಗಾಲವನಿಗೆ ದಾನ ಮಾಡುವುದಾಗಿ ನಿರ್ಧರಿಸಿದನು. ಹಾಗಾಗಿ ಯಯಾತಿಯು ಗಾಲವನ ಬಳಿ ಬಂದು, "ತನಗೊಬ್ಬಳು ಮಗಳಿದ್ದಾಳೆ. ಅವಳು ನಾಲ್ಕು ವಂಶಗಳ ಸಂಸ್ಥಾಪಕಳಾಗುವಂತಹಳು. ಸಕಲಧರ್ಮಗಳನ್ನು ತಿಳಿದವಳು. ದೇವಕನ್ಯೆಗೆ ಸಮಾನಳಾಗಿರುವಳೆಂಬ ಖ್ಯಾತಿ ಪಡೆದಿರತಕ್ಕವಳು. ರೂಪದಲ್ಲಿ ಅನುಪಮಳಾದ ಅವಳನ್ನು ದೇವತೆಗಳೂ, ಮನುಷ್ಯರೂ ಮತ್ತು ಅಸುರರೂ ಸದಾ ಅಪೇಕ್ಷಿಸುತ್ತಿದ್ದಾರೆ. ಅಂತಹ ಅನುಪಮಸುಂದರಿಯಾದ, ಧರ್ಮಿಷ್ಠೆಯಾದ ಮಗಳನ್ನು ನೀನು ದಾನವಾಗಿ ಪ್ರತಿಗ್ರಹಿಸು. ಅವಳ ಸಲುವಾಗಿ ರಾಜ್ಯವನ್ನೇ ಶುಲ್ಕವನ್ನಾಗಿ ಕೊಡುವವರೂ ಇದ್ದಾರೆ. ಹೀಗಿರುವಾಗ ಎಂಟುನೂರು ಕುದುರೆಗಳನ್ನು ಕೊಟ್ಟು ಅವಳನ್ನು ಪಡೆದುಕೊಳ್ಳುವ ವಿಷಯದಲ್ಲಿ ಸಂಶಯ-ಪಡಬೇಕಾಗಿಲ್ಲ. ಅವಳ ವಿನಿಮಯದಿಂದ ನಿನಗೆ ಬೇಕಾಗಿರುವ ಎಂಟುನೂರು ಕುದುರೆಗಳು ಸಿಕ್ಕುತ್ತವೆ. ಆದುದರಿಂದ ನೀನು ನನ್ನ ಕಡುಚೆಲುವೆಯಾದ ಮಾಧವೀ ಎಂಬ ಪುತ್ರಿಯನ್ನು ಸ್ವೀಕರಿಸು" ಎಂದು ಯಯಾತಿಯು ಪ್ರಾರ್ಥಿಸಿದೊಡನೆಯೇ ಗಾಲವನು ಮಾಧವಿಯನ್ನು ದಾನವಾಗಿ ಸ್ವೀಕರಿಸಿ, "ಮತ್ತೊಮ್ಮೆ ಭೇಟಿಯಾಗೋಣ" ಎಂಬುದಾಗಿ ಯಯಾತಿಗೆ ಹೇಳಿ, ಮಾಧವಿಯೊಡನೆ ಹೊರಟನು. ಅನಂತರ ಗರುಡನು ತನ್ನ ಮಿತ್ರ ಗಾಲವನಿಗೆ ಕುದುರೆಗಳನ್ನು ಪಡೆದುಕೊಳ್ಳುವ ದಾರಿ ಸಿಕ್ಕಿದ್ದು ಕಂಡು, ಗಾಲವನ ಅನುಮತಿ ಪಡೆದು ತನ್ನ ಲೋಕಕ್ಕೆ ತೆರಳಿದನು.

ಮಾಧವಿಯೊಡನೆ ಪ್ರಯಾಣ ಮಾಡುತ್ತಿದ್ದ ಗಾಲವನು ತನ್ನ ಮನಸ್ಸಿನಲ್ಲಿ, ಈ ಕನ್ಯೆಯನ್ನು ಪಡೆದುಕೊಂಡು ಶುಲ್ಕರೂಪದಲ್ಲಿ ತಾನು ಕೇಳಲಿರುವ ಎಂಟುನೂರು ಕುದುರೆಗಳನ್ನು ಕೊಡುವ ರಾಜರು ಯಾರಿದ್ದಾರೆ? ಎಂದು ಯೋಚಿಸುತ್ತಿದ್ದನು. ಆ ಸಮಯದಲ್ಲಿ ಮಹಾವೀರ್ಯನಾದ, ಚತುರಂಗ ಬಲಾನ್ವಿತನಾದ, ರಾಜಸತ್ತಮನಾದ, ಇಕ್ಷ್ವಾಕು ಕುಲತಿಲಕನಾದ **ಅಯೋಧ್ಯೆಯಲ್ಲಿದ್ದ ಹರ್ಯಶ್ವನೆಂ**ಬ ರಾಜನು ಗಾಲವನ ಸ್ಮೃತಿಪಥದಲ್ಲಿ ಸುಳಿದನು. ಹರ್ಯಶ್ವನು ಕೋಶ, ಧಾನ್ಯ ಮತ್ತು ಬಲಗಳಿಂದ ಕೂಡಿದವನಾಗಿದ್ದನು. ಬ್ರಾಹ್ಮಣಪ್ರಿಯನಾಗಿದ್ದು, ಶ್ರೇಷ್ಠವಾದ ತಪಸ್ಸನ್ನು ಆಚರಿಸುತ್ತಿದ್ದನು. ಪ್ರಜಾಭಿಲಾಷಿಯೂ, ಜನಪ್ರಿಯನೂ ಆಗಿದ್ದನು. ಅಂತಹ ಸರ್ವಗುಣ ಪರಿಪೂರ್ಣನಾದ ಹರ್ಯಶ್ವನ ಸಮೀಪಕ್ಕೆ ಬಂದ ವಿಪ್ರಶ್ರೇಷ್ಠನಾದ ಗಾಲವನು ಹೇಳಿದನು: 'ರಾಜೇಂದ್ರ! ಇವಳು ನನ್ನ ಕುಮಾರೀ. ಸಂತಾನದ ಮೂಲಕವಾಗಿ ವಂಶದ ವೃದ್ಧಿಯನ್ನುಂಟು-ಮಾಡತಕ್ಕವಳು. ಭೂಮಂಡಲಕ್ಕೆ ಚಕ್ರವರ್ತಿಯಾಗುವ ಮಗನನ್ನು ಇವಳು ಪ್ರಸವಿಸಲು ಸಮರ್ಥಳಾಗಿರುವವಳು. ಹಾಗಾಗಿ ಚಂದ್ರನಂತೆ ಶುಭ್ರವಾದ ಶರೀರವನ್ನುಳ್ಳ, ಒಂದು ಕಿವಿ ಮಾತ್ರ ಕಪ್ಪಾಗಿರುವ ಎಂಟುನೂರು ಕುದುರೆಗಳನ್ನು ಕನ್ಯಾಶುಲ್ಕವಾಗಿ ಕೊಟ್ಟು ಇವಳನ್ನು ಪತ್ನಿಯನ್ನಾಗಿ ಸ್ವೀಕರಿಸು" ಎಂದು ಗಾಲವ ಕನ್ಯಾಶುಲ್ಕದ ಪ್ರಸ್ತಾಪಮಾಡುವ ಮೊದಲೇ ಹರ್ಯಶ್ವ ಕನ್ಯೆಯನ್ನು ನೋಡಿ ಅವಳ ರೂಪ-ಲಕ್ಷಣಗಳನ್ನು ಕಂಡು ಮೋಹಗೊಂಡು, ಅವಳಿಂದ ಸಂತಾನವನ್ನು ಪಡಯಲೇಬೇಕೆಂಬ ಇಚ್ಛೆಯನ್ನು ಹೊಂದಿದ್ದನು.

ಆದರೆ ಹರ್ಯಶ್ವನ ಬಳಿ ಆ ಲಕ್ಷಣಗಳುಳ್ಳ ಕುದುರೆಗಳು ಕೇವಲ ಎರಡು ನೂರು ಮಾತ್ರವಿದ್ದವು. ಹಾಗಾಗಿ ಗಾಲವ ಅಪೇಕ್ಷಿಸಿದ ಎಂಟುನೂರು ಕುದುರೆಗಳನ್ನು ಕೊಡಲು ತನಗೆ ಸಾಧ್ಯವಿಲ್ಲ ಎಂಬುದು ಗೊತ್ತಿದ್ದರೂ, ಹರ್ಯಶ್ವನು ಸರ್ವಲಕ್ಷಣ ಸಂಪನ್ನೆಯಾದ ಕನ್ಯೆಯಲ್ಲಿ ಒಂದು ಶ್ರೇಷ್ಠ ಸಂತಾನವನ್ನು ಪಡೆಯುವ ತನ್ನ ಇಚ್ಛೆಯನ್ನು ಪೂರ್ಣಮಾಡಿಕೊಡಬೇಕೆಂದು ಗಾಲವನನ್ನು ಕೇಳಿಕೊಂಡನು. ಇದರಿಂದ ಗಾಲವನು, ಹರ್ಯಶ್ವನು ಕೊಡುವ ಇನ್ನೂರು ಕುದುರೆಗಳಿಗೆ ಕನ್ಯೆಯನ್ನು ಒಪ್ಪಿಸಿದರೆ ಉಳಿದ ಆರುನೂರು ಕುದುರೆಗಳನ್ನು ಹೇಗೆ ಸಂಪಾದಿಸುವುದೆಂದು ಯೋಚಿಸುತ್ತಿದ್ದನು.

ಹೀಗೆ ಯೋಚಿಸುತ್ತಿದ್ದ ಗಾಲಲವನನ್ನು ನೋಡಿ, ರಾಜನ ಮಾತುಗಳನ್ನು ಗಾಲವನೊಡನೆಯೇ ಇದ್ದು ಕೇಳುತ್ತಿದ್ದ ಮಾಧವಿಯು ಅವನೊಡನೆ ಈ ರೀತಿ ಹೇಳಿದಳು: "ಬ್ರಾಹ್ಮಣೋತ್ತಮ! ರಾಜನು ಹೇಳಿದುದಕ್ಕೆ ನೀನು ಸ್ವಲ್ಪವಾದರೂ

ಚಿಂತಿಸುವ ಕಾರಣವಿಲ್ಲ. ನನಗೆ ಒಬ್ಬಾನೊಬ್ಬ ಬ್ರಹ್ಮವಾದಿಯು ಒಂದು ಶ್ರೇಷ್ಠವಾದ ವರವನ್ನು ಕೊಟ್ಟಿದ್ದಾನೆ. **'ಪ್ರತಿಪ್ರಸವದ ಅಂತ್ಯದಲ್ಲಿಯೂ ನೀನು ಕನ್ಯೆಯಾಗಿಯೇ ಉಳಿಯುವೆ'** ಎಂಬುದೇ ಆ ವರವಾಗಿದೆ. ಆದುದರಿಂದ ಎರಡು ನೂರು ಕುದುರೆಗಳನ್ನು ಪಡೆದುಕೊಂಡು ರಾಜನಿಗೆ ನನ್ನನ್ನು ಕೊಡು. ರಾಜನ ಅಪೇಕ್ಷೆಯನ್ನು ಪೂರೈಸಿಕೊಟ್ಟು ಪುನಃ ಬ್ರಹ್ಮವಾದಿಯ ವರದಂತೆ ಕನ್ಯಾವಸ್ಥೆಯನ್ನು ಪಡೆದು ನಿನ್ನೊಡನೆ ಬರುವೆನು. ಇದೇ ರೀತಿಯಲ್ಲಿ ನಾಲ್ವರು ರಾಜರಿಂದ ನೀನು ಎಂಟುನೂರು ಕುದುರೆಗಳನ್ನು ಪಡೆಯಬಹುದಾಗಿದೆ. ನನಗೂ ನಾಲ್ವರು ರಾಜರಿಂದ ಮಕ್ಕಳು ಹುಟ್ಟುತ್ತಾರೆ. ನೀನು ಈ ರೀತಿಯಾಗಿ ಗುರುದಕ್ಷಿಣೆಯನ್ನು ಸಂಗ್ರಹಮಾಡು. ಇಷ್ಟು ಮಾತ್ರ ನನ್ನ ಬುದ್ಧಿಗೆ ತೋಚುತ್ತಿದೆ. ಇಷ್ಟರ ಮೇಲೆ ನೀನು ಹೇಗೆ ಮಾಡುವುದು ಯುಕ್ತವೆಂದು ಭಾವಿಸುವೆಯೋ ಹಾಗೆಯೇ ಮಾಡು".

ಮಾಧವಿಯು ಹೇಳಿದುದನ್ನು ಕೇಳಿದನಂತರ ಗಾಲವನು ಹರ್ಯಶ್ವನಿಂದ ಆ ಎರಡುನೂರು ಕುದುರೆಗಳನ್ನು ಕನ್ಯಾಶುಲ್ಕವಾಗಿ ಪಡೆದು ಮಾಧವಿಯನ್ನು ಪರಿಗ್ರಹಿಸುವಂತೆ ಹರ್ಯಶ್ವನಿಗೆ ತಿಳಿಸಿದನು. ಗಾಲವನ ಮಾತನ್ನು ಕೇಳಿ ಹರ್ಯಶ್ವನು ಗಾಲವನನ್ನು ಅಭಿನಂದಿಸಿ, ಮಾಧವಿಯನ್ನು ಪರಿಗ್ರಹಿಸಿ ತಾನಭಿಲಷಿಸಿದ ಪುತ್ರನನ್ನು ಮಾಧವಿಯಲ್ಲಿ ಪಡೆದನು. ಹರ್ಯಶ್ವನಿಗೆ ಮಾಧವಿಯಲ್ಲಿ ಹುಟ್ಟಿದ ಆ ಪುತ್ರನು **ವಸುಮನಸ**ನೆಂಬ ಹೆಸರಿನಿಂದ ಪ್ರಖ್ಯಾತನಾದನು.

ಸ್ವಲ್ಪ ಕಾಲಾನಂತರದಲ್ಲಿ ಗಾಲವನು ಅಯೋಧ್ಯಾಪಟ್ಟಣಕ್ಕೆ ಆಗಮಿಸಿ, ಮಾಧವಿಯನ್ನು ಗುರುದಕ್ಷಿಣೆಯ ಭಿಕ್ಷೆಗಾಗಿ ಬೇರೊಬ್ಬ ರಾಜನಲ್ಲಿಗೆ ಕರೆದುಕೊಂಡು ಹೋಗಲು ಕಾಲವು ಸನ್ನಿಹಿತವಾಗಿರುವ ವಿಷಯವನ್ನು ಹರ್ಯಶ್ವನಿಗೆ ಹೇಳಿದನು. ಸತ್ಯನಿಷ್ಠನಾದ ಹರ್ಯಶ್ವನು ಕೊಟ್ಟ ಮಾತಿನಂತೆ ಮಾಧವಿಯನ್ನು ಗಾಲವನಿಗೆ ಒಪ್ಪಿಸಿಬಿಟ್ಟನು. ತನ್ನ ಕರ್ತವ್ಯವೇನೆಂಬುದನ್ನು ಚೆನ್ನಾಗಿ ಅರಿತುಕೊಂಡಿದ್ದ ಮಾಧವಿ ಬ್ರಹ್ಮವಾದಿಯ ವರವನ್ನು ಸ್ಮರಿಸಿ, ಸ್ವೇಚ್ಛೆಯಿಂದ ಪುನಃ ಕೌಮಾರ್ಯವನ್ನು ಪಡೆದುಕೊಂಡವಳಾಗಿ ಗಾಲವನನ್ನೇ ಅನುಸರಿಸಿ ಹೊರಟಳು. ಗಾಲವನು 'ಕುದುರೆಗಳು ನಿನ್ನಲ್ಲಿಯೇ ಇರಲಿ' ಎಂಬುದಾಗಿ ಹರ್ಯಶ್ವನಿಗೆ ಹೇಳಿ ಕನ್ಯೆಯೊಡನೆ ಪ್ರಜೇಶ್ವರನಾದ ದಿವೋದಾಸನ ಸಮೀಪಕ್ಕೆ ಪ್ರಯಾಣ ಮಾಡಿದನು.

ದಿವೋದಾಸನು ಕಾಶೀರಾಜ್ಯದ ಅಧಿಪತಿಯಾಗಿದ್ದು, ಭೀಮಸೇನನ ಮಗನಾಗಿದ್ದನು. ಈತ ಮಹಾಪರಾಕ್ರಮಿ, ಧಾರ್ಮಿಕ, ಸಂಯಮಿಯೂ,

ಸತ್ಯಪಾರಾಯಣನೂ ಆಗಿದ್ದನು. ಗಾಲವ ಮತ್ತು ಮಾಧವಿಯಿಬ್ಬರೂ ದಿವೋದಾಸನ ಅರಮನೆಗೆ ಹೋದರು. ಯಥಾನ್ಯಾಯವಾಗಿ ದಿವೋದಾಸನು ಗಾಲವನನ್ನು ಸತ್ಕರಿಸಿದನು. ಹಿಂದಿನಂತೆಯೇ ಗಾಲವನು ಕನ್ಯಾಶುಲ್ಕವನ್ನು ಕೊಟ್ಟು ಮಾಧವಿಯನ್ನು ಪರಿಗ್ರಹಿಸುವಂತೆ ದಿವೋದಾಸನನ್ನು ಪ್ರಚೋದಿಸಿದನು. ಆದರೆ ದಿವೋದಾಸನು ಈ ಎಲ್ಲ ವಿಷಯಗಳನ್ನೂ ಹಿಂದೆಯೇ ಕೇಳಿರುವುದಾಗಿ, ಹಾಗೂ ಗಾಲವನು ಇತರ ಅನೇಕ ರಾಜರನ್ನು ಬಿಟ್ಟು ತನ್ನ ಬಳಿಗೇ ಆಗಮಿಸಿದ್ದು ತಾನು ಬಹುಮಾನಿತನಾಗಿದ್ದೇನೆಂದು ತಿಳಿದಿದ್ದನು. ಹರ್ಯಶ್ವನ ಹತ್ತಿರವಿದ್ದಷ್ಟೇ ದಿವೋದಾಸನ ಬಳಿಯು ಆ ವಿಶೇಷ ಕುದುರೆಗಳು ಇನ್ನೂರು ಮಾತ್ರ ಇದ್ದವು. ಅವುಗಳನ್ನೇ ಕನ್ಯಾ ಶುಲ್ಕದ ರೂಪವಾಗಿ ಕೊಟ್ಟು ಅವಳಲ್ಲಿ ಒಬ್ಬ ಸುಪುತ್ರನನ್ನು ಪಡೆದುಕೊಳ್ಳುತ್ತೇನೆಂದು ದಿವೋದಾಸನು ತನ್ನ ಅಭಿಲಾಷೆಯನ್ನು ಗಾಲವನಿಗೆ ತಿಳಿಸಿದನು.

ದಿವೋದಾಸನ ಮಾತುಗಳನ್ನು ಕೇಳಿದ ನಂತರ ಗಾಲವನು ಹಾಗೆಯೇ ಆಗಲೆಂದು ಹೇಳಿ ಮಹೀಪತಿಗೆ ಮಾಧವಿಯನ್ನು ಪ್ರಧಾನ ಮಾಡಿದನು. ವಿಧಿಪೂರ್ವಕವಾಗಿ ಗಾಲವನಿಂದ ಅ ಕನ್ಯೆಯನ್ನು ದಿವೋದಾಸನು ಪರಿಗ್ರಹಿಸಿದನು. ಹಾಗಾಗಿ ದಿವೋದಾಸನಿಗೆ ಮಾಧವಿಯಲ್ಲಿ **ಪ್ರತರ್ದನನೆಂಬ** ಪುತ್ರನು ಹುಟ್ಟಿದನು. ಕಾಲವು ಸನ್ನಿಹಿತವಾಗಲು ಪುನಃ ಭಗವಾನ್ ಗಾಲವನು ದಿವೋದಾಸನ ಬಳಿಗೆ ಬಂದು ಕನ್ಯೆಯನ್ನು ಹಿಂದಿರುಗಿಸಬೇಕೆಂದೂ, ಕನ್ಯಾಶುಲ್ಕವಾಗಿ ಕೊಟ್ಟಿರುವ ಕುದುರೆಗಳು ನಿನ್ನಲ್ಲಿಯೇ ಇರಲಿ ಎಂದೂ, ಉಳಿದ ಕುದುರೆಗಳಿಗಾಗಿ ತಾನೀಗ ಬೇರೊಬ್ಬ ರಾಜನ ಸಮೀಪಕ್ಕೆ ಹೋಗಬೇಕೆಂದು ಹೇಳಿದನು. ಆಗ ಧರ್ಮಾತ್ಮನಾದ ದಿವೋದಾಸನು ಸತ್ಯಪ್ರತಿಜ್ಞನಾಗಿದ್ದು ತಾನು ಕೊಟ್ಟ ಮಾತಿನಂತೆ ಗಾಲವನೊಡನೆ ಕನ್ಯೆಯನ್ನು ಕಳುಹಿಸಿಕೊಟ್ಟನು. ಸತ್ಯಪಾಲನಾತತ್ಪರಳಾದ ಯಶಸ್ವಿನಿಯಾದ ಮಾಧವಿಯು ಹಿಂದಿನಂತೆಯೇ ಆಗಲೂ ದಿವೋದಾಸನ ರಾಜ್ಯಲಕ್ಷ್ಮಿಯನ್ನೂ ಪರಿತ್ಯಜಿಸಿ ಪುನಃ ಕನ್ಯಾವಸ್ಥೆಯನ್ನು ಬ್ರಹ್ಮವಾದಿಯ ಅನುಗ್ರಹದಿಂದ ಪಡೆದುಕೊಂಡು ವಿಪ್ರೋತ್ತಮನಾದ ಗಾಲವನನ್ನು ಅನುಸರಿಸಿ ಹೊರಟಳು.

ಗಾಲವನು ಸ್ವಕಾರ್ಯದ ಸಿದ್ಧಿಯ ವಿಷಯವಾಗಿ ಚಿಂತಿಸುತ್ತಲೇ ಪ್ರಯಾಣ ಮಾಡುತ್ತಾ **ಉಶೀನರನನ್ನು** ನೋಡುವ ಸಲುವಾಗಿ **ಭೋಜನಗರಿಗೆ** ಹೋದನು. ಸತ್ಯವಿಕ್ರಮನಾದ ಉಶೀನರನ ಬಳಿಗೆ ಹೋದ ಗಾಲವನು ಅವನೊಡನೆ, 'ಅಪುತ್ರವಂತನಾದ ನೀನು ಈ ಕನ್ಯೆಯಿಂದ ಸೂರ್ಯ–ಚಂದ್ರರಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುವ ಇಬ್ಬರು ಮಕ್ಕಳನ್ನು ಇವಳಲ್ಲಿ ಪಡೆದುಕೊ ಎಂದು, ಆದರೆ

ಇವಳನ್ನು ಪಡೆದುಕೊಳ್ಳಬೇಕಾದರೆ ಕನ್ಯಾಶುಲ್ಕವಾಗಿ ಚಂದ್ರನಿಗೆ ಸಮಾನವಾದ ವರ್ಚಸ್ಸುಳ್ಳ ಶರೀರ ಕಾಂತಿಯಿಂದ ಕೂಡಿದ ಮತ್ತು ಒಂದು ಕಿವಿ ಮಾತ್ರವೇ ಕಪ್ಪಾಗಿರುವ ನಾಲ್ಕು ನೂರು ಕುದುರೆಗಳನ್ನು ನನಗೆ ಕೊಡಬೇಕು' ಎಂದು ಹೇಳಿದನು.

ಗಾಲವನ ಮಾತುಗಳನ್ನು ಕೇಳಿದ ನರಾಧಿಪನಾದ ಉಶೀನರನು ಈ ಕನ್ಯೆಯಿಂದ ಮಕ್ಕಳನ್ನು ಪಡೆಯಲು ತವಕಿಸುತ್ತಿದ್ದನು. ಆದರೆ ಉಶೀನರನ ಬಳಿಯೂ ಅಂತಹ ಕುದುರೆಗಳು ಎರಡುನೂರು ಮಾತ್ರವೇ ಇದ್ದು, ಅವುಗಳನ್ನು ಕನ್ಯಾಶುಲ್ಕವಾಗಿ ಕೊಟ್ಟು ಈ ಕನ್ಯೆಯಲ್ಲಿ ನಾನು ಒಬ್ಬನೇ ಒಬ್ಬ ಮಗನನ್ನು ಪಡೆದುಕೊಳ್ಳುತ್ತೇನೆಂದು ಹೇಳಿದನು. ಹಾಗೆಯೇ ಹಿಂದಿನ ಇಬ್ಬರು ರಾಜರು ಹೇಗೆ ನಡೆದುಕೊಂಡರೋ ಹಾಗೆಯೇ ನಾನು ನಡೆದುಕೊಳ್ಳುತ್ತೇನೆಂದನು. ಜೊತೆಗೆ ಉಳಿದ ಎರಡು ನೂರು ಕುದುರೆಗಳ ಮೌಲ್ಯವನ್ನಾದರೂ ಕೊಟ್ಟು ನಾನಿವಳಲ್ಲಿ ಇಬ್ಬರು ಮಕ್ಕಳನ್ನೇ ಪಡೆಯಬಹುದಾಗಿದ್ದಿತು. ಆದರೆ, ನನ್ನಲ್ಲಿರುವ ಐಶ್ವರ್ಯ, ಬೊಕ್ಕಸದ ಹಣವನ್ನು ಆತ್ಮಹಿತಕ್ಕಾಗಿ ಆತ್ಮೋಪಭೋಗಕ್ಕಾಗಿ ವೆಚ್ಚ ಮಾಡದೆ, ನನ್ನ ದೇಶದ ಪ್ರಜೆಗಳ ಹಿತಕ್ಕಾಗಿಯೇ ವೆಚ್ಚಮಾಡುವುದು ನನ್ನ ಕರ್ತವ್ಯವಾಗಿದೆ ಎಂಬುದಾಗಿ ಉಶೀನರನು ಗಾಲವನಿಗೆ ಹೇಳಿದನು.

ಹೀಗೆ ಪದೇ – ಪದೇ ನ್ಯಾಯಯುಕ್ತವಾದ ಮಾತುಗಳನ್ನೇ ಆಡುತ್ತಿದ್ದ ಉಶೀನರನನ್ನು ದ್ವಿಜಶ್ರೇಷ್ಠನಾದ ಗಾಲವನು ಬಹುವಾಗಿ ಪ್ರಶಂಸಿಸಿದನು. ಉಸೀನರನಿಗೆ ಕನ್ಯೆಯನ್ನು ಪ್ರಧಾನ ಮಾಡಿ ಗಾಲವನು ಅರಣ್ಯಕ್ಕೆ ತೆರಳಿದನು. ಪುಣ್ಯಮಾಡಿದವನು ಸಂಪತ್ತನ್ನು ಪಡೆಯುವಂತೆ ಉಶೀನರನು ಮಾಧವಿಯನ್ನು ಪಡೆದುಕೊಂಡು ಅವಳೊಡನೆ ಆನಂದದಿಂದ ಕಾಲಕಳೆಯುತ್ತಿದ್ದನು. ಕಾಲಾನುಕ್ರಮದಲ್ಲಿ ಉಶೀನರನಿಗೆ ಮಾಧವಿಯಲ್ಲಿ ಒಬ್ಬ ಮಗನು ಹುಟ್ಟಿದನು. ಅವನು ಬಾಲಸೂರ್ಯನಂತೆ ಹೆಚ್ಚು ಪ್ರಕಾಶಮಾನವಾಗಿ **ಶಿಬಿ** ಎಂಬ ಹೆಸರಿನಿಂದ ವಿಶ್ವವಿಖ್ಯಾತನಾದನು.

ಉಶೀನರನಿಗೆ ಮಾಧವಿಯಲ್ಲಿ ಪುತ್ರನೊಬ್ಬನು ಹುಟ್ಟಿದ ಸಮಾಚಾರವು ತಿಳಿದೊಡನೆಯೇ ಗಾಲವರು ರಾಜನ ಆಸ್ಥಾನಕ್ಕೆ ಆಗಿಮಿಸಿ ಮಾಧವಿಯನ್ನು ಉಶೀನರನಿಂದ ಪಡೆದುಕೊಂಡು ಮುಂದೆ ಪ್ರಯಾಣ ಮಾಡುತ್ತಿದ್ದಾಗ ಗರುಡನನ್ನು ಕಂಡನು. ಗಾಲವನು ತನ್ನ ಗರುದಕ್ಷಿಣೆಯ ಕಾರ್ಯದಲ್ಲಿ ನಾಲ್ಕನೆಯ ಒಂದು ಭಾಗ ಕಾರ್ಯವು ಮಾತ್ರ ಉಳಿದಿದ್ದು, ಅದನ್ನು ಈಗ ಪೂರ್ಣಗೊಳಿಸಬೇಕಾಗಿರುವ ವಿಚಾರವನ್ನು ತಿಳಿಸಿದನು.

ವಾಗ್ಮಿಗಳಲ್ಲಿ ಶ್ರೇಷ್ಠನಾದ ಗರುಡನು ಗಾಲವನನ್ನು ಕುರಿತು, ಉಳಿದಿರುವ ಒಂದು ಭಾಗಕ್ಕಾಗಿ (ಎರಡು ನೂರು ಕುದುರೆಗಳಿಗಾಗಿ) ನೀನು ಪ್ರಯತ್ನ ಪಡಬೇಡ. ಅದು ಖಂಡಿತವಾಗಿಯೂ ಸಫಲವಾಗತಕ್ಕುದಲ್ಲ ಎಂದು ಹೇಳಿ ಅದರ ಕಾರಣವನ್ನು ಹೇಳುವನು. ಹಿಂದೆ **ಕನ್ಯಾಕುಬ್ಜದೇಶ**ದಲ್ಲಿ **ಗಾಧಿ** ಎಂಬ ರಾಜನಿದ್ದನು. ಅವನಿಗೆ **ಸತ್ಯವತೀ** ಎಂಬ ಮಗಳಿದ್ದಳು. ಅವಳನ್ನು ಪತ್ನಿಯನ್ನಾಗಿ ಮಾಡಿಕೊಳ್ಳಲು **ಋಚೀಕ**ನು ಗಾಧಿಯನ್ನು ಪ್ರಾರ್ಥಿಸಿದನು. ಆಗ ಗಾಧಿಯು ಋಚೀಕನಿಗೆ ಹೀಗೆಂದು ಹೇಳಿದನು. "ಭಗವನ್! ಚಂದ್ರನಿಗೆ ಸಮಾನವಾದ ಕಾಂತಿಯಿಂದ ಕೂಡಿರುವ, ಒಂದು ಕಿವಿಯು ಮಾತ್ರ ಕಪ್ಪಾಗಿರುವ ಒಂದು ಸಾವಿರ ಕುದುರೆಗಳನ್ನು ಕನ್ಯಾ ಶುಲ್ಕವಾಗಿ ಕೊಟ್ಟು ಈ ನನ್ನ ಮಗಳನ್ನು ನೀನು ಮದುವೆಮಾಡಿಕೊಳ್ಳಬಹುದು". ಋಚೀಕನು ಹಾಗೆಯೇ ಆಗಲೆಂದು ಹೇಳಿ ವರುಣನ ಲೋಕಕ್ಕೆ ಹೋಗಿ ಅಲ್ಲಿದ್ದ ಅಶ್ವತೀರ್ಥದಿಂದ ಅಂತಹ ಲಕ್ಷಣಗಳಿದ್ದ ಸಾವಿರ ಕುದುರೆಗಳನ್ನು ತಂದು ಗಾಧಿಗೆ ಕೊಟ್ಟನು. ಮುಂದೆ ಗಾಧಿಯು ಪುಂಡರೀಕವೆಂಬ ಯಜ್ಞವನ್ನು ಮಾಡಿ ಆ ಕುದುರೆಗಳನ್ನು ಬ್ರಾಹ್ಮಣರಿಗೆ ದಕ್ಷಿಣಾರೂಪವಾಗಿ ಕೊಟ್ಟುಬಿಟ್ಟನು. ಅದೇ ಸಮಯದಲ್ಲಿ ಮೂವರು ರಾಜರು ಒಬ್ಬೊಬ್ಬರೂ ಎರಡೆರಡು ನೂರರಂತೆ ಬ್ರಾಹ್ಮಣರಿಂದ ಕುದುರೆಗಳನ್ನು ಕೊಂಡುಕೊಂಡರು. ಉಳಿದ ನಾಲ್ಕುನೂರು ಕುದುರೆಗಳು ವಿತಸ್ತಾನದಿಯನ್ನು ದಾಟುತ್ತಿರುವಾಗ ಮಧ್ಯಮಾರ್ಗದಲ್ಲಿ ನದಿಯ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಹೋದುವು.

ಹಾಗಾಗಿ ಗಾಲವ ಈ ಆರುನೂರು ಕುದುರೆಗಳನ್ನು ಬಿಟ್ಟು ಇದೇ ಲಕ್ಷಣವಿರುವ ಕುದುರೆಗಳು ಖಂಡಿತವಾಗಿಯೂ ಸಿಕ್ಕುವುದಿಲ್ಲ. ಇಲ್ಲದಿರುವ ವಸ್ತುವನ್ನು ಹೊಂದಲು ಎಲ್ಲಿಯೂ ಸಾಧ್ಯವಿಲ್ಲ ಇದರಿಂದಾಗಿ ನಿನ್ನ ಮುಂದಿನ ಪ್ರಯತ್ನವು ಖಂಡಿತವಾಗಿಯೂ ವ್ಯರ್ಥವಾಗುವುದು. ಆದರೆ ನೀನು ಇದರಿಂದ ನಿರಾಶನಾಗುವ ಕಾರಣವಿಲ್ಲ. ಎರಡುನೂರು ಕುದುರೆಗಳಿಗೆ ಇವಳಲ್ಲಿ ಒಬ್ಬ ಮಗನನ್ನು ಪಡೆದುಕೊಳ್ಳಬಹುದೆಂದು ಕನ್ಯಾಶುಲ್ಕವನ್ನು ವಿಧಿಸಿದ್ದಾಗಿದೆ. ಆದುದರಿಂದ ಈಗ ಇವಳ ಮೂಲಕವಾಗಿ ಮೂವರಿಂದ ಲಬ್ಧವಾಗಿರುವ ಆರುನೂರು ಕುದುರೆಗಳನ್ನೂ ಮತ್ತು ಕನ್ಯೆಯನ್ನೂ ವಿಶ್ವಾಮಿತ್ರನಿಗೇ ಒಪ್ಪಿಸಿಬಿಡು. ಬಳಿಕ ನೀನು ದುಗುಡವನ್ನು ತೊರೆದು ಕೃತಕೃತ್ಯನಾಗುವೆ, ಎಂದು ಗರುಡನು ಗಾಲವನಿಗೆ ಸಲಹೆ ನೀಡಿದನು.

ಗಾಲವನಿಗೂ ಬೇರೆ ಯಾವ ಮಾರ್ಗವೂ ತೋರಲಿಲ್ಲ ಹಾಗಾಗಿ ಗರುಡನು ಹೇಳಿದುದಕ್ಕೆ 'ತಥಾಸ್ತು' ಎಂದು ಒಪ್ಪಿಗೆಯನ್ನಿತ್ತು, ಗರುಡನನ್ನೂ ಜೊತೆಯಲ್ಲಿಯೇ

ಕರೆದುಕೊಂಡು, ಮೂವರು ರಾಜರಿಂದ ಆರು ನೂರು ಕುದುರೆಗಳನ್ನೂ ಸಂಗ್ರಹಿಸಿಕೊಂಡವನಾಗಿ ಕನ್ಯಾಸಮೇತನಾಗಿ ವಿಶ್ವಾಮಿತ್ರನ ಬಳಿಗೆ ಹೋದನು.

ವಿಶ್ವಾಮಿತ್ರನ ಬಳಿಬಂದ ಗಾಲವನು ತಾನು ಇದುವರೆಗೂ ಗುರುದಕ್ಷಿಣೆಗಾಗಿ ಸಂಗ್ರಹಿಸಿದ ಆರುನೂರು ಕುದುರೆಗಳನ್ನು ತನ್ನ ಗುರುಗಳಾದ ವಿಶ್ವಾಮಿತ್ರನಿಗೆ ನೀಡಿ, ಉಳಿದ ಇನ್ನೂರು ಕುದುರೆಗಳಿಗೆ ಪ್ರತಿಯಾಗಿ ಕನ್ಯೆಯನ್ನು ಪರಿಗ್ರಹಿಸಬೇಕೆಂದು ಕೇಳಿಕೊಂಡನು. ಯಯಾತಿ ಮಗಳಾದ ಇವಳಲ್ಲಿ ಮೂವರು ರಾಜರ್ಷಿಗಳು ಮೂವರು ಧರ್ಮಾತ್ಮರಾದ ಮಕ್ಕಳನ್ನು ಪಡೆದು ಪ್ರತಿಯಾಗಿ ತಲಾ ಇನ್ನೂರು ಕುದುರೆಗಳನ್ನು ಕೊಟ್ಟಿದ್ದು, ವಿಶ್ವಾಮಿತ್ರನು ಇವಳಲ್ಲಿ ನಾಲ್ಕನೆಯ ನರೋತ್ತಮನನ್ನು ಪಡೆದುಕೊಳ್ಳುವುದರಿಂದ ಆತನಿಗೆ ಎಂಟುನೂರು ಕುದುರೆಗಳನ್ನು ಪೂರ್ಣವಾಗಿ ಕೊಟ್ಟಂತಾಗಿ, ತಾನು ಗುರುದಕ್ಷಿಣೆಯ ಋಣದಿಂದ ಮುಕ್ತನಾಗಿ ತಪಸ್ಸು ಮಾಡುತ್ತೇನೆಂದು ಗಾಲವ ಹೇಳಿದನು.

ಗಾಲವನ ಮಾತುಗಳನ್ನು ಆಲಿಸುತ್ತಾ, ಆತನ ಜೊತೆಗಿದ್ದ ಪರಮಸುಂದರಿಯಾದ ಕನ್ಯೆಯನ್ನು ನೋಡಿದ ವಿಶ್ವಾಮಿತ್ರನು ಗಾಲವನನ್ನು ಕುರಿತು ಈ ಮೊದಲೇ ಇವಳನ್ನು ನನ್ನ ಬಳಿಗೆ ಕರೆತಂದಿದ್ದರೆ ನಾನೇ ಇವಳಿಂದ ವಂಶಪ್ರವರ್ತಕರಾದ ನಾಲ್ವರು ಮಕ್ಕಳನ್ನು ಪಡೆದುಕೊಳ್ಳಬಹುದಿತ್ತು. ಆದರೂ ಒಬ್ಬನೇ ಒಬ್ಬ ಪುತ್ರನಿಗಾದರೂ ನಾನು ಈ ಕನ್ಯೆಯನ್ನು ಪರಿಗ್ರಹಿಸುತ್ತೇನೆ. ಆರುನೂರು ಕುದುರೆಗಳು ಆಶ್ರಮಕ್ಕೆ ಬರಲಿ ಎಂಬುದಾಗಿ ಒಪ್ಪಿಗೆ ನೀಡಿದನು.

ಹಾಗಾಗಿ ವಿಶ್ವಾಮಿತ್ರನು ಎರಡು ನೂರು ಕುದುರೆಗಳ ಕನ್ಯಾಶುಲ್ಕಕ್ಕೆ ವಿನಿಮಯರೂಪನಾಗಿ ಮಾಧವಿಯನ್ನೇ ಪರಿಗ್ರಹಿಸಿದನು. ಅನೇಕ ದಿನಗಳವರೆಗೆ ಅವಳೊಡನೆ ಅತ್ಯಾನಂದದಿಂದ ರಮಿಸುತ್ತಿದ್ದು, **ಅಷ್ಟಕ**ನೆಂಬ ಪುತ್ರನನ್ನು ವಿಶ್ವಾಮಿತ್ರನು ಮಾಧವಿಯಲ್ಲಿ ಪಡೆದನು. ಅಷ್ಟಕನನ್ನು ಧರ್ಮ, ಅರ್ಥ ಮತ್ತು ಕುದುರೆಗಳಿಂದಲೂ ಸಂಪನ್ನನನ್ನಾಗಿ ಮಾಡಿದ ವಿಶ್ವಾಮಿತ್ರನು, ಗಾಲವನೊಡನೆ ಮಾಡಿಕೊಂಡಿದ್ದ ನಿಬಂಧನೆಯಂತೆ ಮಗನು ಹುಟ್ಟುತ್ತಲೇ ಮಾಧವಿಯನ್ನು ಗಾಲವನಿಗೆ ವಹಿಸಿಕೊಟ್ಟು ತಪಸ್ಸುಮಾಡಲು ಅರಣ್ಯಕ್ಕೆ ಹೊರಟುಹೋದನು.

ಮಾಧವಿಯು ಬ್ರಹ್ಮವಾದಿಯ ವರಪ್ರಸಾದದಿಂದಾಗಿ ನಾಲ್ವರು ರಾಜರಿಂದ ನಾಲ್ವರು ಮಕ್ಕಳನ್ನು ಪಡೆದನಂತರವೂ ಕನ್ಯಾವಸ್ಥೆಯನ್ನೇ ಪುನಃ ಪಡೆದುಕೊಂಡಿದ್ದಳು. ಹಾಗಾಗಿ ಅವಳಲ್ಲಿ ಪುರುಷಸ್ಪರ್ಶ ದೋಷವಿರಲಿಲ್ಲ. ವಿವಾಹಯೋಗ್ಯಳಾಗಿದ್ದಳು ಎಂಬ

ಕಾರಣಗಳಿಂದಾಗಿ ಯಯಾತಿಯು ಮಾಧವಿಗೆ ಸ್ವಯಂವರವನ್ನು ಮಾಡಬೇಕೆಂದು ಅಭಿಲಾಷಿಸಿ ಗಂಗಾ-ಯಮುನೆಯರ ಸಂಗಮ ಸ್ಥಳದಲ್ಲಿ ಪ್ರಯಾಗದಲ್ಲಿ ಸ್ವಯಂವರವನ್ನು ಏರ್ಪಡಿಸಿದನು. ಮಾಧವಿಯ ಆ ಸ್ವಯಂವರಕ್ಕೆ ಅನೇಕ ರಾಜರು, ನಾಗ, ಯಕ್ಷ, ಮನುಷ್ಯರೂ ಗಂಧರ್ವರೂ, ಮೃಗ, ಪಕ್ಷಿಗಳೂ, ಬ್ರಹ್ಮರ್ಷಿಗಳೂ ಆಗಮಿಸಿದ್ದರು. ಸಕಲರೂ ಉಪಸ್ಥಿತರಾಗಿದ್ದ ಆ ಸಮಯದಲ್ಲಿ ಮಾಧವಿಯು ಸ್ವಯಂವರಮಾಲೆಯನ್ನು ಹಿಡಿದು ಹೊರಟಳು. ಯದು-ಪುರುಗಳಿಬ್ಬರೂ ತಮ್ಮ ಸಹೋದರಿ ಮಾಧವಿಗೆ ಅನುಕ್ರಮವಾಗಿ ಅಲ್ಲಿ ನೆರೆದಿದ್ದವರೆಲ್ಲರನ್ನೂ ಪರಿಚಯ ಮಾಡಿಸಿಕೊಡುತ್ತಿದ್ದರು. ಆದರೆ ಮಾಧವಿಯು ಎಲ್ಲರನ್ನೂ ಉಪೇಕ್ಷಿಸಿ ಆ ತಪೋವನವನ್ನೇ ತನ್ನ ಪತಿಯನ್ನಾಗಿ ವರಿಸಿದಳು.

ಮಾಧವಿಯ ಆಶಯವನ್ನು ಯಾರೂ ವಿರೋಧಿಸಲಿಲ್ಲ. ಏಕೆಂದರೆ, ಇಷ್ಟಬಂದವನನ್ನು ವರಿಸುವ ಅಧಿಕಾರವನ್ನು ಸ್ವಯಂವರದ ರೂಪದಲ್ಲಿ ನೀಡಿದ್ದರಿಂದ ಯಯಾತಿಸುತೆಯು ವನರಾಜನ (ಅಧಿದೇವತೆ) ಕೊರಳಿಗೆ ಮಾಲೆಯನ್ನು ಹಾಕಿ ರಥದಿಂದಿಳಿದು ತನ್ನ ಬಂಧುಗಳೆಲ್ಲರಿಗೂ ನಮಸ್ಕರಿಸಿ, ಪುಣ್ಯತಮವಾದ ವನವನ್ನು ಸೇರಿ ತಪಸ್ಸು ಮಾಡಲು ಮುಂದಾದಳು. ಉಪವಾಸಾದಿಗಳಿಂದಲೂ, ಅನೇಕ ವಿಧವಾದ ದೀಕ್ಷೆಗಳಿಂದಲೂ ನಿಯಮಗಳಿಂದಲೂ ಮನಸ್ಸನ್ನು ನಿಶ್ಚಲವನ್ನಾಗಿ ಮಾಡಿಕೊಂಡು ಶುದ್ಧಾಂತಃಕರಣಳಾಗಿ ಅರಣ್ಯದಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದ ಮಾಧವಿಯು ಬ್ರಹ್ಮಚರ್ಯದಿಂದ ಕೂಡಿದ ಮಹಾಧರ್ಮವನ್ನು ಆಚರಿಸುತ್ತಿದ್ದಳು.

ಹೀಗೆ ಮಾಧವಿಯ ಕತೆಯು 'ಮಹಾಭಾರತ'ದಲ್ಲಿ ಬರುವ ಒಂದು ಉಪಕತೆಯಾಗಿದ್ದು, ಇಂಥ ಪುರಾಣದ ವಸ್ತುವನ್ನು ಕಾದಂಬರಿಯ ವಸ್ತುವನ್ನಾಗಿಸಿ ಕೊಂಡು, ಸ್ತ್ರೀವಾದಿ ನೆಲೆಯಿಂದ ವಿಶ್ಲೇಷಿಸಿರುವ ಅನುಪಮಾ ನಿರಂಜನರ 'ಮಾಧವಿ' ಮತ್ತು ಎಂ.ಎಸ್.ವೇದಾರವರ 'ಕಪ್ಪುಕಿವಿಯ ಬಿಳಿಯ ಕುದುರೆಗಳು' ಈ ಎರಡೂ ಕಾದಂಬರಿಗಳನ್ನು ಅಭ್ಯಸಿಸುವ ಮೂಲಕ ಇತಿಹಾಸ (ಪುರಾಣ) ಮತ್ತು ವರ್ತಮಾನದ ಬದುಕಿನ ಹಲವಾರು ಒಳವಿವರಗಳನ್ನು ತಿಳಿಯೋಣ.

ಅಧ್ಯಾಯ – ೨

'ಮಾಧವಿ' : ವಸ್ತು ಮತ್ತು ಪಾತ್ರ ನಿರ್ವಹಣೆ

ಕನ್ನಡ ಸಾಹಿತ್ಯದ ಹೆಸರಾಂತ ಲೇಖಕಿಯರಲ್ಲಿ ಡಾ. ಅನುಪಮ ನಿರಂಜನ ಅವರೂ ಒಬ್ಬರಾಗಿದ್ದಾರೆ. ಇವರು ವೃತ್ತಿಯಲ್ಲಿ ವೈದ್ಯರಾಗಿದ್ದರೂ, ಪ್ರವೃತ್ತಿಯಲ್ಲಿ ಬರಹಗಾರರಾಗಿದ್ದರು. ಅನುಪಮಾರವರು ಕೈಗೊಂಡ ಸಾಹಿತ್ಯ ಕೃಷಿಯಲ್ಲಿ 'ಮಾಧವಿ' ಕಾದಂಬರಿಯು ಪ್ರಮುಖ ಬೆಳೆಗಳಲ್ಲೊಂದೆನಿಸಿದೆ. **'ಮಹಾಭಾರತ'**ದ ಉದ್ಯೋಗ ಪರ್ವದಲ್ಲಿ ಉಲ್ಲೇಖವಾಗಿರುವ ಮಾಧವಿಯ ಕತೆಯನ್ನು ಕುರಿತು, ಅವಳ ಹೆಸರನ್ನೇ ಇಟ್ಟು 'ಮಾಧವಿ' ಎಂಬ ಪೌರಾಣಿಕ ಕಾದಂಬರಿಯನ್ನು ಬರೆದರು. ಮಾಧವಿ ರಾಜಕುಮಾರಿಯಾಗಿ ಹುಟ್ಟಿದರೂ ಸಾಮಾನ್ಯ ಸ್ತ್ರೀಯಂತೆ ಕಷ್ಟ–ನಷ್ಟಗಳನ್ನು ಅನುಭವಿಸಿ, ಶೋಷಿತ ಹೆಣ್ಣಿನ ಸಂಕೇತವಾಗಿ ಪ್ರಸ್ತುತ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

'ಮಾಧವಿ' ಕಾದಂಬರಿಯು ಯಯಾತಿ ಮಹಾರಾಜರಿದ್ದ ನಗರ ಮತ್ತು ಅರಮನೆಯ ಸುಂದರ ಚಿತ್ರಣದೊಂದಿಗೆ ಆರಂಭವಾಗುತ್ತದೆ. ಗಂಗಾ ಯಮುನಾ ಸಂಗಮಸ್ಥಳದಲ್ಲಿ **ಪ್ರತಿಷ್ಠಾನಗರ**ವೆಂಬ ಸುಂದರ ಪುರವಿದ್ದು, ಅದರ ಅರಸನೇ **ಯಯಾತಿ** ಮಹಾರಾಜ. ಅವನು ಶೂರನೂ ಧರ್ಮಿಷ್ಠನೂ ಆಗಿದ್ದನು. ಪ್ರಜೆಗಳು ನಿತ್ಯಸಂತುಷ್ಟರು, ಸುಖಿಗಳಾಗಿದ್ದರು. ಯಯಾತಿಯ ಅರಮನೆ ಊರಮಧ್ಯೆ ಕಳಸದಂತೆ ಶೋಭಾಯಮಾನವಾಗಿತ್ತು. ಅರಮನೆಯ ಮುಂಭಾಗ ಓಲಗ ಶಾಲೆ, ವಿಸ್ತಾರವಾದ ಹಜಾರಗಳಿದ್ದವು. ಹಿಂಭಾಗದಲ್ಲಿ ಅಂತಃಪುರವಿದ್ದು, ಬಲಬದಿಗೆ ಮಹಾರಾಣಿ ದೇವಯಾನಿಯ ವಿಶ್ರಾಂತಿಗೃಹ, ಎಡಬದಿಗೆ ರಾಜಕುಮಾರಿ ಮಾಧವಿಯ ನಿವಾಸ, ಇವೆರಡರ ಮಧ್ಯೆ ಸುಂದರ ಉದ್ಯಾನವಿತ್ತು.

ರಾಜಕುಮಾರಿ **ಮಾಧವಿ** ತನ್ನ ಸಖಿಯರೊಂದಿಗೆ ಉದ್ಯಾನವನದಲ್ಲಿ ವಿಹರಿಸುತ್ತಿದ್ದಳು. ಮಾಧವಿಯದು ರತಿದೇವಿಯರನ್ನು ಮೀರಿಸುವ ಲಾವಣ್ಯ, ದೇವಕನ್ಯೆಯರನ್ನು ನಾಚಿಸುವ ಆಕರ್ಷಣೆ, ಶುಭಲಕ್ಷಣಗಳುಳ್ಳ ಷೋಡಶಿ, ಮಾಧವಿಯ ಸಖಿ **ಚಾರುನೇತ್ರಾ** ರಾಜಕುಮಾರಿ ಮಾಧವಿಯನ್ನು ಸಂತೋಷದಿಂದಿರಿಸಲು ಪ್ರಯತ್ನಿಸಿದಳಾದರೂ, ಮಾಧವಿಯ ಮನಸ್ಸು ಸ್ವಯಂವರದ ಬಗ್ಗೆ ಆಲೋಚಿಸುತ್ತಿದ್ದಿತು. ಯಯಾತಿ ಮಹಾರಾಜರು ಮಹಾರಾಣಿ **ದೇವಯಾನಿ**ಯವರೊಂದಿಗೆ ಮಾಧವಿಯ ಸ್ವಯಂವರದ ವಿಚಾರವನ್ನು ಕುರಿತು ಪ್ರಸ್ತಾಪಿಸಿದ್ದರು. ಈ ವಿಚಾರವನ್ನು ಮಹಾರಾಣಿ ದೇವಯಾನಿಯ ಸಖಿ **ಹಂಸಿನಿ**ಯು ಚಾರುನೇತ್ರೆಯ ಬಳಿ ಗುಟ್ಟಾಗಿ ತಿಳಿಸಿದ್ದಳು.

ಆದರೆ ಚಾರುನೇತ್ರಾ ಈ ಗುಟ್ಟನ್ನು ರಾಜಕುಮಾರಿ ಮಾಧವಿ ಮತ್ತು ಮಾಧವಿಯ ಅವ್ವೆಗೆ ಹೇಳಿದ್ದಳು. ಮಾಧವಿಯು ನಾಚಿಕೆ ಮತ್ತು ಸಂತೋಷಗೊಂಡಿರಲು, ಚಾರುನೇತ್ರೆ ಮಾಧವಿಯನ್ನು ಕುರಿತು 'ನಿನ್ನ ರಾಜಕುಮಾರ ಹೇಗಿರಬೇಕು?' ಎಂದು ಪ್ರಶ್ನಿಸುತ್ತಾ ಹಾಸ್ಯ ಮಾಡಿದಳು. ಹಾಗಾಗಿ ಮಾಧವಿಯು "ನನ್ನ ರಾಜಕುಮಾರನು ಶೂರನೂ, ಉದಾರಿಯೂ ಧರ್ಮಿಷ್ಠನೂ ವಿನಯವಂತನೂ ಏಕಪತ್ನೀವ್ರತನೂ ಆಗಿರಬೇಕು" ಎಂದು ತನ್ನ ಮನದಾಸೆಯ ರಾಜಕುಮಾರನ ಬಗ್ಗೆ ಹೇಳುತ್ತಾಳೆ. ಈ ನಡುವೆ ಮಹಾರಾಣಿ ದೇವಯಾನಿಯವರು ಲಕ್ಷ್ಮೀಪೂಜೆಗಾಗಿ ದೇವಾಲಯಕ್ಕೆ ಹೋಗಲು ಮಾಧವಿಗೆ ಸಿದ್ಧಳಾಗುವಂತೆ ದಾಸಿ ಹಂಸಿನಿ ಕೈಲಿ ಹೇಳಿ ಕಳುಹಿಸಿದರು. ಅವ್ವೆ, ಚಾರುನೇತ್ರೆಯಿಬ್ಬರೂ ಮಾಧವಿಯನ್ನು ಶೃಂಗಾರಗೊಳಿಸಿ ಬೀಳ್ಕೊಟ್ಟರು.

ಅವ್ವೆಯೆಂದರೆ ಆಕೆ ಮಾಧವಿಯನ್ನು ಹೆತ್ತ ತಾಯಿಯಲ್ಲ. ಆಕೆಯೊಬ್ಬಳು ದಾಸಿ. ಯಯಾತಿ ಮಹಾರಾಜರು ಮತ್ತು ಮಹಾರಾಣಿಯವರಿಗೆ ಮೊದಲಿಗೆ ಒಂದು ಹೆಣ್ಣುಮಗು ಹುಟ್ಟಿದ್ದು, ಆ ಮಗು ಹುಟ್ಟಿದ ಮರುದಿನವೇ ಮಹಾರಾಣಿಯವರು ತೀರಿಹೋಗಿದ್ದರು. ಹಾಗಾಗಿ ಮಹಾರಾಜರು ದುಃಖದಿಂದ "ಹೆಣ್ಣಾಗಿ ಹುಟ್ಟಿದ್ದು ಸಾಲದೂಂತ ತಾಯಿಗೆ ಮೃತ್ಯುವೂ ಆಯಿತು. ಈ ಮಗು ಅಪಶಕುನದ ಮುದ್ದೆ!" ಎಂದು ನಿಂದಿಸಿ ಮಗುವನ್ನು ದೂರವಿರಿಸಿದರು. ದಾಸಿಯೊಬ್ಬಳು ತಡೆಯಲಾರದೆ ಆ ಮಗು ಗಟ್ಟಿಯಾಗಿ ಅಳುವುದನ್ನು ಕೇಳಿ 'ಅದು ಹಸುಳೆ ಮಹಾಪ್ರಭು' ಎನ್ನಲು, ಆ ದಾಸಿಯನ್ನು ಗದರಿಸಿದ ಮಹಾರಾಜರು 'ನೀನೇ ಅದನ್ನು ನೋಡಿಕೋ' ಎಂದು ಆಜ್ಞಾಪಿಸಿದರು. ಅಂದು ಆ ದಾಸಿ ತನ್ನ ಎದೆಗವಚಿಕೊಂಡು ಬೆಳೆಸಿದ ಮಗುವೇ ಇಂದಿನ ಸೌಂದರ್ಯದ ಖನಿ ಮಾಧವಿ. ಈ ದಾಸಿಯೇ ಮಾಧವಿಯ ಅವ್ವೆ.

ಲಕ್ಷ್ಮೀಪೂಜೆಗಾಗಿ ದೇವಾಲಯಕ್ಕೆ ಹೊರಟ ದೇವಯಾನಿ, ಶರ್ಮಿಷ್ಠೆ, ಮಾಧವಿ ಮತ್ತು ಅವರ ಸಖಿಯರು ಪೂಜಾ ಪರಿಕರಗಳೊಂದಿಗೆ ಪಲ್ಲಕ್ಕಿಯಲ್ಲಿ ಕುಳಿತು, ಪುರಜನರ ಸಮ್ಮುಖದಲ್ಲಿ ವಾದ್ಯಗಳ ಸಮೇತ ಮೆರವಣಿಗೆ ಬಂದರು. ದೇವಾಲಯಕ್ಕೆ ಬಂದ ರಾಜಪರಿವಾರದಲ್ಲಿ ಮಹಾರಾಣಿ ದೇವಯಾನಿಯವರು ಪೂಜೆ ಮಾಡಲು ಅಣಿಮಾಡಿ ಕೊಳ್ಳುತ್ತಿರುವಾಗ, ಶರ್ಮಿಷ್ಠೆ ತಾನೂ ಪೂಜೆಗೆ ಮುಂದಾದಳು. ಇದರಿಂದ ವ್ಯಗ್ರಳಾದ ದೇವಯಾನಿ "ಪೂಜೆ ಮಾಡುವ ಹಕ್ಕು ಮಾತ್ರ ಮಹಾರಾಣಿಯದು" ಎಂದು ಅಧಿಕಾರವಾಣಿಯಲ್ಲಿ ನುಡಿದಾಗ 'ನೀನು ದಾಸಿ' ಎಂಬ ಭಾವನೆ ಎದ್ದು ಕಂಡಿತ್ತು. ಅದನ್ನು ಕೇಳಿ ಬೇಸರಗೊಂಡ ಮಾಧವಿ ತನ್ನ ಚಿಕ್ಕಮ್ಮಂದಿರ ಜಗಳ ದೇವಮಂದಿರದಲ್ಲೂ ಬಗೆಹರಿಯದಲ್ಲ ಎಂದುಕೊಂಡಿದ್ದಳು. ಆದರೂ ಮಾಧವಿಯು

ತನ್ನ ಇಷ್ಟಾರ್ಥ ಸಿದ್ಧಿಯಾಗಲಿ ಎಂದು ನಿರ್ಮಲ ಮನಸ್ಸಿನಿಂದ ಲಕ್ಷ್ಮಿಯನ್ನು ಪ್ರಾರ್ಥಿಸಿದಳು. ಎಲ್ಲರಿಗೂ ಪ್ರಸಾದ ಕೊಡುತ್ತಾ ಬಂದ ದೇವಯಾನಿ, ಮಾಧವಿಯ ಮುಂದೆ ನಿಂತಾಗ ಅವಳ ಯೌವನದ ಸಿರಿ ಕಂಡು ದೇವಯಾನಿಗೆ ಮತ್ಸರವುಂಟಾಗಿತ್ತು.

ದೇವಯಾನಿ ರಾಕ್ಷಸ ರಾಜಕುಮಾರಿ, ಹಾಗಾಗಿ ಅವಳಲ್ಲಿ ದರ್ಪ, ಅಹಂಕಾರ, ಮತ್ಸರ, ಅಸೂಯೆ ಸಹಜವಾಗಿದ್ದಿತು. ಯಯಾತಿ ಮಹಾರಾಜರು ದೇವಯಾನಿ-ಯನ್ನು ವಿವಾಹವಾಗಿ ಬಂದ ಬಳಿಕ ಮಗಳಿರುವ ವಿಷಯವೇ ಆತನಿಗೆ ಮರೆತುಹೋಗಿತ್ತು. ಆಗ ಮಾಧವಿಗೆ ಹತ್ತು ವರುಷವಾಗಿತ್ತು. ಚಿಕ್ಕಮ್ಮನನ್ನು ಹತ್ತಿರದಿಂದ ನೋಡುವ ಕುತೂಹಲ, ಮಾತನಾಡುವ ಆಸೆ ಮಾಧವಿಗೆ. ಆದರೆ ಚಿಕ್ಕಮ್ಮನದು ಬಿಗಿದ ತುಟಿ, ಮಾಧವಿ ಸವತಿಯ ಮಗಳಾದ್ದರಿಂದ ಅವಳ ಮೇಲೆ ಚಿಕ್ಕಮ್ಮನ ಪ್ರೀತಿ ಅಷ್ಟಕ್ಕಷ್ಟೇ. ದೇವಯಾನಿಗೆ **ಯದು** ಮತ್ತು **ದ್ರುಹ್ಯು** ಎಂಬ ಎರಡು ಗಂಡು ಮಕ್ಕಳಾಗಲು ಯಯಾತಿ ಮಹಾರಾಜರ ಆಸೆ ಈಡೇರಿತ್ತು. ಆ ಮುದ್ದುಕುಮಾರರಿಬ್ಬರೂ ಮಾಧವಿಯ ಸೆರಗು ಹಿಡಿದು 'ಅಕ್ಕ' ಎಂದು ಕರೆಯುತ್ತಾ ದುಂಬಾಲು ಬೀಳುತ್ತಿದ್ದರು. ಮಾಧವಿಯ ಸ್ವಯಂವರಕ್ಕೆ ಇನ್ನೂ ಮೂರು ಮಾಸ-ಗಳಿದ್ದರೂ ಆಕೆಯನ್ನು ಬೀಳ್ಕೊಡಲು ಅರಮನೆಯಲ್ಲಿ ಎಲ್ಲರೂ ಸಿದ್ಧಗೊಳ್ಳುತ್ತಿದ್ದರು. ಹಾಗಾಗಿ ಮಾಧವಿಯೂ ಮಾನಸಿಕವಾಗಿ ಸಿದ್ಧಗೊಳ್ಳಬೇಕೆಂದುಕೊಂಡಿದ್ದಳು.

ಸರಸ್ವತೀ ನದಿಯ ಬಲಮಗ್ಗುಲಲ್ಲೇ ಮಹರ್ಷಿ **ವಿಶ್ವಾಮಿತ್ರರ** ಆಶ್ರಮವಿದ್ದಿತು. ವಿಶ್ವಾಮಿತ್ರರ ಶಿಷ್ಯರಲ್ಲಿ **ಗಾಲವನು** ಒಬ್ಬ. ಗಾಲವನದು ಕುಬ್ಜದೇಹ, ಸಣಕಲು ಮೈ, ಶ್ಯಾಮಲವರ್ಣ, ಮೊಣಕಾಲಿನಿಂದ ಮೇಲಕ್ಕೆ ಕಟ್ಟಿ ನೀರಿನಿಂದಾಗಿ ಮೈಗೆ ಅಂಟಿಕೊಂಡಿದ್ದ ನಾರುಮಡಿ, ಬರಿದಾದ ಎದೆಯಲ್ಲೊಂದು ಜನಿವಾರ. ದುಂಡುಮುಖದಲ್ಲಿ ಮೊಲದಂತಹ ಕಣ್ಣುಗಳು. ಗಡ್ಡಮೀಸೆ, ಅಗಲಮೂಗು, ದಪ್ಪತುಟಿ, ತಲೆಯಮೇಲೆ ಶಿಖೆ. ಗಾಲವನ ವಿದ್ಯಾಭ್ಯಾಸ ಮುಗಿದು ಆತ ಆಶ್ರಮನನ್ನು ಬಿಟ್ಟು ಹೊರಡಬೇಕಿತ್ತು. ಅಂದು ಗಾಲವನನ್ನು ಬೀಳ್ಕೊಡಲು ಸುಪರ್ಣ ಮತ್ತು ಮನುಸ್ವತರೆಂಬ ವಿಶ್ವಾಮಿತ್ರರ ಶಿಷ್ಯರು ಸಿದ್ಧತೆ ನಡೆಸಿದ್ದರು. ಆದರೆ ಗಾಲವನು ತನ್ನ ಮನಸ್ಸಿನಲ್ಲಿ, ವಿಶ್ವಾಮಿತ್ರರು ತನಗೆ ವಿದ್ಯಾಭ್ಯಾಸವನ್ನು ದಯಪಾಲಿಸಿದ್ದಾರೆ, ಅವರಿಗೆ ತಾನು ಯಾವ ರೀತಿ ಕೃತಜ್ಞತೆ ಅರ್ಪಿಸಬೇಕೆಂದು ಆಲೋಚಿಸುತ್ತಿದ್ದರು. ಹಾಗಾಗಿ ಗಾಲವನು ತನ್ನ ಗುರುಗಳ ಬಳಿ ಬಂದನು.

ಗಾಲವನು ಶಿಷ್ಯರ ಗುಂಪಿನಲ್ಲಿದ್ದ ತನ್ನ ಗುರು ವಿಶ್ವಾಮಿತ್ರರನ್ನು ಕಣ್ತುಂಬ ನೋಡಿದ. ಎತ್ತರದ ದೃಢಕಾಯ ತೇಜಸ್ವೀ ಕಣ್ಣುಗಳು. ಮೊಣಕಾಲಿನವರೆಗೆ ಉಟ್ಟ ನಾರುಮಡಿ ಗಂಟುಹಾಕಿದ ಉತ್ತರೀಯ ಹೆಗಲಮೇಲೆ, ಕೊರಳಲ್ಲಿ ರುದ್ರಾಕ್ಷಿಮಾಲೆ, ಎದೆಯ ಮೇಲಿದ್ದ ಜನಿವಾರ. ತೋಳು ಕೈಗಳಿಗೆ ರುದ್ರಾಕ್ಷಿಸರಗಳು, ಹೆಗಲವರೆಗೂ ಬಿಟ್ಟ ಕೂದಲು, ಮೇಲೆ ಎತ್ತಿಕಟ್ಟುವ ಶಿಖೆ, ಉದ್ದವಾದ ಗಡ್ಡ ಎದೆಯವರೆಗೂ ಮುಟ್ಟಿತ್ತು. ದೃಢವಾದ ತುಟಿಗಳಿಂದ ಮಾತುಗಳು ಹೊರಬೀಳುತ್ತಿದ್ದವು. ಕಂಚಿನಂತಹ ಗಂಟಲು.

ಗಾಲವ ತನ್ನ ಗುರು ವಿಶ್ವಾಮಿತ್ರರ ಬಳಿ ಬಂದು 'ತಾವು ಪ್ರೀತಿಯಿಂದ ವಿದ್ಯಾದಾನ ಮಾಡಿದ್ದೀರಿ, ಅದಕ್ಕೆ ಪ್ರತಿಫಲವಾಗಿ ನಾನು ಗುರುದಕ್ಷಿಣೆ ನೀಡಬೇಕೆಂದಿದ್ದೇನೆ' ಎಂದನು. ಆದರೆ ವಿಶ್ವಾಮಿತ್ರರು ಏನೂ ಬೇಡವೆನಲು, ಗಾಲವ ಅವರನ್ನು ಒತ್ತಾಯಪಡಿಸಿ ಉದ್ಧಟತನದಿಂದ ವರ್ತಿಸಿದನು. ಹಾಗಾಗಿ ಗಾಲವ ಹಟದಿಂದ ಸಿಟ್ಟಾದ ವಿಶ್ವಾಮಿತ್ರರು **'ಮೈಯೆಲ್ಲ ಬೆಳ್ಳಗೂ ಒಂದು ಕಿವಿಮಾತ್ರ ಕಪ್ಪಾಗಿಯೂ ಇರುವ ಎಂಟುನೂರು ಕುದುರೆಗಳನ್ನು ತಂದೊಪ್ಪಿಸು'** ಎನ್ನುತ್ತಾರೆ. ಗಾಲವನಿಗೆ ದಿಗ್ಭ್ರಮೆಯಾದರೂ ಗುರುದಕ್ಷಿಣೆ ಪೂರೈಸಲು ಆಶ್ರಮದಿಂದ ಬೀಳ್ಕೊಂಡು ಹೊರಟನು.

ಗಾಲವ ದಟ್ಟವಾದ ಕಾಡಿನಲ್ಲಿ ಪ್ರಯಾಣ ಬೆಳೆಸಿದನು. ಆತನಿಗೆ ತನ್ನ ಗುರುಗಳು ಕೇಳಿದ ದಕ್ಷಿಣೆಯು ತುಂಬಾ ವಿಚಿತ್ರವಾದುದೆನಿಸಿತು. ಅಂತಹ ವಿಶಿಷ್ಟ ಲಕ್ಷಣಗಳುಳ್ಳ ಕುದುರೆಗಳು ಎಲ್ಲಿ, ಯಾವ ರಾಜರ ಬಳಿ ದೊರಕುತ್ತದೆ? ಎಂಬುದನ್ನು ತಿಳಿಯದೇ, ತನ್ನ ಹಟ ಉದ್ಧಟತನದಿಂದ ತಂದುಕೊಂಡ ಕುತ್ತನ್ನು ನೆನೆದು ಕಂಗಾಲಾದನು. ಹೀಗಿದ್ದಾಗ ಒಂದು ದಿನ ಗಾಲವನಿಗೆ "ತಪಸ್ಸಿನಿಂದ ಇಷ್ಟಾರ್ಥ ಸಿದ್ಧಿಯಾಗುತ್ತದೆ" ಎಂದು ಹೇಳಿದ ಗುರುಗಳ ಮಾತು ನೆನಪಾಗಲು, ವಿಷ್ಣುವಿನ ಪ್ರಾರ್ಥನೆಯನ್ನು ಮಾಡತೊಡಗಿದನು.

ಗಾಲವ ಗಟ್ಟಿಯಾದ ಸ್ವರದಿಂದ ವಿಷ್ಣು ಪ್ರಾರ್ಥನೆ ಮಾಡಿದ್ದನ್ನು ಕೇಳಿ ಅಲ್ಲೆ ಹತ್ತಿರದ ಆಶ್ರಮದಲ್ಲಿದ್ದ ಗರುತ್ಮಂತ ಮುನಿಗಳು ಗಾಲವನ ಬಳಿ ಬಂದು, ಅವನನ್ನು ಆಶ್ರಮಕ್ಕೆ ಕರೆದುಕೊಂಡು ಬಂದರು. ಗಾಲವ ಆ ಮುನಿಗಳ ಬಳಿ ತನ್ನ ಕಷ್ಟವನ್ನೆಲ್ಲಾ ನಿವೇದಿಸಿಕೊಂಡನು. ಆದ್ದರಿಂದ ಗರುತ್ಮಂತ ಮುನಿಗಳು ಗಾಲವನಿಗೆ ಒಂದು ಸಲಹೆ ನೀಡಿದರು. ಚಂದ್ರವಂಶದ ಯಯಾತಿ ಮಹಾರಾಜ ಸಿರಿವಂತ, ಕೊಡುಗೈ ದೊರೆ, ಮುನಿಗಳಲ್ಲಿ ಬಹಳ ಭಕ್ತಿಯುಳ್ಳವನು, ಕೇಳಿದವರಿಗೆ ಇಲ್ಲವೆನ್ನಲಾರ. ಹಾಗಾಗಿ

ಅವನನ್ನು ಕೇಳಿದರೆ ನಿನ್ನ ಸಮಸ್ಯೆ ಪರಿಹಾರವಾಗುತ್ತದೆ ಎಂದರು. ಗಾಲವರು ಗರುತ್ಮಂತರ ಸಲಹೆ, ಮಾರ್ಗದರ್ಶನದಂತೆ ಯಯಾತಿ ಮಹಾರಾಜರ ಬಳಿಗೆ ಬಂದನು.

ಯಯಾತಿ ಮಹಾರಾಜನು ತನ್ನ ರಾಜ್ಯಕ್ಕೆ ಆಗಮಿಸಿದ ಗಾಲವ ಮುನಿಗಳನ್ನು ಸಕಲಮರ್ಯಾದೆಗಳೊಂದಿಗೆ ಬರಮಾಡಿಕೊಂಡನು. ಗಾಲವನು ತಾನು ಭಿಕ್ಷಾರ್ಥಿ-ಯಾಗಿ ಬಂದಿರುವ ವಿಚಾರವನ್ನು ರಾಜನಿಗೆ ತಿಳಿಸಿದ್ದನು. ಅಷ್ಟರಲ್ಲಾಗಲೇ ವಿಶ್ವಾಮಿತ್ರರ ಆಶ್ರಮದಿಂದ ಗಾಲವಮುನಿಗಳು ಬಂದಿರುವ ಸುದ್ದಿ ಅರಮನೆಯಲ್ಲೆಲ್ಲ ಹಬ್ಬಿತ್ತು. ಮಹಾರಾಣಿ ದೇವಯಾನಿಯು 'ಈ ಮುನಿಯು ಏನನ್ನು ದೋಚಿಕೊಂಡು ಹೋಗಲು ಬಂದಿರುವನೋ' ಎಂದಾಗ, ಮಾಧವಿ 'ಋಷಿಗಳಿಗೆ ಹಾಗೆನ್ನಬಾರದೆಂದು' ಗಾಲವನ ಬಗ್ಗೆ ಸಹಾನುಭೂತಿ ಸೂಚಿಸಿದ್ದಳು.

ಗಾಲವನು ತಾನು ವಿಶ್ವಾಮಿತ್ರನ ಶಿಷ್ಯನಾಗಿದ್ದುದನ್ನೂ, ಅವನಿಂದ ಗುರುದಕ್ಷಿಣೆಯಾಗಿ ಮೈಯೆಲ್ಲಾ ಬೆಳ್ಳಗಿರುವ ಕಿವಿಮಾತ್ರ ಕಪ್ಪಾಗಿರುವ ಕುದುರೆಗಳನ್ನು ಕೇಳಲ್ಪಟ್ಟು, ಅದರ ಪೂರೈಕೆಗಾಗಿ ಗರುತ್ಮಂತ ಮುನಿಗಳ ಸಲಹೆಯಂತೆ ತಮ್ಮಲ್ಲಿಗೆ ಬಂದಿರುವುದಾಗಿ ಯಯಾತಿಗೆ ತಿಳಿಸಿದನು. ಹಾಗೆಯೇ ಆ ವಿಶೇಷ ವಿಚಿತ್ರ ಕುದುರೆಗಳು ತಮ್ಮಲ್ಲಿದ್ದರೆ ಅವುಗಳನ್ನು ಕೊಟ್ಟು ನನ್ನನ್ನು ಗುರುಋಣದಿಂದ ಮುಕ್ತಗೊಳಿಸು, ಇಲ್ಲದಿದ್ದರೆ ಅಂಥ ಅಶ್ವಗಳನ್ನು ಕೊಂಡುಕೊಳ್ಳಲು ಅಗತ್ಯವಾದಂತಹ ಧನಸಹಾಯವನ್ನಾದರೂ ಮಾಡಬೇಕೆಂದು ಗಾಲವ ಯಯಾತಿಯ ಬಳಿ ಕೋರಿಕೆ ಸಲ್ಲಿಸಿದನು.

ಆದರೆ ಯಯಾತಿ ಮಹಾರಾಜನ ಬಳಿ ಗಾಲವನು ಕೇಳಿದ ಆ ವಿಶಿಷ್ಟ ಲಕ್ಷಣಗಳುಳ್ಳ ಕುದುರೆಗಳೂ ಇರಲಿಲ್ಲ, ಜೊತೆಗೆ ಯಯಾತಿಯು ಯಜ್ಞ-ಯಾಗಾದಿಗಳನ್ನು ಮಾಡಿದ್ದರಿಂದ ಧನಕನಕದ ಭಂಡಾರವೂ ಖಾಲಿಯಾಗಿ, ಮಗಳ ಮದುವೆ ಮಾಡುವುದಕ್ಕೂ ಹಣವಿಲ್ಲದೆ ಸ್ವಯಂವರವನ್ನು ಮೂರು ಮಾಸ ಮುಂದೆ ಹಾಕಿದ್ದ. ಹಾಗಾಗಿ ಗಾಲವನಿಗೆ ಕೊಡಲು ಧನಕನಕವೂ ಇರಲಿಲ್ಲ. ಈ ಕಾರಣಗಳಿಂದ ಗಾಲವ ಮುನಿಯನ್ನು ಬರಿಗೈಲಿ ವಾಪಸ್ಸು ಕಳುಹಿಸಲು ಇಷ್ಟಪಡದ ಯಯಾತಿ ಧರ್ಮಸಂಕಟಕ್ಕೆ ಒಳಗಾಗಿದ್ದನು.

'ಭಿಕ್ಷಾರ್ಥಿಯಾಗಿ ಬಂದ ಬ್ರಾಹ್ಮಣ/ಮುನಿಯೊಬ್ಬನಿಗೆ ದಾನವೀಯದಿದ್ದರೆ ತಾನು ಕ್ಷತ್ರಿಯನಾಗಿ ಜನಿಸಿಯೂ ವ್ಯರ್ಥ' ಎಂದು ಭಾವಿಸಿದ್ದ ಯಯಾತಿಗೆ ಥಕ್ಕನೆ ತನ್ನ ಮಗಳು ಮಾಧವಿಯ ನೆನಪಾಯಿತು. ಸರ್ವಾಂಗ ಸುಂದರಿಯೂ ಸಕಲವಿದ್ಯಾ-ಸಂಪನ್ನಳೂ, ದೇವ ಅಪ್ಸರ ಗಂಧರ್ವರಿಗೆ ಮಿಗಿಲಾದ ಸೌಂದರ್ಯವುಳ್ಳ ಮಾಧವಿಯನ್ನು ಗಾಲವನಿಗೆ ದಾನವಾಗಿ ನೀಡಲು ನಿರ್ಧರಿಸಿದನು. ಮಾಧವಿ ಮೊದಲೇ ತಬ್ಬಲಿ, ಆಕೆಯ ಮೇಲೆ ಸಂಪೂರ್ಣವಾದ ಅಧಿಕಾರವಿರುವುದು ತನಗೆಯೇ ಎಂದು ಯಯಾತಿ ಆಲೋಚಿಸಿದ್ದನು. ಹಾಗೆಯೇ ದೇವಯಾನಿಗೆ ಮಾಧವಿಯನ್ನು ಕಂಡರೆ ಮೊದಲಿನಿಂದಲೂ ಆದರವಿಲ್ಲ, ರಾಜ್ಯದ ಬೊಕ್ಕಸದಲ್ಲಿಯೂ ಹಣವಿಲ್ಲದ್ದರಿಂದ ಆಕೆಯನ್ನು ಮುನಿಗೆ ದಾನಕೊಟ್ಟುಬಿಟ್ಟರೆ ನಮ್ಮ ಧರ್ಮವೂ ಉಳಿಯಿತು; ಸ್ವಯಂವರಕ್ಕೆ ಹೊಂದಿಸಬೇಕಾದ ಹಣದ ಯೋಚನೆಯೂ ತಪ್ಪುತ್ತದೆ ಎಂಬುದಾಗಿ ಮಹಾರಾಣಿ ಆಲೋಚಿಸಿದ್ದಳು.

ಯಯಾತಿ ಮಹಾರಾಜನು ಗಾಲವನ ಬಳಿ ಬಂದು ತನ್ನ ಮಗಳನ್ನು ನಿಮ್ಮ ವಶಕ್ಕೆ ಕೊಡ್ತೇನೆ, ಸೌಂದರ್ಯದ ಖನಿಯಾದ ಮಾಧವಿಯನ್ನು ಯಾರಾದರೂ ಪುಣ್ಯಾತ್ಮರಾಜನಿಗೆ ಕೊಟ್ಟು, ನಿಮ್ಮ ಗುರುದಕ್ಷಿಣೆಗೆ ಬೇಕಾದ ಅಶ್ವಗಳನ್ನು ಕನ್ಯಾಶುಲ್ಕ ರೂಪದಲ್ಲಿ ದೊರಕಿಸಿಕೊಳ್ಳಬೇಕೆಂದು ಹೇಳಿದನು. ಗಾಲವನಿಗೆ ಯಯಾತಿ ಧರ್ಮಕ್ಕಾಗಿ ತನ್ನ ಮಗಳನ್ನೇ ದಾನಕೊಡಲು ಮುಂದಾದದ್ದು ಆಶ್ಚರ್ಯವೆನಿಸಿದರೂ, ಸ್ವಲ್ಪ ಸಮಾಧಾನವಾಗಿತ್ತು. ಗಾಲವನು ಯಯಾತಿಯ ದಾನವನ್ನು ಸ್ವೀಕರಿಸಲು ಒಪ್ಪಿಗೆಯನ್ನು ಸೂಚಿಸಿದನು.

ಗಾಲವ ಮುನಿಗೆ ಕೊಟ್ಟ ಮಾತಿನಂತೆ ಯಯಾತಿಯು ತನ್ನ ಮಗಳು ಮಾಧವಿಯನ್ನು ದಾನ ನೀಡಲು ಸಿದ್ಧವಾಗಿ ಆಕೆಯನ್ನು ಕರೆಸಿದನು. ಆದರೆ ಮಾಧವಿ ತನ್ನಪ್ಪ ಮುನಿಗಳಿಂದ ಆಶೀರ್ವಾದ ಪಡೆಯಲು ಕರೆಸಿರಬಹುದೆಂದು ಭಾವಿಸಿದ್ದಳು. ಮುನಿಗಳ ಹರಕೆಯ ನುಡಿಗಳನ್ನು ಕೇಳಲು ಬಂದ ಮಾಧವಿಗೆ, ಆಕೆಯನ್ನು ಆ ಗಾಲವ ಮುನಿಗೆ ದಾನವಾಗಿ ನೀಡಿರುವ ವಿಚಾರ ಅವಳಿಗೆ ಶಾಪದ ನುಡಿಗಳಾಗಿ ಕೇಳಿಸಿದವು. ದಿಗ್ಭ್ರಮೆಗೊಂಡ ಮಾಧವಿ "ಅಪ್ಪಾ..." ಎಂದು ಪ್ರತಿಭಟಿಸುವ ಧನಿಯನ್ನು ಎತ್ತಿದಳಾದರೂ, ಯಯಾತಿ ತಾನು ಧರ್ಮಬಂಧನಕ್ಕೆ ಕಟ್ಟುಬಿದ್ದಿದ್ದು, ಇನ್ನು ನೀನು ಗಾಲವರ ವಸ್ತು ಎಂದು ಹೇಳಿ ಮಾಧವಿಯನ್ನು ದಾನವಾಗಿ ಗಾಲವರಿಗೆ ಕೊಟ್ಟೇಬಿಟ್ಟನು.

ಮಾಧವಿಗೊದಗಿದ ದುರವಸ್ಥೆಯನ್ನು ಕಂಡು ಅವಳ ಆಪ್ತಸಖಿ ಚಾರುನೇತ್ರೆ ಮಾಧವಿಯನ್ನು ತಬ್ಬಿ ಕಣ್ಣೀರು ಸುರಿಸಿದಳು. ಈ ವಿಷಯ ತಿಳಿದ ಮಾಧವಿಯ ಅವ್ವೆ, ಮಾಧವಿಯನ್ನು ಮಗುವಾಗಿದ್ದಾಗಲೇ ಗಂಗೆಯ ಪಾಲು ಮಾಡಿದ್ದರೆ ಅವಳಿಗೆ ಈ ದುಃಸ್ಥಿತಿ ಬರುತ್ತಿರಲಿಲ್ಲವೆಂದು ಸಂಕಟಪಟ್ಟಿದ್ದಳು. ಮಾಧವಿಗೆ ಒಮ್ಮೆಲೆ ಭಯ, ಕೋಪ, ತಿರಸ್ಕಾರ, ಸಂಕಟವಾಗಲು ಅವ್ವೆಯ ಬಳಿ ಬಂದು "ನಾನು ರಾಜಕುಮಾರಿ ಆಗದೆ ಯಾರಾದರೂ ಬಡವರ ಮನೇಲಿ ಹುಟ್ಟಿದ್ದಿದ್ದರೆ ಇಂಥ ಅವಸ್ಥೆ ಬರುತ್ತಿರಲಿಲ್ಲ ಅವ್ವೆ!" ಎಂದು ದುಃಖ ವ್ಯಕ್ತಪಡಿಸಲು, ಅವ್ವೆ ಮಾಧವಿಯನ್ನು ಕುರಿತು "ಎಲ್ಲಿ ಹುಟ್ಟಿದರೂ ಹೆಣ್ಣಿಗೆ ದುಃಖ ತಪ್ಪಿದ್ದಲ್ಲ ಮಗೂ ಇದು ಹಾಳು ಬಾಳು!" ಎಂದು ಹೇಳಿ ಮಾಧವಿಯನ್ನು ಸಮಾಧಾನಪಡಿಸಲೆತ್ನಿಸಿದಳು. ಅದುವರೆಗೂ ಸ್ವಯಂವರದ ಕನಸುಕಟ್ಟಿದ್ದ ಮಾಧವಿ ತನಗೊದಗಿದ ದುಃಸ್ಥಿತಿಯಿಂದಾಗಿ ಆ ಕನಸುಗಳಿಗೆ ಗೋರಿ ಕಟ್ಟಿದ್ದಳು. ಮಾಧವಿ ತನ್ನ ಮನಸ್ಸನ್ನು ಕಲ್ಲಾಗಿಸಿಕೊಂಡಿದ್ದಳು. ಅವಳ ಕಣ್ಣಿನ ಕೊಳ ಒಣಗಿಹೋಗಿತ್ತು. ಒಡವೆಗಳನ್ನೆಲ್ಲಾ ತೆಗೆದಿಟ್ಟು, ನಾರುಮಡಿಯನ್ನು ಧರಿಸಿ ಋಷಿಕನ್ಯೆಯಂತೆ ಗಾಲವನನ್ನು ಹಿಂಬಾಲಿಸಿದ್ದಳು. ಮಾಧವಿ ಹಿಂದೆ ಬಿಟ್ಟು ಬಂದ ಸಖೀವೃಂದದ ರೋದನ ಕರುಳು ಮಿಡಿಯುವಂತಿತ್ತು. ಚಾರುನೇತ್ರೆ ಮಾಧವಿ-ಯೊಂದಿಗೇ ಹೊರಡಲು ಸಿದ್ಧಳಾಗಿದ್ದರೂ ಅವಳನ್ನು ಮಾಧವಿ ತಡೆದಿದ್ದಳು. ಅವ್ವೆ ಹೇಳಿದ್ದ "ಮಗು ನಿನಗಿರುವುದೊಂದೇ ರಕ್ಷೆ, ಅದು ಧೈರ್ಯ. ಅದನ್ನೆಂದಿಗೂ ಮರೀಬೇಡ. ಹೋಗಿ ಬಾ ಮಗು, ದೇವರು ಒಳ್ಳೆಯದು ಮಾಡಲಿ" ಎಂಬ ಆಶೀರ್ವಾದದ ಮಾತು ಮತ್ತೆ-ಮತ್ತೆ ಮಾಧವಿಯ ಕಿವಿಗಳಲ್ಲಿ ಪ್ರತಿಧ್ವನಿತವಾಗುತ್ತಿತ್ತು.

ಮಾಧವಿಯನ್ನು ಕರೆದುಕೊಂಡು ಹೊರಟ ಗಾಲವ ಮುನಿಯು ದೋಣಿಯ ಮೂಲಕ ನದಿಯನ್ನು ದಾಟಿ ಕಾಡನ್ನು ಪ್ರವೇಶಿಸಿದನು. ಮೆತ್ತಗಿನ ಪಾದರಕ್ಷೆ ಧರಿಸುತ್ತಿದ್ದ ಮಾಧವಿಯ ಪಾದಗಳು ಮರದ ಹಾವುಗೆಯ ಒರಟುತನಕ್ಕೆ ನೊಂದುವು. ಬದುಕಿನಲ್ಲಿ ಸುಖ ಹೊರತು ಬೇರೇನನ್ನೂ ಕಾಣದ ಮಾಧವಿಯ ಮನಸ್ಸು ಧುತ್ತೆಂದು ಇದಿರಿಗೆ ನಿಂತ ಕಷ್ಟಗಳ ಸರಮಾಲೆಗೆ ಬೆದರಿತು. ಮಾಧವಿ ತನ್ನ ಕಾಲಿಗೆ ಸಣ್ಣ ಮುಳ್ಳು ಚುಚ್ಚಿ ನೋವಾಯಿತೆಂದು ಒಂದು ಕ್ಷಣ ನಿಂತಳು. ನಾರುಮಡಿ ಮುಳ್ಳಿನ ಗಿಡಕ್ಕೆ ಸಿಕ್ಕಿಕೊಂಡಿತೆಂದು ಇನ್ನೊಮ್ಮೆ ದಣಿವಾರಿಸಿಕೊಳ್ಳಲೆಂದು ನಿಂತಳು. ನಡೆದು-ನಡೆದು ಕಾಲುಗಳಲ್ಲಿ ಬೊಬ್ಬೆಗಳೆದ್ದವು. ನಾನಿನ್ನು ನಡೆಯಲಾರೆ ಎಂದು ಪ್ರತಿಭಟಿಸುವ ಆಸೆಯಾಯಿತು ಅವಳಿಗೆ. ಆದರೆ ಹಾಗೆ ಮಾಡದೆ ಮುನ್ನಡೆದಳು.

ಮಾಧವಿಗೆ ಪ್ರಯಾಣದ ಆಯಾಸದ ಜೊತೆಗೆ ಹಸಿವೆಯಾಗಿದ್ದುದರಿಂದ ಗಾಲವ ಬಾಳೆಹಣ್ಣುಗಳ ಚಿಪ್ಪನ್ನು ತಂದುಕೊಡಲು ಅವಳು ನಾಲ್ಕೈದು ಹಣ್ಣನ್ನು ಗಬಗಬನೆ ತಿಂದಳು. ಕೊಳದ ಬಳಿ ಆನೆಯೊಂದನ್ನು ಕಂಡು ಹೆದರಿ ಹರಿಣಿಯಾಗಿದ್ದ ಮಾಧವಿಗೆ ಕಾಡುಮೃಗಗಳ ಭಯವೂ ಕಾಡಿತ್ತು. ಸಂಜೆಯಾಗುವ ಹೊತ್ತಿಗೆ ಮಾಧವಿಯ ಪಾದರಕ್ಷೆಗಳು ಮುರಿದು ದಪ್ಪ ಮುಳ್ಳೊಂದು ಪಾದದೊಳಹೊಕ್ಕು ರಕ್ತ ಬರಲಾರಂಭವಾಯಿತು. ಮಾಧವಿ ಮುಳ್ಳನ್ನು ತೆಗೆದರೂ ನೋವು ಮಾತ್ರ ಬಲವಾಗಿದ್ದಿತು. ಸಂಜೆಯಾದ್ದರಿಂದ ಅಲ್ಲೇ ದೂರದಲ್ಲಿದ್ದ ಹಳೆಯ ಆಶ್ರಮವೊಂದರಲ್ಲಿ ಉಳಿದರು. ಗಾಲವ ಋಷಿಯು ಮಾಧವಿಗೆ ಗೆಣಸನ್ನು ತಂದುಕೊಡಲು, ಎಂದೂ ಹಸಿಗೆಣಸನ್ನೂ ತಿಂದಿರದ ಮಾಧವಿ ಹಸಿವಿನ ಬಾಧೆಯಿಂದ ಅದನ್ನು ತಿನ್ನಬೇಕಾಯಿತು.

ಆ ರಾತ್ರಿ ಚಳಿ ಹೆಚ್ಚಾಗಿದ್ದರಿಂದ ಗಾಲವನು ಚಂದನಕಾಷ್ಠಗಳನ್ನುಜ್ಜಿ ಬೆಂಕಿ ಹತ್ತಿಸಿದ್ದ. ಬೆಳದಿಂಗಳ ನಸುಬೆಳಕಿನಲ್ಲಿ ಹಿತವಾದ ತಂಗಾಳಿ ಬೀಸುತ್ತಿದ್ದು, ಎಲ್ಲಿಂದಲೋ ಸೌಗಂಧಿಕಾ ಪುಷ್ಪದ ಸುವಾಸನೆ ಮೂಗಿಗೆ ಬಡಿಯುತ್ತಿದ್ದು, ಅದುವರೆಗೂ ಅವನ ಹತೋಟಿಯಲ್ಲಿದ್ದ ಇಂದ್ರಿಯಗಳು ಒಂದೊಂದೇ ಸಡಿಲಗೊಳ್ಳುತ್ತಿದ್ದವು. ಹಾಗಾಗಿ ಬೆಂಕಿಯ ಬೆಳಕಿನಲ್ಲಿ ಮಲಗಿದ್ದ ಮಾಧವಿಯ ದೇಹ ಗಾಲವನ ಕಣ್ಣನ್ನು ಆಕರ್ಷಿಸಿತ್ತು. ಪಂಚೇಂದ್ರಿಯಗಳ ವ್ಯಾಮೋಹಕ್ಕೆ ಒಳಗಾದ ಗಾಲವನ ಮನಸ್ಸು ಚಂಚಲಗೊಂಡಿತ್ತು. ಆದರೆ ಗಾಲವ ತನ್ನ ಕರ್ತವ್ಯವನ್ನು ನೆನೆದು ಪದ್ಮಾಸನ ಹಾಕಿ ಪ್ರಾರ್ಥನೆ ಮಾಡಲು, ಅವನ ಮನಸ್ಸು ತಿಳಿಯಾಯಿತು.

ಗಾಲವ, ಮಾಧವಿಯ ಪಯಣ ಮರುದಿನವೂ ಮುಂದುವರಿಯಿತು. ಪಯಣದ ಆಯಾಸ ನೀಗಲು ಅಲ್ಲೇ ದೂರದಲ್ಲಿ ಕಾಣುತ್ತಿದ್ದ ಋಷ್ಯಾಶ್ರಮದ ಬಳಿಗೆ ಬಂದರು. ಆ ಆಶ್ರಮದ ಮುನಿಯು ವಿಶ್ವಾಮಿತ್ರರ ಶಿಷ್ಯ ಗಾಲವನು ಬಂದಿದ್ದಾನೆಂಬುದನ್ನು ತಿಳಿದು ಸಂತಸ ಹೊಂದಿ ಗಾಲವನನ್ನು ಸತ್ಕರಿಸಿದರು. ಆಶ್ರಮದ ಮುನಿಯ ಹೆಂಡತಿಯು ಮಾಧವಿಯನ್ನು ಒಳಕರೆದೊಯ್ದು ಉಪಚರಿಸಿದಳು. ಹಾಗೆಯೇ ಅವಳನ್ನು ಪ್ರೀತಿಯಿಂದ ಮಾತನಾಡಿಸಿ ಮಾಧವಿಯ ವಿಧಿಗಾಗಿ ಮರುಗಿ ಸಂತೈಸಿದಳು. ಅರಮನೆ ಬಿಟ್ಟಾಗಿನಿಂದ ಪ್ರಿಯ ಸಾನ್ನಿಧ್ಯ ಕಾಣದ ಮಾಧವಿಗೆ ಋಷಿಪತ್ನಿಯ ಮಾತು ಹಿತಕರವಾಗಿತ್ತು. ಗಾಲವ ಮುನಿಯು ತನ್ನ ಪಯಣದ ಉದ್ದೇಶವನ್ನು ಆಶ್ರಮದ ಮುನಿಗಳಿಗೆ ತಿಳಿಸಿದನು. ಆ ಮುನಿಯು, **ಅಯೋಧ್ಯೆ** ಎಂಬ ದೊಡ್ಡ ನಗರವಿದ್ದು ಅದರ ಅರಸನೇ ಸೂರ್ಯವಂಶದ **ಹರ್ಯಶ್ವ** ಮಹಾರಾಜ.

ಅವನು ಉದಾರಿ, ಹಾಗಾಗಿ ಹರ್ಯಶ್ವನ ಬಳಿ ಹೋದರೆ ಆ ವಿಶೇಷ ಅಶ್ವಗಳು ಸಿಗುತ್ತವೆಂದು ಹೇಳಿದನು.

ಗಾಲವನು ಆ ಮುನಿಗಳ ಸಲಹೆಯಂತೆ ಮಾಧವಿಯನ್ನು ಕರೆದುಕೊಂಡು ಸರಯೂ ನದಿಯ ಬಲದಂಡೆಯಲ್ಲಿದ್ದ ಅಯೋಧ್ಯಾನಗರಕ್ಕೆ ಬಂದನು. ಮದ್ಯಸೇವನೆಯೊಂದಿಗೆ ಚದುರಂಗದಾಟ ಆಡುತ್ತಾ ಕುಳಿತ್ತಿದ್ದ ಹರ್ಯಶ್ವನ ವಯಸ್ಸು ಸುಮಾರು ಐವತ್ತು ವರ್ಷ, ತಲೆಗೂದಲು ಬೆಳಗಾಗಿದ್ದು ಸಾಧಾರಣ ಎತ್ತರ, ಮುಖದಲ್ಲಿ ರಾಜಕಳೆ ಇದ್ದು, ಮೈಮೇಲೊಂದು ಬಿಳಿಯ ಉತ್ತರೀಯ ಕೆಂಪು ರೇಷ್ಮೆ ಪಂಚೆ ಉಟ್ಟಿದ್ದು, ಕೈಕಡಗ, ತೋಳಬಂದಿ ತೊಟ್ಟಿದ್ದ. ತಲೆಯಲ್ಲಿ ಕಿರೀಟವಿರಲಿಲ್ಲ. ಸಣ್ಣ ಕಣ್ಣುಗಳನ್ನು ಕಿರಿದುಗೊಳಿಸಿ ಆಗಾಗ್ಗೆ ಹ್ಹ ಹ್ಹ ಹ್ಹ ಎಂದು ನಗುವುದು ಅವನ ಸ್ವಭಾವವಾಗಿತ್ತು.

ಗಾಲವ, ಮಾಧವಿಯೊಡನೆ ಅಲ್ಲಿಗೆ ಬಂದಾಗ, ಮುನಿವರ್ಯನನ್ನು ಕಂಡ ಹರ್ಯಶ್ವ ಮೇಲೆದ್ದು ವಂದಿಸಿ, ಅರ್ಘ್ಯಪಾದ್ಯಾದಿಗಳನ್ನು ನೀಡಿದ. ಗಾಲವನ ಜೊತೆಯಲ್ಲಿ ಬಂದ ಮಾಧವಿಯನ್ನು ಕಂಡು ಮೋಹಿತನಾದ ಹರ್ಯಶ್ವ, ಆಕೆ ಯಾರೆಂದು ಮುನಿಗಳಲ್ಲಿ ವಿಚಾರಿಸಲು ಗಾಲವನು 'ಇವಳು ಚಂದ್ರವಂಶದ ಯಯಾತಿ ಮಹಾರಾಜನ ಮಗಳು ಮಾಧವಿ ಗುರುದಕ್ಷಿಣೆ ಪಡೆಯಲೆಂದು ರಾಜ ಇವಳನ್ನು ನನಗೆ ದಾನ ನೀಡಿದ್ದಾನೆ ಎಂದು, ಹಾಗೆಯೇ ಯಾವ ರಾಜನು ಮೈಯೆಲ್ಲಾ ಬೆಳ್ಳಗೂ ಒಂದು ಕಿವಿ ಮಾತ್ರ ಕಪ್ಪಾಗಿರುವ ಎಂಟುನೂರು ಕುದುರೆಗಳನ್ನು ತನಗೆ ನೀಡುತ್ತಾನೋ, ಆತನಿಗೆ ಪ್ರತಿಯಾಗಿ ಮಾಧವಿಯನ್ನು ನೀಡುವುದಾಗಿ ತಿಳಿಸಿದನು.

ಹರ್ಯಶ್ವನ ಹತ್ತಿರ ಅಂಥ ವಿಚಿತ್ರ ಕುದುರೆಗಳು ಕೇವಲ ಇನ್ನೂರು ಮಾತ್ರ ಇದ್ದವು. ಇದರಿಂದ ಬೇಸರಗೊಂಡ ಗಾಲವನನ್ನು ಕುರಿತು ಹರ್ಯಶ್ವನು ಮಾಧವಿಯಿಂದ ಮೋಹಿತನಾದ ತಾನು ಅವಳಲ್ಲಿ ಒಂದು ಪುತ್ರಸಂತಾನವನ್ನು ಇನ್ನೂರು ಕುದುರೆಗಳಿಗೆ ಪ್ರತಿಫಲವಾಗಿ ಪಡೆದುಕೊಳ್ಳುತ್ತೇನೆ, ಅನಂತರ ಅವಳನ್ನು ನಿಮಗೆ ವಾಪಸ್ಸು ಕೊಡುವೆ, ಆಗ ಅವಳನ್ನು ಇನ್ನೊಬ್ಬ ರಾಜನಿಗೊಪ್ಪಿಸಿ ಉಳಿದ ಅಶ್ವಗಳನ್ನು ಅವನಿಂದ ಪಡೆದುಕೊಳ್ಳಿ ಎಂದು ಸಲಹೆ ನೀಡಿದನು. ಹರ್ಯಶ್ವನ ಮಾತಿಗೆ ಒಪ್ಪಿದ ಗಾಲವನು ಇನ್ನೂರು ಅಶ್ವಗಳಿಗೆ ಪ್ರತಿಯಾಗಿ ಮಾಧವಿಯನ್ನು ಒಂದು ವರ್ಷದ ಅವಧಿಗೆ ಅವನಿಗೊಪ್ಪಿಸಿ ಹೊರಟುಬಿಟ್ಟನು. ಆದರೆ ಗಾಲವ ಮಾಧವಿಗೆ ಯಾವ ವಿಚಾರವನ್ನು ತಿಳಿಸದೇ ಅವಳನ್ನು ಹರ್ಯಶ್ವನಿಗೊಪ್ಪಿಸಿ ಹೊರಟುಹೋಗಿದ್ದ.

ಹರ್ಯಶ್ವರು ತಾವು ಬಯಸಿದ ಸುಖವನ್ನು ಮಾಧವಿಯಿಂದ ಪಡೆದರು. ಆದರೆ ಮಾಧವಿಗೆ ತನ್ನ ಕನಸಿನ ರಾಜಕುಮಾರನ ಆಸೆ ನುಚ್ಚುನೂರಾಗಿದ್ದಿತು. ಯಾವುದರಲ್ಲೂ ಆಸಕ್ತಿ ತೋರದೆ ಮೌನವಾಗಿರುತ್ತಿದ್ದ ಮಾಧವಿ ಸಖಿ ಕನಕಾಂಬರಿಯೊಬ್ಬಳೊಂದಿಗೆ ಮಾತ್ರ ಮಾತನಾಡುತ್ತಿದ್ದಳು. ಕನಕಾಂಬರಿ ಚಾರುನೇತ್ರೆಯಷ್ಟು ಸುಂದರಿಯಲ್ಲದಿದ್ದರೂ ಸಹೃದಯಿ, ಮಾಧವಿಯ ಬಗ್ಗೆ ಅಂತಃಕರಣ ಹೊಂದಿದ್ದವಳು.

ಒಂದು ರಾತ್ರಿ ಮಾಧವಿಗೆ ಗಾಲವ ಮುನಿಗಳ ನೆನಪಾಗಿ ಅವರು ಎಲ್ಲಿರುವರೆಂದು ಹರ್ಯಶ್ವನನ್ನು ವಿಚಾರಿಸಲು, ಗಾಲವನು ಮುಂದಿನ ಸಂವತ್ಸರಕ್ಕೆ ಬರುತ್ತಾರೆಂದು ಹರ್ಯಶ್ವನು ಮಾಧವಿಗೆ ತಿಳಿಸಿದನು. ರಾಜನಿಂದ ಕನ್ಯಾಶುಲ್ಕ ಪಡೆದು ಗುರುದಕ್ಷಿಣೆ ಅರ್ಪಿಸಿದ ಗಾಲವ ಕೃತಕೃತ್ಯನಾಗಿರಬೇಕು. ಹೀಗಿರುವಾಗ ಗಾಲವನು ಮತ್ತೆ ಯಾಕೆ ಬರ್ತಾನೆ? ಎಂಬ ಪ್ರಶ್ನೆ ಮಾಧವಿಯನ್ನು ಕಾಡಿತ್ತು. ಆದರೆ ಮಾಧವಿಗೆ ಗಾಲವ ಮತ್ತು ಹರ್ಯಶ್ವರ ನಡುವೆ ನಡೆದ ಸಂಭಾಷಣೆಯಾಗಲಿ, ಒಪ್ಪಂದವಾಗಲಿ ಗೊತ್ತಿರಲಿಲ್ಲ. ಅದು ಗೊತ್ತಾಗಿದ್ದು ಹರ್ಯಶ್ವನ ಮಹಾರಾಣಿಯಿಂದ. ಕಾರಣ, ಹರ್ಯಶ್ವನಿಗೆ ಇಬ್ಬರು ಹೆಣ್ಣುಮಕ್ಕಳಿದ್ದು ಗಂಡುಸಂತಾನವಿರಲಿಲ್ಲ. ಹಾಗಾಗಿ ಪುತ್ರಸಂತಾನವನ್ನು ಬಯಸಿ ಹರ್ಯಶ್ವ ಮಾಧವಿಯ ಸೌಂದರ್ಯಕ್ಕೆ ಸೋತು ಆಕೆಯ ಬಳಿಯೇ ಹೆಚ್ಚು ಸಮಯ ಕಳೆಯುತ್ತಿದ್ದನು. ಇದನ್ನು ಕಂಡ ಹರ್ಯಶ್ವನ ಪತ್ನಿ ಮಾಧವಿಯನ್ನು ಕರೆಸಲು, ಅವಳ ಅಪೂರ್ವ ಸೌಂದರ್ಯವನ್ನು ನೋಡಿ ಅಸೂಯೆಪಡುತ್ತಾ "ನೀನಿಲ್ಲಿ ಇರೋದು ಒಂದು ಸಂವತ್ಸರ ಮಾತ್ರ. ಅದು ನೆನಪಿರ್ಲಿ!" ಎಂದು ಹೇಳಿದಳು. ಆಗಲೇ ಮಾಧವಿಗೆ ತನ್ನ ದುಃಸ್ಥಿತಿಯ ನಿಜವಾದ ಅರಿವು ಮೂಡಿದ್ದು. ಮುಗ್ಧೆ ಮಾಧವಿ ಈ ವಿಚಾರದ ಬಗ್ಗೆ ಹರ್ಯಶ್ವನನ್ನು ಕೇಳಿ ಖಚಿತಪಡಿಸಿಕೊಂಡು "ತಾನು ಉಳಿದ ಕುದುರೆಗಳಿಗೆ ಪ್ರತಿಯಾಗಿ ಮತ್ತೊಬ್ಬ ರಾಜನೊಂದಿಗೆ ಬಾಳಬೇಕಲ್ಲ! ತನ್ನಷ್ಟು ನತದೃಷ್ಟೆ ಈ ಪ್ರಪಂಚದಲ್ಲಿ ಬೇರೊಬ್ಬಳಿಲ್ಲ" ಎಂದುಕೊಳ್ಳುತ್ತಾ ಅಳತೊಡಗಿದಳು. ಆಗ ಹರ್ಯಶ್ವ ಮಾಧವಿಯನ್ನು ಸಾಂತ್ವನಗೊಳಿಸಲೆತ್ನಿಸಿದ್ದನು.

ಒಂದು ಕಡೆ ಮಾಧವಿ ಗರ್ಭಿಣಿಯಾಗಿದ್ದರೆ, ಮತ್ತೊಂದು ಕಡೆ ಚೈತ್ರಮಾಸ ಕಾಲಿರಿಸುತ್ತಿದ್ದ ಹಾಗೆ ಅಯೋಧ್ಯಾನಗರದಲ್ಲಿ ವಸಂತೋತ್ಸವದ ಸಿದ್ಧತೆಗಳು ಆರಂಭವಾದವು. ಅಂತಃಪುರದೋರಿಗೆಲ್ಲಾ ಅಂತಃಪುರದ ಕಾರಾಗೃಹದಿಂದ ಹೊರಗೆ ನಡೆದು ಸ್ವಚ್ಛಂದ ಗಾಳಿ ಕುಡಿಯುವ ಅವಕಾಶ. ಮಾಧವಿಯ ದುಃಖತಪ್ತ ಮನಸ್ಸು ಆ

ಬದಲಾವಣೆಯನ್ನು ಸ್ವಾಗತಿಸಿತು. ವಸಂತೋತ್ಸವದಂದು ರಾಜಸಭೇಲಿ ಹರ್ಯಶ್ವ-ರಾಜನ ಬಲಗಡೆ ಮಂತ್ರಿಯೂ ಅವನ ಪಕ್ಕದಲ್ಲಿ ಮಂತ್ರಿಕುಮಾರನು ಕುಳಿತಿರಲು, ಆ ಮಂತ್ರಿಕುಮಾರನ ವರ್ಚಸ್ಸಿಗೆ ಮಾಧವಿ ಮನಸೂರೆಗೊಂಡಳು. "ರಾಜಕುಮಾರನನ್ನು ನಾಚಿಸುವಂಥ ಧೀರತೆ, ಇವನೇನಾದರೂ ತನ್ನ ಸ್ವಯಂವರಕ್ಕೆ ಬಂದಿದ್ದರೆ ತಾನು ಇವನಿಗೇ ಮಾಲೆ ಹಾಕುತ್ತಿದ್ದೆ" ಎಂದು ಮನಸ್ಸಿನಲ್ಲಿ ಆಲೋಚಿಸಿದ್ದಳು. ಆ ಮಂತ್ರಿಕುಮಾರನೂ ತನ್ನನ್ನು ನೋಡುತ್ತಿರುವ ಮಾಧವಿಯನ್ನು ಆಶ್ಚರ್ಯ, ಪ್ರಶ್ನಾರ್ಥಕವಾಗಿ ನೋಡಿದ್ದನು. ಆತನ ನೋಟದಿಂದ ಪುಲಕಗೊಂಡ ಮಾಧವಿಗೆ ತಾನು ರಾಜನ ಶಿಶುವನ್ನು ಹೊತ್ತವಳೆಂಬುದು ನೆನಪಾಗಿ ತನ್ನ ನೋಟವನ್ನು ಬದಲಿಸಿದ್ದಳು.

ಮುಂದೆ ಮಾಧವಿ ಚಕ್ರವರ್ತಿಯಾಗುವ ಎಲ್ಲ ಶುಭಲಕ್ಷಣಗಳುಳ್ಳ ಗಂಡು-ಮಗುವಿಗೆ ಜನ್ಮನೀಡಿದ್ದಳು. ಹರ್ಯಶ್ವ ತುಂಬಾ ಸಂತಸಗೊಂಡಿದ್ದ. ರಾಜಕುಮಾರನ ಜನನದಿಂದಾಗಿ ಊರಿಗೆ ಊರೇ ನಲಿದಿತ್ತು. ಮಾಧವಿಗೆ ಮಗುವಿನ ಮೇಲೆ ವಿಪರೀತ ವ್ಯಾಮೋಹವಿದ್ದಿತು. ಮಹಾರಾಜನನ್ನು ತನ್ನ ಮನಸ್ಸು ಮೆಚ್ಚಲಿಲ್ಲವಾದರೂ, ಈ ಮಗುವಿಗೋಸ್ಕರ ತಾನು ಜೀವಮಾನವೆಲ್ಲ ಇಲ್ಲೇ ಇದ್ದುಬಿಡುವ ಆಸೆ ಹೊಂದಿದ್ದಳು. ಆದರೆ ಗಾಲವ ಮುನಿ ಬಂದರೆ ಆತನೊಂದಿಗೆ ಹೋಗಲೇಬೇಕೆಂಬುದನ್ನು ನೆನೆದು ಮಗುವಿನಿಂದ ಆದಷ್ಟು ದೂರವಿರಲು ಮನಸ್ಸನ್ನು ಸಿದ್ಧಮಾಡಿಕೊಂಡಿದ್ದಳು.

ಗಾಲವನು ಮಾಧವಿಯನ್ನು ಕರೆದುಕೊಂಡು ಹೋಗಲು ಒಂದು ಸಂವತ್ಸರದ ಅನಂತರ ಹರ್ಯಶ್ವನ ಅರಮನೆಗೆ ಬಂದಿದ್ದ. ಮಾಧವಿ ತನ್ನ ಮನಸ್ಸನ್ನು ಎಷ್ಟೇ ಗಟ್ಟಿಮಾಡಿಕೊಂಡರೂ ತನ್ನ ಮಗುವನ್ನು ಬಿಟ್ಟಿರಲಾರದೆ ತನ್ನನ್ನು ಇಲ್ಲೇ ಬಿಟ್ಟುಬಿಡಿ ಎಂದು ಗಾಲವನನ್ನು ಕೇಳಿಕೊಂಡಳು. ಆದರೆ ಗಾಲವನು ಹರ್ಯಶ್ವನಿಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕಿತ್ತು. ಜೊತೆಗೆ ಮನುಷ್ಯರಾದ ನಾವು ಹಣೆಬರಹವನ್ನು ತಪ್ಪಿಸಲಾಗದೆಂಬುದನ್ನು ತಿಳಿಸಿ ತನ್ನ ಗುರಿಸಾಧನೆಗಾಗಿ ಮಾಧವಿಯನ್ನು ಕರದುಕೊಂಡು ಹೊರಟನು. ಇಡೀ ಹರ್ಯಶ್ವನ ಅಂತಃಪುರ ದುಃಖದಿಂದ ಮಾಧವಿಯನ್ನು ಬೀಳ್ಕೊಟ್ಟಿತು. ಮಾಧವಿ ತಾನು ಬಂದಹಾಗೆಯೇ ನಾರುಮಡಿಯುಟ್ಟು ಮಗುವನ್ನೊಮ್ಮೆ ಮುದ್ದಿಸಿ ಅದನ್ನು ಮಹಾರಾಣಿಯ ಕೈಗಿತ್ತು ಗಾಲವನ ಹಿಂದೆಯೇ ಹೊರಟುಬಿಟ್ಟಳು.

ಗಾಲವನು ಮಾಧವಿಯನ್ನು ಕರೆದುಕೊಂಡು ಅಶ್ವಮೇಧಯಾಗಕ್ಕೆ ಸಿದ್ಧ-ಗೊಳ್ಳುತ್ತಿದ್ದ **ಕಾಶೀನಗರದ ದಿವೋದಾಸ** ಮಹಾರಾಜನ ಬಳಿಗೆ ಹೊರಟಿದ್ದ. ಗಂಗಾ-

ನದಿಯ ಉತ್ತರದಂಡೆಯಲ್ಲಿ ಕಾಶೀನಗರವಿದ್ದು, ಅಲ್ಲಿನ ರಾಜ ದಿವೋದಾಸ ಮಹಾತ್ಮನಂತೆ ಎಂದು ಗಾಲವ ಮಾಧವಿಗೆ ಹೇಳಿದನು. ಜೊತೆಗೆ ಗಂಗಾಸ್ನಾನದಿಂದ ಪಾಪ ಪರಿಹಾರವಾಗುವುದೆಂದು, ಮಗುವನ್ನು ನೆನೆದು ದುಃಖಪಡದೇ 'ಇಹಲೋಕದ ಮೋಹ ತ್ಯಜಿಸಿ ಪರಲೋಕದ ಸಾಧನೆಗಳತ್ತ ಮುಖಮಾಡು' ಎಂದು ಗಾಲವ ಮಾಧವಿಗೆ ಉಪದೇಶ ಮಾಡಲು, ಮಾಧವಿ ತನ್ನ ಮನಸ್ಸಿನಲ್ಲಿ 'ಗಾಲವನೇ ಇಹಲೋಕದ ಗುರುದಕ್ಷಿಣೆಯ ಆಸೆಬಿಟ್ಟು ಪರಲೋಕಕ್ಕೆ ದಾರಿಯಾದ ತಪಸ್ಸು ಮಾಡಲಿ' ಎಂಬುದಾಗಿ ಪ್ರತಿಭಟಿಸಿದಳು. ಕಾಶೀನಗರಕ್ಕೆ ಹೋಗುವಾಗ ದಾರಿಮಧ್ಯೆ ಮಾಧವಿಗೆ ಆಯಾಸವಾಗಿ ನಡೆಯಲಾಗದೆ ಮೊದಲೇ ಬಾಣಂತಿಯಾಗಿದ್ದು, ಮಳೆಯಲ್ಲಿ ನೆನೆಯಲಾಗಿ ಜ್ವರ ಬಂದು ಕುಸಿದುಬಿದ್ದಳು. ಅಲ್ಲೇ ಸಮೀಪದಲ್ಲಿದ್ದ **ಧಾರುಣಿ ಋಷಿ**ಗಳ ಆಶ್ರಮಕ್ಕೆ ಗಾಲವ ಮಾಧವಿಯನ್ನು ಕರೆದೊಯ್ದನು. ಅಲ್ಲಿದ್ದ ಋಷಿ ಪತ್ನಿ **ವೇದವತಿ**ಯ ಶುಶ್ರೂಷೆಯಿಂದ ಮಾಧವಿ ಮೂರುದಿನಗಳಲ್ಲಿಯೇ ಜ್ವರದಿಂದ ಚೇತರಿಸಿಕೊಂಡಿದ್ದಳು. ಗಾಲವನು ಋಷಿ ಮತ್ತು ಅವನ ಪತ್ನಿಯಲ್ಲಿ ತನ್ನ ಕಥೆಯನ್ನು ಹೇಳಿಕೊಂಡಿದ್ದರಿಂದ, ಋಷಿ ಪತ್ನಿ ಮಾಧವಿಯ ದುಃಸ್ಥಿತಿಗಾಗಿ ಮರುಗಿದ್ದಳು. ಮಾಧವಿಯ ಚೇತರಿಕೆಯಿಂದ ಧೈರ್ಯಗೊಂಡಿದ್ದ ಗಾಲವ ಧಾರುಣಿ ಋಷಿಗಳ ಶಿಷ್ಯರಿಗೆ ಪ್ರವಚನವನ್ನೂ ನೀಡಿದ್ದನು.

ಗಾಲವನು ಮಾಧವಿಯೊಂದಿಗೆ ಕಾಶೀನಗರಕ್ಕೆ ಬಂದಾಗ ದಿವೋದಾಸ ರಾಜನು **ಅಶ್ವಮೇಧಯಾಗ**ಕ್ಕಾಗಿ ಸಿದ್ಧತೆ ನಡೆಸಿದ್ದನು. ದಿವೋದಾಸನು ಕೋಸಲದ ರಾಜಕುಮಾರಿ **ಸತ್ಯವತಿ**ಯನ್ನು ಮದುವೆಯಾಗಿ ಹತ್ತು ವರ್ಷ ಕಳೆದರೂ ಅವಳಿಂದ ಅವರಿಗೆ ಮಕ್ಕಳಾಗಿರಲಿಲ್ಲ. ದಿವೋದಾಸನ ತಂದೆ **ಭೀಮಸೇನ** ಮಹಾರಾಜನಿಗೂ ಇದೇ ಒಂದು ಚಿಂತೆಯಾಗಿದ್ದಿತು. ಒಮ್ಮೆ **ವೀತಹವ್ಯ**ನ ನಗರದ **ಹೈಹಯರಾಜ** ಇದ್ದಕ್ಕಿದ್ದಂತೆ ಕಾಶಿಯ ಮೇಲೆ ದಂಡೆತ್ತಿ ಬಂದಾಗ ರಣರಂಗದಲ್ಲಿ ವೀರಾವೇಶದಿಂದ ಹೋರಾಡಿದ ಭೀಮಸೇನರು ವೀರಸ್ವರ್ಗವನ್ನಪ್ಪಿದ್ದರು. ಒಂದು ಕಡೆ ತಂದೆಯನ್ನೂ ಕಳೆದುಕೊಂಡು, ಮತ್ತೊಂದು ಕಡೆ ವಂಶೋದ್ಧಾರಕನನ್ನೂ ಪಡೆಯದೆ ದಿವೋದಾಸ ಚಿಂತೆಯಲ್ಲಿದ್ದನು. ನೇಮಿಷ ಅರಣ್ಯದಲ್ಲಿ ಕುಲಪುರೋಹಿತರಾದ **ಭಾರದ್ವಾಜ ಮುನಿ**ಗಳ ಬಳಿ ಬಂದ ದಿವೋದಾಸನು ತಾನು ಮಹಾರಾಣಿ ಇಬ್ಬರೂ ಪುತ್ರಸಂತಾನವಿಲ್ಲದೆ ಸಂಕಟಪಡುತ್ತಿರುವ ವಿಚಾರವನ್ನು ತಿಳಿಸಿದನು. ಆದ್ದರಿಂದ ಭಾರದ್ವಾಜ ಮುನಿಯು "ಪುತ್ರಾರ್ಥವಾಗಿ ಅಶ್ವಮೇಧಯಾಗವನ್ನೂ **ಪುತ್ರಕಾಮೇಷ್ಟಿ**ಯನ್ನೂ ಮಾಡು, ನಿನ್ನ ಇಷ್ಟಾರ್ಥ ಫಲಿಸುತ್ತೆ"

ಎಂದು ಸಲಹೆ ನೀಡಿದರು. ಹಾಗಾಗಿ ದಿವೋದಾಸ ರಾಜನು ಅಶ್ವಮೇಧಯಾಗಕ್ಕೆ ಸಿದ್ಧತೆ ನಡೆಸಿದ್ದನು.

ಭಾರದ್ವಾಜ ಮುನಿಗಳ ಮಾರ್ಗದರ್ಶನದಂತೆ, ಸಮರ್ಥರಾದ ಅಂಗರಕ್ಷಕ-ರೊಡನೆ ಕುದುರೆಯನ್ನು ದೇಶ-ದೇಶಗಳ ಮೇಲೆ ಕಳಿಸುವುದು, ಹಾಗೆ ಬಿಟ್ಟ ಅಶ್ವವು ಒಂದು ಸಂವತ್ಸರ ಪೂರೈಸಿ ಬರುವವರೆಗೂ ದಿವೋದಾಸನು ದೀಕ್ಷೆಯಲ್ಲಿದ್ದು ಆಮೇಲೆ ಯಜ್ಞ ಆರಂಭಿಸುವುದಾಗಿತ್ತು. ಯಾಗ ಆರಂಭಿಸಿದ ಮೇಲೆ ಮಧ್ಯೆ ತೊಂದರೆಯಾಗ-ಬಾರದೆಂಬ ಎಚ್ಚರಿಕೆಯನ್ನೂ ನೀಡಿದ್ದರು. ಹಾಗಾಗಿ ದಿವೋದಾಸನು ಯಾಗದ ಚಿಂತೆಯಲ್ಲಿರಲು, ಅದೇ ಸಮಯಕ್ಕೆ ಗಾಲವನು ಮಾಧವಿಯೊಂದಿಗೆ ದಿವೋದಾಸನ ಅರಮನೆಗೆ ಬಂದನು.

ದಿವೋದಾಸ ರಾಜನು ಗಾಲವ ಋಷಿಗಳಿಗೆ ಅರ್ಘ್ಯಪಾದ್ಯಾದಿಗಳನ್ನು ನೀಡಿ ಸತ್ಕರಿಸಿದನು. ಅನಂತರ ರಾಜನು ಗಾಲವನ ಜೊತೆಯಲ್ಲಿದ್ದ ನಾರುಮಡಿಯಲ್ಲಿರುವ ಮಾಧವಿಯನ್ನು ಕಂಡು ಕುತೂಹಲಗೊಂಡಿದ್ದನು. ಅದನ್ನರಿತ ಗಾಲವನು ದಿವೋದಾಸನನ್ನು ಕುರಿತು, "ಗುರುದಕ್ಷಿಣೆಗಾಗಿ ಚಂದ್ರವಂಶದ ಯಯಾತಿರಾಜ ಮಗಳಾದ ಈಕೆಯನ್ನು ನನಗೆ ದಾನ ಮಾಡಿದ. ಚಕ್ರವರ್ತಿಯಾಗುವ ಮಗನನ್ನು ಪಡೆಯುವಂಥಾ ಶುಭಲಕ್ಷಣಗಳುಳ್ಳ ಹೆಣ್ಣು ಇವಳು. ಇವಳಿಂದ ನೀನು ಸಂತಾನ ಪಡಿ ಮಹಾರಾಜ. ಈ ಕನ್ಯೆಗೆ ಬದಲಾಗಿ ಇಡೀ ಮೈ ಬೆಳ್ಳಗೂ ಒಂದು ಕಿವಿ ಕಪ್ಪಾಗೂ ಇರುವ ಆರುನೂರು ಕುದುರೆ ಕೊಟ್ಟರೆ ಸಾಕು" ಎಂದು ಹೇಳಿದ ಗಾಲವ ತನ್ನ ಇಷ್ಟಾರ್ಥವನ್ನು ರಾಜನ ಮುಂದಿಟ್ಟನು.

ಗಾಲವನ ಮಾತಿನ ನಡುವೆ ಮಾಧವಿ ದಿವೋದಾಸ ರಾಜನತ್ತ ದೃಷ್ಟಿಬೀರಿದಳು. ದಿವೋದಾಸನು ಸುವರ್ಣವಾದ ತೋಳ್ಬಳೆಯನ್ನೂ ಅತ್ಯುತ್ತಮವಾದ ಕುಂಡಲಗಳನ್ನೂ ಚಿನ್ನದ ಸರಿಗೆಯಲ್ಲಿ ಪೋಣಿಸಲ್ಪಟ್ಟ ರತ್ನಹಾರಗಳನ್ನೂ ಹಾಕಿಕೊಂಡಿದ್ದ, ಎತ್ತರದ ನಿಲುವಿನ ಆಜಾನುಬಾಹು, ಮಧ್ಯವಯಸ್ಸು ಸಮೀಪಿಸುತ್ತಿದ್ದರೂ ಎಳೆತನವನ್ನು ತೋರಿಸುತ್ತಿದ್ದ ಅಂಗಸೌಷ್ಠವ, ಕುಹಕನಗೆ ತುಂಬಿದ ಕಣ್ಣುಗಳನ್ನು ಹೊಂದಿದ್ದನು. ದಿವೋದಾಸ ಮಾಧವಿಯನ್ನು ನೋಡಿದಾಕ್ಷಣ ಮನಸೂರೆಗೊಂಡಿದ್ದರಿಂದ ಆಕೆಯನ್ನು ಪಡೆಯಲು, ಗಾಲವನು ಕೇಳಿದ ಕನ್ಯಾಶುಲ್ಕರೂಪದ ಆ ವಿಶೇಷ ಆರುನೂರು ಕುದುರೆಗಳನ್ನು ಕೊಡಲು ಮುಂದಾದನಾದರೂ, ಆತನ ಬಳಿ ಇದ್ದದ್ದೂ ಇನ್ನೂರೇ ಕುದುರೆಗಳು. ಹಾಗಾಗಿ ಗಾಲವನು ರಾಜನಿಗೆ ಒಬ್ಬ ಮಗ ಹುಟ್ಟುವ ತನಕ

ಮಾಧವಿಯನ್ನು ತಮ್ಮ ಬಳಿ ಬಿಟ್ಟಿದ್ದು, ಅನಂತರ ಬೇರೆ ರಾಜರಲ್ಲಿಗೆ ಕರೆದೊಯ್ದು ಉಳಿದ ಅಶ್ವಗಳನ್ನು ಪಡೆಯುತ್ತೇನೆಂದು ಸಲಹೆ ನೀಡಿದನು. ಗಾಲವನ ಮತಿಗೆ ತನ್ನ ಅಭ್ಯಂತರವೇನೂ ಇಲ್ಲವೆಂದು ತಿಳಿಸಿದ ರಾಜನು, ತಾನು ಪರನಾರೀ ಸಹೋದರ-ನಾಗಿರುವುದರಿಂದ ಮಾಧವಿಯನ್ನು ಪರಿಗ್ರಹಿಸಲು ಪಾಣೀಗ್ರಹಣವಾಗಬೇಕೆಂದನು. ಅಂತೆಯೇ ಗಾಲವನು ಶಾಸ್ತ್ರೋಕ್ತವಾಗಿ ಮಾಧವಿಯ ಕೈಯನ್ನು ರಾಜನ ಹಸ್ತದಲ್ಲಿರಿಸಿ ದಾನಜಲ ಬಿಟ್ಟನು.

ದಿವೋದಾಸನ ಬಳಿ ಗಾಲವನಾಗಲೀ ಮಾಧವಿಯಾಗಲೀ ತಾನು ಕನ್ಯೆಯಲ್ಲದ್ದು, ಹರ್ಯಶ್ವನಲ್ಲಿ ಇದ್ದು ಬಂದದ್ದು, ಒಂದು ಮಗುವಿನ ತಾಯಿಯಾಗಿದ್ದು ಇದ್ಯಾವುದೇ ವಿಚಾರವನ್ನು ತಿಳಿಸಿರಲಿಲ್ಲ. ಹಾಗೆಯೇ ದಿವೋದಾಸನು ಕೂಡಾ ಮಾಧವಿಯನ್ನು ಪಾಣೀಗ್ರಹಣವಾಗುವ ವಿಷಯವನ್ನು ತನ್ನ ಪತ್ನಿ ಸತ್ಯವತಿಗೂ ತಿಳಿಸಿರಲಿಲ್ಲ. ಆದರೆ ಸತ್ಯವತಿಗೆ ಈ ಪಾಣಿಗ್ರಹಣದ ಸುದ್ದಿ ತಿಳಿದು ಕ್ರುದ್ಧಳಾಗಿದ್ದಳು. ಚಾಣಾಕ್ಷ ರಾಜ ಮಡದಿಯನ್ನು ಸಂತೈಸಿ, ಮಾಧವಿ ಒಂದು ಮಗುವಾದ ಮೇಲೆ ಹಿಂತಿರುಗುವ ಕರಾರಿನ ವಿಚಾರವನ್ನು ತಿಳಿಸಿದನು. ಹಾಗಾಗಿ ಸತ್ಯವತಿಗೆ ಮಾಧವಿ ತನ್ನ ಸವತಿಯಾಗಿ ಗಂಡನ ಪ್ರೀತಿಯಲ್ಲಿ ಪಾಲು ಕೇಳಲು ಬಂದವಳಲ್ಲ ಎನಿಸಿತ್ತು. ಮಾಧವಿಗೆ ಮಗುವಾದರೆ, ತನಗೂ ಪುತ್ರಕಾಮೇಷ್ಟಿಯಾದ ಮೇಲೆ ಆಗುವ ಮಗುವಿನೊಂದಿಗೆ ಸಾಕಿಕೊಳ್ಳುತ್ತೇನೆ ಎಂಬುದಾಗಿ ಸತ್ಯವತಿ ಉದಾರತನದಿಂದ ನುಡಿದಿದ್ದಳು.

ದಿವೋದಾಸನ ಕಾಶೀನಗರವು ಅಶ್ವಮೇಧಯಾಗಕ್ಕಾಗಿ ಸಜ್ಜುಗೊಂಡಿತು. ಈ ಅಶ್ವಮೇಧಯಾಗ ಯಾವುದೇ ಲೋಪಗಳಿಲ್ಲದೇ ಭಾರದ್ವಾಜ ಮುನಿಗಳ ಸಾರಥ್ಯದಲ್ಲಿ ಮೂರುದಿನಗಳ ಕಾಲ ನಡೆದಿತು. ಯಾಗದಲ್ಲಿ ಮುನ್ನೂರು ಪಶುಗಳೊಡನೆ ಅಶ್ವಮೇಧ ಯಾಗದ ಅಶ್ವರತ್ನವೂ ಬಳಸಲ್ಪಟ್ಟಿತು. ರಾಜಪರಿವಾರದೊಂದಿಗೆ ಮಾಧವಿಯೂ ಯಾಗದಲ್ಲಿ ಪಾಲ್ಗೊಂಡಿದ್ದಳು. ಒಂದು ಸಂವತ್ಸರದವರೆಗೆ ರಾಜ್ಯಗಳನ್ನು ಸುತ್ತಿಬಂದ ಕುದುರೆಯನ್ನು ಅಗ್ನಿಕುಂಡಕ್ಕೆ ಸಮರ್ಪಿಸಿದ್ದನ್ನು ನೋಡಿದ ಮಾಧವಿಗೆ ಆ ಕುದುರೆಯ ಸ್ಥಿತಿ ಕಂಡು ಮರುಕವಾಯಿತು. ಒಬ್ಬ ರಾಜನ ವಂಶೋಭಿವೃದ್ಧಿಗಾಗಿ ಅಥವಾ ಸ್ವರ್ಗಪ್ರಾಪ್ತಿಗಾಗಿ ಕುದುರೆಗಳನ್ನು ಹಿಂಸಿಸುವುದನ್ನು ಕಂಡು ಮಾಧವಿಗೆ ಖೇದವೆನಿಸಿತ್ತು.

ಅಶ್ವಮೇಧ ಮುಗಿದ ಮರುದಿನವೇ ಪುತ್ರಕಾಮೇಷ್ಟಿಯಾಗ ನಡೆದಿತ್ತು. ಈ ಯಾಗದಲ್ಲಿ ಯಜ್ಞಕುಂಡದ ಮುಂದೆ ಸುವರ್ಣ ಕಳಶವೊಂದರಲ್ಲಿ ವಿಶೇಷವಾಗಿ ತಯಾರಿಸಿದ ಪಾಯಸವನ್ನು ಇಡಲಾಗಿತ್ತು. ಅದಕ್ಕೆ ಪೂಜೆ ಪುನಸ್ಕಾರಗಳನ್ನು

ಮಾಡಿದ್ದು, ದೇವತೆಗಳು ಆಶೀರ್ವದಿಸಿಕೊಟ್ಟ ಆ ಪಾಯಸವನ್ನು ಮಹಾರಾಣಿಯರು ಕುಡಿದರೆ ಮಕ್ಕಳಾಗುತ್ತವೆಂದು ನಂಬಿದ್ದು, ಅಂತೆಯೇ ಸತ್ಯವತಿಯಾದಿಯಾಗಿ ಉಳಿದ ಚಿಕ್ಕರಾಣಿಯರೆಲ್ಲರೂ ಪಾಯಸ ಕುಡಿದರು. ಆದರೆ ಆ ಪಾತ್ರೆ ಮಾಧವಿಯ ಕೈಗೆ ಬರುವಹೊತ್ತಿಗೆ ಪೂರಾ ಬರಿದಾಗಿತ್ತು. ಮೇಲಾಗಿ ಮಾಧವಿಗೆ ಅದರಲ್ಲಿ ಆಸಕ್ತಿಯೂ ಇದ್ದದ್ದಿಲ್ಲ. ಪಾಯಸ ಕುಡಿದ್ರೆ ಮಾತ್ರ ಮಕ್ಕಳಾಗುತ್ತವೆಂಬ ವಾದವನ್ನು ನಿರಾಕರಿಸಿದ್ದಳು.

ಯಾಗಗಳೆಲ್ಲಾ ಮುಗಿದಿರಲು ದಿವೋದಾಸರು ತಮ್ಮ ಬಯಕೆಯಂತೆ ಮಾಧವಿ-ಯನ್ನು ಹೊಂದಲು ಬಯಸಿದ್ದರು. ಅದಕ್ಕಾಗಿ ದಾಸಿ **ಮೇಖಲೆ** ಮಾಧವಿಯನ್ನು ಶೃಂಗಾರಗೊಳಿಸಿದ್ದಳು. ಆಗ ಮಾಧವಿಯ ರೂಪಸೌಂದರ್ಯವನ್ನು ಕಂಡು ಬೆರಗಾಗಿದ್ದಳು. ಈ ನಡುವೆ ಯಾವುದೋ ದಾಸಿಯ ಮಗುವೊಂದು ಅಳುತ್ತಿದ್ದ ಧನಿ ಕೇಳಿದ ಮಾಧವಿಗೆ ಈ ಮೊದಲು ಹರ್ಯಶ್ವನಲ್ಲಿ ಬಿಟ್ಟು ಬಂದ ತನ್ನ ಮಗು ವಸುಮಂತನನ್ನು ಯಾರಾದಾರೂ ಎತ್ತಿಕೊಂಡು ಬಂದರೋ ಎಂದು ಭಯಗೊಂಡಿದ್ದಳು. ಅಲಂಕಾರಗೊಂಡಿದ್ದ ಮಾಧವಿಯ ಬಳಿಗೆ ಕಾಮಾತುರನಾಗಿ ಬಂದ ದಿವೋದಾಸನು ತನ್ನ ಮನೋಯಿಚ್ಛೆಯಂತೆ ಅನುಭವಿಸಿದನು. ಮಾಧವಿ ತನಗಾದ ಮತ್ತೊಂದು ನರಕಯಾತನೆಯನ್ನು ತಾಳಲಾರದೆ ದುಃಖ ತುಂಬಿ ಅಳಬೇಕೆನಿಸಿದರೂ ಅವಳ ಕಣ್ಣೀರೇ ಬತ್ತಿಹೋಗಿದ್ದವು.

ಇದಾದ ನಂತರ ಮೇಖಲಾ ಒಮ್ಮೆ ಮಾಧವಿಯ ಕೊಠಡಿಗೆ ಬಂದಾಗ ಆ ದಾಸಿಯ ಕಣ್ಣುಗಳು ಕೆಂಪಾಗಿದ್ದವು. ಹಾಗಾಗಿ ಮಾಧವಿ ತನ್ನೊಂದಿಗೆ ಈ ಅರಮನೆಯಲ್ಲಿ ಪ್ರಿಯವಾಗಿ ವರ್ತಿಸುವ ಮೇಖಲೆಯ ದುಃಖವೇನೆಂದು ಕೇಳಿದಳು. ಮೇಖಲೆಗೆ ಒಬ್ಬ ತಮ್ಮನಿದ್ದು ಅವನು ಸೈನ್ಯಕ್ಕೆ ಸೇರಬೇಕೂಂತ ರಾಜಾಜ್ಞೆ, ಅದು ಅವನಿಗೆ ಇಷ್ಟವಿರಲಿಲ್ಲ. ಹಾಗಾಗಿ ವ್ಯಾಪಾರ ಮಾಡ್ಬೇಕೂಂತ ತಲೆಮರೆಸಿಕೊಳ್ಳಲು, ಅವನೆಲ್ಲಿಹೋದ ಅಂತ ರಾಜಭಟರು ತಾಯೀನ ಕೇಳಲು, ಆಕೆ ಗೊತ್ತಿಲ್ಲವೆಂದರೂ ಬಿಡದೆ ಅವಳನ್ನು ಥಳಿಸಿದ್ದರು. ಇದನ್ನು ತಿಳಿದು ಮೇಖಲೆ ದುಃಖಗೊಂಡಿದ್ದಳು. ಅಲ್ಲದೇ ತನ್ನನ್ನೂ ಸಹ ರಾಜರು ಬರೀ ನೂರು ವರಹಕ್ಕೆ ಕೊಂಡುಕೊಂಡಿದ್ದ ವಿಚಾರವನ್ನೂ ಮೇಖಲೆ ಮಾಧವಿಗೆ ಹೇಳಿದಳು. ಮಾಧವಿಗೆ ತನ್ನದು ದಾನವಾದರೆ, ಮೇಖಲೆಯದು ಮಾರಾಟ, ತಾವಿಬ್ಬರೂ ಸಮಾನ ದುಃಖಿಗಳು ಎನಿಸಿತು.

ದಿವೋದಾಸನು ಓಲಗದಲ್ಲಿ **ಮಂದಾರಮಾಲೆಯ** ನೃತ್ಯವನ್ನೇರ್ಪಡಿಸಿದ್ದ. ರಾಣೀ ವಾಸದವರೆಲ್ಲಾ ಬರಬೇಕೆಂದು ರಾಜಾಜ್ಞೆಯಾಗಿದ್ದರಿಂದ, ದಾಸಿ ಮೇಖಲೆಯ

ಒತ್ತಾಯಕ್ಕೆ ಮಣಿದು ಇಷ್ಟವಿಲ್ಲದಿದ್ದರೂ ಮಾಧವಿಯೂ ಬಂದಿದ್ದಳು. ಮಂದಾರಮಾಲೆ ಓರ್ವ ಅಪೂರ್ವ ನೃತ್ಯಗಾರ್ತಿ, ದೇವದಾಸಿಯೂ ಹೌದು. ಮಾಧವಿ ನೃತ್ಯನೋಡಲು ಮಹಾರಾಣಿ ಸತ್ಯವತಿಯ ಪಕ್ಕದಲ್ಲೇ ಕೂರಲು, ಅವಳ ಸೌಂದರ್ಯ ಕಂಡು ಸತ್ಯವತಿಗೆ ಆಶ್ಚರ್ಯವೆನಿಸಿತಾದರೂ, ಮಹಾರಾಜರು ಸತ್ಯವತಿಗೆ 'ನಿನ್ನ ರೂಪದ ಮುಂದೆ ಮಾಧವಿಯ ರೂಪವನ್ನು ನೀವಾಳಿಸಿ ತೆಗೀಬೇಕು' ಎಂದು ಹೇಳಿದ್ದು ಸುಳ್ಳು ಎಂಬುದರ ಅರಿವಾಗಿ ಕೋಪಗೊಂಡಿದ್ದಳು. ಆದರೆ ಮಾಧವಿ ಗರ್ಭಿಣಿ-ಯಾಗಲು, ತಾನು ಗರ್ಭಧರಿಸಲಿಲ್ಲವೆಂದು ಬೇಸರಗೊಳ್ಳದೆ ಸಂತಸಪಟ್ಟಿದ್ದಳು. ಜೊತೆಗೆ ಸತ್ಯವತಿ ಮಾಧವಿಗೆ ಆಕೆಯ ಅವ್ವೆಯ ರೀತಿಯಲ್ಲೇ ಪ್ರೀತಿ, ವಾತ್ಸಲ್ಯ ತೋರಿ ಅವಳ ವನವಿಹಾರದ ಬಯಕೆಯನ್ನು ಈಡೇರಿಸಿದಳು. ಈ ಮಧ್ಯೆ ದಿವೋದಾಸನು ಮಾಧವಿ ಗರ್ಭಿಣಿ ಎಂದು ಗೊತ್ತಿದ್ದರೂ ಅವಳ ಮೇಲೆರಗಿ ಕ್ರೌರ್ಯ ಪ್ರದರ್ಶಿಸಿದ್ದನು. ರಾಜನ ಕ್ರೂರ ಹಿಂಸೆಯನ್ನು ಸಹಿಸಿಯೂ ಮಾಧವಿ ಗಂಡುಮಗುವಿಗೆ ಜನ್ಮ ನೀಡಿದಳು. ರಾಜನ ಆನಂದಕ್ಕೆ ಪಾರವೇ ಇರಲಿಲ್ಲ. ವೀತಹವ್ಯನನ್ನು ಕೊಲ್ಲುವಂಥ ಮಗ ಹುಟ್ಟಿದನಲ್ಲ ಎಂದು ಸಂಭ್ರಮಿಸಿದ್ದ. ಆ ಮಗುವಿಗೆ **ಪ್ರತರ್ದನ** ಎಂದು ನಾಮಕರಣ ಮಾಡಿದರು.

ಗಾಲವನು ಒಂದು ಸಂವತ್ಸರದ ನಂತರ ಮಾಧವಿಯನ್ನು ಕರೆದುಕೊಂಡು ಹೋಗಲು ದಿವೋದಾಸನ ಅರಮನೆಗೆ ಬಂದನು. ಗಾಲವ ಮಾಧವಿಯನ್ನು ನೋಡಿ ಆಶ್ಚರ್ಯಗೊಂಡನು. ಮಾಧವಿ ಎರಡು ಮಕ್ಕಳನ್ನು ಹೆತ್ತರೂ ಆಕೆ ಇನ್ನೂ ಕನ್ಯೆಯ ಹಾಗೇ ಕಾಣುತ್ತಿದುದು ಗಾಲವನಿಗೆ ಆಶ್ಚರ್ಯ ತಂದಿತ್ತು. ಗಾಲವ ಮಾಧವಿಯ ಯೋಗಕ್ಷೇಮ ತಿಳಿದು, ಮಗುವಿಗೆ ಆಶೀರ್ವದಿಸಿ ಹೊರಡಲನುವಾದನು. ಗಾಲವ ಮಹಾರಾಜನಿಗೆ "ನೀನು ಕೊಡಬೇಕಾದ ಅಶ್ವಗಳು ಮಾತ್ರ ನಿನ್ನಲ್ಲೇ ಇರ್ಲಿ. ನಾನು ಬೇಕಾದಾಗ ಹೇಳಿ ಕಳಿಸ್ತೀನಿ ಅಲ್ಲಿಗೆ ಕಳಿಸುವೆಯಂತೆ" ಎಂದು ಹರ್ಯಶ್ವನಿಗೆ ಹೇಳಿದಂತೆಯೇ, ದಿವೋದಾಸನಿಗೂ ಹೇಳಿ, ಮಾಧವಿಯನ್ನು ಕರೆದುಕೊಂಡು ಹೊರಟನು. ದಾಸಿಯರಾದಿಯಾಗಿ ಎಲ್ಲರೂ ಮಾಧವಿಯನ್ನು ಕಾಶೀನಗರದಿಂದ ದುಃಖದಲ್ಲೇ ಬೀಳ್ಕೊಟ್ಟರು.

ದೋಣಿಯಲ್ಲಿ ಗಂಗಾನದಿಯನ್ನು ದಾಟಿ ಕಾಡಿನತ್ತ ಪ್ರಯಾಣ ಬೆಳೆಸಿದ ಗಾಲವ ಮತ್ತು ಮಾಧವಿಯರಿಬ್ಬರು ಆಯಾಸವಾಗಿದ್ದರಿಂದ, ಅಲ್ಲೇ ಇದ್ದ ಆಶ್ರಮವೊಂದರ ಬಳಿ ಹೋದರು. ಋಷಿ-ಋಷಿಪತ್ನಿಗಳಿಬ್ಬರೂ ಅತಿಥಿಗಳನ್ನು ಆದರದಿಂದ ಬರಮಾಡಿ-ಕೊಂಡರು. ಮಾಧವಿಯ ಚರಿತ್ರೆಯನ್ನು ಕೇಳಿ ಋಷಿಪತ್ನಿ ಮರುಕಗೊಂಡು, ಅದೆಲ್ಲಾ

ದೈವಚಿತ್ತ ಎಂದು ಹೇಳಿ ಸಮಾಧಾನಪಡಿಸಿದಳು. ಗಾಲವ-ಮಾಧವಿಯು ಮಾರ್ಗಾಯಾಸದ ಪರಿಹಾರಕ್ಕಾಗಿ ಮೂರು ದಿನಗಳ ಕಾಲ ಆಶ್ರಮದಲ್ಲೇ ಉಳಿದು, ಅನಂತರ ಪ್ರಯಾಣ ಮುಂದುವರಿಸಿದರು. ಮುಂದೆ ಹೋದಂತೆ ಅವರಿಗೆ ಕೌಶಲದೇಶ ಸಿಗಲು, ಅಲ್ಲಿನ ರಾಜ ಗಾಲವ ಮಾಧವಿಯನ್ನು ಗೌರವದಿಂದ ಬರಮಾಡಿಕೊಂಡನು. ಆತನದು ಸಣ್ಣದೇಶವಾಗಿದ್ದು, ಅವನ ಬಳಿ ಐವತ್ತು ಕುದುರೆಗಳು ಮಾತ್ರ ಇದ್ದವು. ಹಾಗಾಗಿ ಅವನು, ಮುಂದೆ **ಭೋಜದೇಶ**ವಿದ್ದು ಅಲ್ಲಿಯ ರಾಜ **ಉಶೀನರರಾಜ**, ಆತ ಬಲಾಢ್ಯ, ಆತನ ಬಳಿ ಹೋದರೆ ನಿಮ್ಮ ಇಷ್ಟಾರ್ಥ ಸಿದ್ಧಿಸುತ್ತದೆ ಎಂದು ಗಾಲವನಿಗೆ ಹೇಳಿದನು. ಗಾಲವನು ಕೌಶಲದ ರಾಜನ ಆತಿಥ್ಯ ಸ್ವೀಕರಿಸಿ ಅವನ ಸಲಹೆಯಂತೆ ಭೋಜದೇಶಕ್ಕೆ ಹೋದನು.

ಉಶೀನರರಾಜನು ಗಾಲವಮುನಿಯು ಕನ್ಯಾಶುಲ್ಕವಾಗಿ ಗುರುದಕ್ಷಿಣೆಗೆಂದು ಕೇಳಿದ ಆ ವಿಚಿತ್ರ ಕುದುರೆಗಳನ್ನು ನೀಡಲು ಒಪ್ಪಿದನಾದರೂ ಆತನ ಬಳಿ ಇದ್ದದ್ದು ಇನ್ನೂರು ಕುದುರೆಗಳೇ. ಹಾಗಾಗಿ ರಾಜನು ಕುದುರೆಗಳನ್ನು ಗಾಲವನಿಗೆ ನೀಡಿ ಮಾಧವಿಯನ್ನು ಪಡೆದನಾದರೂ, ಆ ವಿಚಿತ್ರ ಕುದುರೆಗಳನ್ನು ವಿಶ್ವಾಮಿತ್ರರು ಗುರುದಕ್ಷಿಣೆಯಾಗಿ ಗಾಲವನಿಂದ ಪಡೆಯುವ ಹಿಂದಿನ ಉದ್ದೇಶವೇನೆಂಬುದನ್ನು ತಿಳಿಯದೆ ಗೊಂದಲದಲ್ಲಿದ್ದನು. ಇದೇ ಸಮಯಕ್ಕೆ ಬೇಹುಗಾರರಿಂದ, **ಮಾಹೆ**ಯ ರಾಜ ಭೋಜರಾಜ್ಯದ ವಿರುದ್ಧ ಸಮರಕ್ಕೆ ಸನ್ನದ್ಧನಾಗುತ್ತಿದ್ದಾನೆಂಬ ಸುದ್ಧಿ ತಿಳಿದು-ಬಂದಿತು. ಆದ್ದರಿಂದ ಉಶೀನರನು ಶಾಂತಿಕಾಲವೆಂದು ನಿದ್ರಿಸುತ್ತಿದ್ದ ಆಯುಧಾಗಾರ-ವನ್ನು ಎಚ್ಚರಿಸುವಂತೆ ಭೋಜರಾಜ್ಯವನ್ನು ಸಮರಕ್ಕೆ ಸನ್ನದ್ಧಗೊಳಿಸಿದನು.

ಉಶೀನರನ ಪತ್ನಿಗೆ ಮಾಧವಿಯ ವಿಚಾರ ತಿಳಿದು, ಪ್ರತಿಷ್ಠಾನನಗರದ ರಾಜಕುಮಾರಿ ಈ ಮಾಧವಿ ಎಂಬುದು ಗೊತ್ತಾಗಿ, ಮಹಾರಾಜರನ್ನು ಲೇವಡಿ ಮಾಡಿದಳು. ಇದರಿಂದ ಕೋಪಗೊಂಡ ಉಶೀನರನು ಮಾಧವಿಯಿದ್ದ ಗೃಹದತ್ತ ಬಂದಿದ್ದನು. ಬಂದವನು ಮಾಧವಿಯ ರೂಪರಾಶಿಯನ್ನು ಕಂಡು ಮೋಹಗೊಂಡನು. ಉಶೀನರನು ಮಾಧವಿಯನ್ನು ಕಾಮಿಸಿ ಆಕೆಯ ಸನಿಹ ಬಂದಾಗ, ಮಾಧವಿಯು ತಾನು ಈ ಮೊದಲೇ ಇಬ್ಬರು ರಾಜರೊಂದಿಗೆ ಇದ್ದವಳೆಂದು ಹೇಳಿದಳು. ಆದರೂ ಬಿಡದೆ ಉಶೀನರನು ಮಾಧವಿಯ ರೂಪವನ್ನು ಇಂದ್ರಲೋಕದ ರಂಭೆ ಊರ್ವಶಿಯರಂಥ ಸೂಳೆಯರ ರೂಪ ನಿನ್ನದು ಎಂದು ಹೇಳಿ, ಮಾಧವಿಯನ್ನು ಸುಖಿಸಿದನು. ಉಶೀನರನಿಗೆ ಈಗಾಗಲೇ ಏಳು ವರ್ಷದ ಒಬ್ಬ ಮಗ, ನಾಲ್ಕು ವರ್ಷದ ಒಬ್ಬಳು ಮಗಳಿದ್ದೂ, ಮತ್ತೆ ತನ್ನಿಂದ ಒಂದು ಮಗುವನ್ನು

ಬಯಸುವುದೇಕೆಂದು ಮಾಧವಿ ಆಲೋಚನೆಗೊಳಗಾಗಿದ್ದಳು. ಅಂತಃಪುರದಲ್ಲಿ ಯಾರೊಂದಿಗೂ ಮಾತನಾಡದೇ ಮೌನವಾಗಿರುತ್ತಿದ್ದ ಮಾಧವಿ, ಒಮ್ಮೊಮ್ಮೆ ರಾತ್ರಿಯೆಲ್ಲಾ ನಿದ್ದೆಬಾರದೆ ತನ್ನವ್ವೆ ಸಖಿ ಚಾರುನೇತ್ರೆಯರನ್ನು ನೆನೆದು ಸಂಕಟಪಡುತ್ತಿದ್ದಳು. ಈ ನಡುವೆ ಉಶೀನರನು ಮಾಧವಿಯನ್ನು ವಿಹಾರದ ನೆಪದಲ್ಲಿ ಚಂಬಲ್‌ನದಿಯ ಸಮೀಪದ ಗುಹೆಯೊಂದಕ್ಕೆ ಕರೆದೊಯ್ದು ಆಶೆಯ ಕಣ್ಣುಗಳಿಂದ ಅವಳನ್ನೇ ದಿಟ್ಟಿಸಿದ್ದ.

ಭೋಜರಾಜ್ಯದ ಮೇಲೆ ಮಾಹೇಯ ರಾಜ **ಮಾಹಿಷ್ಮತಿ** ಚತುರಂಗ ಬಲದೊಡನೆ ದಂಡೆತ್ತಿ ಬರುತ್ತಿದ್ದಾನೆಂಬ ಸುದ್ದಿ ಬೇಹುಗಾರರ ಮುಖಾಂತರ ಉಶೀನರನಿಗೆ ತಲುಪಿತು. ಆದ್ದರಿಂದ ರಾಜ ಹೆಂಡತಿಯರೊಡನೆ ನಲಿಯುವುದನ್ನು ಬಿಟ್ಟು ಸಮರಸಿದ್ಧತೆಗೆ ಪೂರ್ಣ ಗಮನಕೊಟ್ಟ. ಅಂತಃಪುರಲ್ಲೆಲ್ಲಾ ಸಮರದ ಬಗ್ಗೆ ಚರ್ಚೆ ನಡೆದಿತ್ತು. ಆದರೆ ಮಾಧವಿ ನಿತ್ರಾಣಗೊಂಡು ಅನಾರೋಗ್ಯಕ್ಕೆ ತುತ್ತಾಗಿದ್ದಳು. ಹಾಗಾಗಿ ವೃದ್ಧದಾಸಿಯೊಬ್ಬಳು ರಾಜವೈದ್ಯರು ಕೊಟ್ಟಿದ್ದ ಕಷಾಯ ಕುಡಿಸಿದ್ದಳು. ಅಂತಃಪುರದ ಕೆಲವು ದಾಸಿಯರು ಯುದ್ಧದ ಭೀಕರ ಪರಿಣಾಮದಿಂದಾಗಿ ತನ್ನವರನ್ನು ಕಳೆದುಕೊಂಡಿದ್ದರ ನೆನಪಾಗಿ ಅತ್ತಿದ್ದರು. ಯುದ್ಧಕ್ಕಾಗಿ ಆಯುಧಗಳೆಲ್ಲ ಸಿದ್ಧಗೊಳ್ಳಲು ಉಶೀನರನ ಆಜ್ಞೆಯಂತೆ ವಿಜಯಯಾತ್ರೆ ಆರಂಭವಾಗಿತ್ತು. ಉಶೀನರ ಸೈನ್ಯವನ್ನು ಕಂಡಾಗ ಸಮುದ್ರವೇ ಮುಂದೆ ಚಲಿಸುವಂತೆ ಕಾಣುತ್ತಿತ್ತು. ಮಾಹಿಷ್ಮತಿ ಮತ್ತು ಉಶೀನರನ ಸೈನ್ಯಗಳೆರಡೂ ಒಂದು ಘಳಿಗೆಯೊಳಗೆ ಯುದ್ಧ ಆರಂಭಿಸಿದವು. ಉಶೀನರನ ಸೈನಿಕರು ವೀರಾವೇಶದಿಂದ ಹೋರಾಡಿ, ಯುದ್ಧದ ಮಾರಿಗೆ ಅವರು ರಕ್ತದ ಕೋಡಿ ಹರಿಸಿದರು. ಅಂದರೆ ಉಶೀನರ ಸೈನ್ಯ ಮಾಹೀಷ್ಮತಿಯ ಸೈನ್ಯವನ್ನು ಸೋಲಿಸಿತು. ಸೋತರಾಜನು ಉಶೀನರೊಂದಿಗೆ ಮೈತ್ರಿಬಯಸಿ ಉಡುಗೊರೆಗಳನ್ನು ನೀಡಿದ್ದಲ್ಲದೇ, ತನ್ನ ಮಗಳು ಮಹಿಮಾಳನ್ನು ಶೂರನಾದ ಉಶೀನರಿಗೆ ವಿವಾಹ–ಮಾಡಿಕೊಡುವುದಾಗಿ ಪ್ರತಿಜ್ಞೆ ಮಾಡಿದನು. ಉಶೀನರನ ವಿಜಯೀ ಸೈನ್ಯ ರಾಜಧಾನಿಗೆ ಮರಳಿದಾಗ ಬಲು ಸಂಭ್ರಮದ ಸ್ವಾಗತ ಸಿಕ್ಕಿತು.

ಯುದ್ಧ ಮುಗಿದು ವಿಜಯ ಸಾಧಿಸಿದ ಉಶೀನರನ ಮದುವೆಗಾಗಿ ಆತನ ಅರಮನೆ ಶೃಂಗಾರಗೊಂಡಿತ್ತು. ಶುಭಮುಹೂರ್ತದಲ್ಲಿ ಮಾಹಿಷ್ಮತಿ ರಾಜ ತನ್ನ ಮಗಳು **ಮಹಿಮಾ**ಳನ್ನು ಉಶೀನರಿಗೆ ಧಾರೆಯೆರೆದನು. ಮಹಿಮಾ ಸಾಧಾರಣ ಎತ್ತರದ ಶ್ಯಾಮಲವರ್ಣದ ವಧುವಾಗಿದ್ದಳು. ಮಾಧವಿ ಉಶೀನರನನ್ನು ಕ್ಷಣಕ್ಷಣಕ್ಕೂ

ಹೊಸ ಹೂವನ್ನು ಅರಸಿಕೊಂಡು ಹೋಗುವ ಭ್ರಮರ, ನಿಯತ್ತಿಲ್ಲದ ಮನುಷ್ಯ ಎಂದು ಹೇಸಿಗೆಪಟ್ಟಿದ್ದಳು.

ಮಾಧವಿಯ ಪ್ರೀತಿ-ಪ್ರೇಮಗಳ ಸುಕುಮಾರ ಭಾವನೆಗಳು ಪ್ರತಿಷ್ಠಾನನಗರ ಬಿಟ್ಟಾಗಲೇ ನೆಲಸಮವಾಗಿದ್ದವು. ಆಕೆಗೆ ಉಳಿದಿರುವುದು ತಾನು ಹಿಂದೆ ಬಿಟ್ಟುಬಂದ ಮಕ್ಕಳ ನೆನಪೊಂದೇ. ಇಡೀ ಜೀವಮಾನದಲ್ಲಿ ಒಬ್ಬ ಹೆಣ್ಣು ಅನುಭವಿಸುವಂಥ ಸಂಕಟಗಳನ್ನು ಅನುಭವಿಸಿದ್ದಳು. ಅಯೋಧ್ಯೆಯಲ್ಲಾಗಲೀ ಕಾಶೀನಗರದಲ್ಲಾಗಲೀ ಇಲ್ಲಿನಷ್ಟು ಒಂಟಿತನ ಅನುಭವವಾಗಿರಲಿಲ್ಲ ಮಾಧವಿಗೆ. ಉಶೀನರನ ಅಂತಃಪುರದಲ್ಲಿ ಮಾಧವಿಯೊಂದಿಗೆ ಯಾರೂ ಆತ್ಮೀಯರಾಗಿ ಮಾತಾಡುವವರೂ ಇರಲಿಲ್ಲ. ಬಸುರಿಯಾದ ಆಕೆಯನ್ನು ಯಾರೂ ವಿಚಾರಿಸಲಿಲ್ಲ. ಮಹಿಮಾ ಬಂದಾಗಿನಿಂದ ರಾಜರ ಸುಳಿವೂ ಇರಲಿಲ್ಲ. ಹಾಗಾಗಿ ಮಾಧವಿ ಉಶೀನರನಿಗೆ ಬೇರೆ ಮಕ್ಕಳಿರುವುದರಿಂದ, ರಾಜನಿಗೆ ಕೊಟ್ಟ ಮಾತು ಮುರಿದು, ತನ್ನ ಮಗುವನ್ನು ತಾನೇ ಒಯ್ಯುವ ನಿರ್ಧಾರ ಮಾಡಿದ್ದಳು. ಆದರೆ ಅದು ಅಸಾಧ್ಯ ಎಂದು ತಿಳಿದು ಸುಮ್ಮನಾಗಿದ್ದಳು.

ಒಮ್ಮೆ ಉಶೀನರನ ಮಹಾರಾಣಿ ತನ್ನ ಮಕ್ಕಳ ವಿಚಾರವಾಗಿ ಮಾಧವಿಯನ್ನು ಮನಬಂದಂತೆ ಬೈದಿದ್ದಳು. ಜೊತೆಗೆ ಮಹಿಮಾಳಿಗೂ ಮಾಧವಿಯ ಅಪೂರ್ವ ಸೌಂದರ್ಯ ಕಂಡು ಈರ್ಷ್ಯೆಯುಂಟಾಗಿ ಅಹಂಕಾರದಿಂದ ಮಾಧವಿಯನ್ನು ನಿಂದಿಸಿದ್ದಳು. ಇದರಿಂದ ಮನನೊಂದ ಮಾಧವಿಯು ಆತ್ಮಹತ್ಯೆಗೆ ಮುಂದಾಗಿ "ದೇವರೇ ಮುಂದಿನ ಜನ್ಮದಲ್ಲಾದ್ರೂ ನಾನು ಪ್ರೀತಿಸಿದೋನನ್ನ ಮದುವೆಯಾಗೋ ಭಾಗ್ಯಕೊಡು!" ಎನ್ನುತ್ತಾ, ಅಂತಃಪುರದಲ್ಲಿದ್ದ ಕೊಳವೊಂದಕ್ಕೆ ಧುಮುಕಿದಳು. ಸೇವಕನೊಬ್ಬ ಆಕೆಯನ್ನು ಬದುಕಿಸಲು, ಮುಂದೆ ಮಾಧವಿ ಶಿಬಿ ಎಂಬ ಹೆಸರಿನ ಮಗುವಿಗೆ ಜನ್ಮನೀಡಿದಳು. ಇದರಿಂದ ಯಾವುದೇ ರೀತಿಯ ಹಿಗ್ಗಿಗಾಗಲೀ, ಬೇಸರಕ್ಕಾಗಲೀ ಒಳಗಾಗದ ಉಶೀನರನು ಮಾಧವಿಯನ್ನು ಕಳುಹಿಸಿಕೊಡಲು ಗಾಲವ ಮಾನಿಯ ದಾರಿಯನ್ನು ಎದುರುನೋಡಿದ್ದನು.

ಅಂತೆಯೇ ಗಾಲವನು ಮಾಧವಿಗೆ ಮಗುಹುಟ್ಟಿದ ಒಂದು ತಿಂಗಳಾಗುವ ಹೊತ್ತಿಗೆ ಬಂದನಾದರೂ, ಅವನ ಮುಖ ಕಳೆಗುಂದಿತ್ತು. ಅವನ ಅದೃಷ್ಟಕ್ಕೆ ಇಡೀ ವರ್ಷ ಸುತ್ತಿದರೂ ಗುರುದಕ್ಷಿಣೆಗಾಗಿ ಬೇಕಾದ ಆ ವಿಶೇಷ ಕುದುರೆಗಳಾಗಲೀ, ಅವುಗಳನ್ನೊಂದಿರುವ ರಾಜನಾಗಲೀ ಸಿಕ್ಕಿರಲಿಲ್ಲ. ಹಾಗಾಗಿ ಗಾಲವ ಒಂದು

ತೀರ್ಮಾನಕ್ಕೆ ಬಂದಿದ್ದ. ಅದೇನೆಂದರೆ ಇನ್ನು ಇನ್ನೂರು ಕುದುರೆಗೆ ಬದಲು ಮಾಧವೀನೇ ಗುರುಗಳಿಗೆ ಅರ್ಪಿಸಿಬಿಡೋದು! ಮಾಧವಿ ಕಲ್ಲೆದೆ ಮಾಡಿಕೊಂಡು ಹೊರಡುವ ದಿನ ಮಗುವನ್ನೊಮ್ಮೆ ಮುದ್ದಿಸಿ ಅಳುತ್ತಾ ದಾಸಿಯ ಕೈಗಿತ್ತಳು. ಇಲ್ಲಿ ಮಾಧವಿಯನ್ನು ದುಃಖದಿಂದ ಬೀಳ್ಕೊಡುವವರಾರೂ ಇರಲಿಲ್ಲ. ಯಾರಿಗೂ ಹೋಗಿಬರುತ್ತೇನೆಂದು ಹೇಳದೆ, ತನಗಾಗಿ ಕಾದಿದ್ದ ರಥದಲ್ಲಿ ಕುಳಿತ ಮಾಧವಿ ಗಾಲವರೊಂದಿಗೆ ಹೊರಟಳು.

ಗಾಲವ, ಮಾಧವಿಯಿಬ್ಬರೂ ಆ ವಿಚಿತ್ರ ಅಶ್ವಗಳ ಸಮೇತ ವಿಶ್ವಾಮಿತ್ರನ ಆಶ್ರಮಕ್ಕೆ ಬರುತ್ತಿದ್ದರು. ಹಾಗೆ ಬರುವಾಗ ಕುದುರೆಗಳ ಹೆಜ್ಜೆಯ ಧ್ವನಿಯನ್ನು ದೂರದಲ್ಲೆಲ್ಲೋ ಕೇಳಿದಂತಾಗಿ ವಿಶ್ವಾಮಿತ್ರ ಮುನಿಯು ಎಚ್ಚರಗೊಂಡಿದ್ದನು. ಯಾರೋ ರಾಜನು ತನ್ನ ಸಂದರ್ಶನಕ್ಕೆ ಬರುತ್ತಿರಬಹುದೆಂದು ತಿಳಿದರೂ, ವಿಶ್ವಾಮಿತ್ರನಿಗೊಂದು ನೆನಪು ಕಾಡಿತು. ಒಮ್ಮೆ ವಸಿಷ್ಠರು ವಿಶ್ವಾಮಿತ್ರನಿಗೆ ಕಾಮಧೇನುವನ್ನು ಕೊಟ್ಟಿರಲಿಲ್ಲ, ಆ ಕೋಪಕ್ಕೆ ರಾಜರ್ಷಿಯಾಗಿದ್ದ ವಿಶ್ವಾಮಿತ್ರನು ವಸಿಷ್ಠರ ಆಶ್ರಮದ ಮೇಲೆ ದಂಡೆತ್ತಿಹೋಗಿ ಸೋಲನ್ನು ಅನುಭವಿಸಿದ್ದನು. ಹಾಗಾಗಿ ಆ ವಸಿಷ್ಠರೇನಾದರೂ ತನ್ನ ಮೇಲೆ ದಂಡೆತ್ತಿ ಬರುತ್ತಿರಬಹುದೇ?! ಎಂದು ಒಂದು ಕ್ಷಣ ಆಲೋಚಿಸಿದ್ದನು. ಆದರೆ ವಿಶ್ವಾಮಿತ್ರನ ಶಿಷ್ಯರು, ಕುದುರೆಗಳ ಸಮೇತ ಬಂದವ ಗಾಲವ ಮುನಿ ಎಂದು ಗುರುತಿಸಿದರು.

ಗಾಲವನು ವಿಶ್ವಾಮಿತ್ರನಿಗೆ ನಮಸ್ಕರಿಸಿ, ತಾನು ಆಶ್ರಮವನ್ನು ಬಿಟ್ಟಾಗಲಿಂದ ನಡೆದುದೆಲ್ಲವನ್ನು ಸವಿಸ್ತಾರವಾಗಿ ವಿವರಿಸಿದನು. ಸಾಲಾಗಿ ನಿಂತ ಆ ವಿಶೇಷ ಕುದುರೆಗಳನ್ನು ಕಂಡು ವಿಶ್ವಾಮಿತ್ರನ ಮೈ ಒಂದು ಕ್ಷಣ ಪುಲಕಗೊಂಡಿತ್ತು. ಗಾಲವ ತಾನು ಗುರುದಕ್ಷಿಣೆಗಾಗಿ ಇದುವರೆಗೂ ಆರುನೂರು ಕುದುರೆಗಳನ್ನು ಮಾತ್ರ ಸಂಗ್ರಹಿಸಿದ್ದು, ಇನ್ನು ಇನ್ನೂರು ಕುದುರೆಗಳಿಗೆ ಬದಲಾಗಿ ಮಾಧವಿಯನ್ನು ಸ್ವೀಕರಿಸಬೇಕೆಂದು ವಿಶ್ವಾಮಿತ್ರನಿಗೆ ತಿಳಿಸಿದನು. ಗಾಲವನ ಮಾತನ್ನು ಆಲಿಸಿದ ವಿಶ್ವಾಮಿತ್ರನು ಯೋಚಿಸುತ್ತಾ, "ಎಂಟುನೂರು ಅಶ್ವಗಳಿಗೆ ಬದಲಾಗಿ ಈ ಮಾಧವಿಯನ್ನೇ ಸ್ವೀಕರಿಸಿ ಅಂತ ಹೇಳಿ ಇವಳನ್ನು ನನ್ನಲ್ಲಿ ತಂದು ಬಿಟ್ಟಿದ್ದರೆ ಎಷ್ಟು ಚೆನ್ನಾಗಿತ್ತು! ನಾನೇ ಇವಳನ್ನು ಜೀವಮಾನ ಪರ್ಯಂತ ಭೋಗಿಸಿ ಜಗತ್ತಿಗೆ ಶ್ರೇಷ್ಠರಾದ ನಾಲ್ವರು ಪುತ್ರರನ್ನು ಪಡೀತಿದ್ದೆ. ಇರಲಿ ಆದದ್ದಾಗಿಹೊಯ್ತು. ಇವಳಲ್ಲಿ ಒಬ್ಬ ಮಗನನ್ನು ಪಡೆದು ಅನಂತರ ಮಾಧವಿಯನ್ನು ನಿನಗೆ ಒಪ್ಪಿಸಿ ಬಿಡ್ತೀನಿ" ಎಂದನು.

ಇದರಿಂದ ಗಾಲವ ತಾನು ಎಷ್ಟೆಲ್ಲಾ ಕಷ್ಟಪಟ್ಟೆನೆಂದು ನೆನೆದು ದುಃಖಗೊಂಡನಾದರೂ, ಕೊನೆಗೂ ತನ್ನ ದಕ್ಷಿಣೆಯ ಕೆಲಸ ಸುಲಭವಾಗಿ ಬಗೆಹರಿದದ್ದರಿಂದ ಸಮಾಧಾನಗೊಂಡನು.

ಮಾಧವಿ ವಿಶ್ವಾಮಿತ್ರನನ್ನು ಕಂಡಾಗ 'ಈತನಿಂದಲ್ಲವೇ ತನಗೆ ಈ ದುಃಸ್ಥಿತಿ ಬಂದುದು?' ಎಂದು ಬಗೆದು ಕ್ರೋಧಗೊಂಡಳಾದರೂ ಒಲ್ಲದ ಮನಸ್ಸಿನಿಂದ ಆತನಿಗೆ ಕೈಮುಗಿದಳು. ಗಾಲವನು ಮಾಧವಿಯನ್ನು ವಿಶ್ವಾಮಿತ್ರನಿಗೊಪ್ಪಿಸಿ ಒಂದು ವರ್ಷದ ಅನಂತರ ವಾಪಸ್ಸು ಬರುವುದಾಗಿ ಹೇಳಿ ತಪಸ್ಸಿಗೆ ಹೊರಟುಹೋದನು. ಇತ್ತ ವಿಶ್ವಾಮಿತ್ರನು ಮಾಧವಿಯನ್ನು ಭೋಗಿಸಲು ಮುಂದಾದಾಗ ಆಕೆ ಬೇಡವೆಂದು ಗೋಗರೆಯುತ್ತಾಳೆ. ಆದರೆ ವಿಶ್ವಾಮಿತ್ರನು "ಕಾಮವನ್ನು ಬೇಕಾದ ಹಾಗೆ ಸವಿದೋಳು ನೀನು, ಅದಕ್ಕೇ ನಿನಗೆ ಬಯಕೆಯಿಲ್ಲ. ಆದರೆ ನನಗೆ ಇರೋ ಹಸಿವು ಹಲವು ವರ್ಷಗಳದ್ದು. ನೀನಿವತ್ತಿನಿಂದ ನನ್ನ ಮಡದಿ" ಎಂದು ಹೇಳಿ ಮಾಧವಿಯ ಮೇಲೆರಗಿದನು. ಮಾಧವಿ ಹಸಿದ ಹುಲಿಯ ಮುಂದೆ ಬೆದರಿದ ಹುಲ್ಲೆಯಂತಾದಳು.

ಆಶ್ರಮದ ಜೀವನ, ಮಾಧವಿ ಅದುವರೆಗೆ ಕಂಡುದಕ್ಕಿಂತ ತೀರ ಭಿನ್ನವಾದ ವಾತಾವರಣ, ಇಲ್ಲಿ ಶಾಂತಿಯಿತ್ತು, ಸಮಾಧಾನವಿತ್ತು. ಅರಮನೆಗಿರುವಂಥ ಗೋಡೆಗಳಿಲ್ಲದೆ ಈ ಜಗತ್ತು ಮುಕ್ತವಾಗಿತ್ತು. ಆಶ್ರಮದಲ್ಲೇ ಇದ್ದುಬಿಡೋಣ, ಇನ್ನು ಪಟ್ಟಣದ ಸಹವಾಸವೇ ಬೇಡ ಎನಿಸಿತು. ಅರಮನೆಯ ವೈಭೋಗಗಳನ್ನುಂಡಿರುವ ದೇಹವಾದರೂ ಇಲ್ಲಿನ ಸರಳತೆಗೆ ಮನಸ್ಸು ಸೋತುಹೋಗಿತ್ತು. ಆದರೆ ತನ್ನ ಭವಿಷ್ಯವನ್ನು ನಿರ್ಧರಿಸುವ ಹಕ್ಕು ತನಗಿಲ್ಲವಲ್ಲ ಎಂದು ನೆನೆದು ಮಾಧವಿ ಸುಮ್ಮನಾಗಿದ್ದಳು.

ಮಾಧವಿಯೀಗ ಗರ್ಭಿಣಿಯಾಗಿದ್ದಳು. ಅವಳ ಮುಖದಲ್ಲಿ ಮುಗ್ಧತೆ ಮಾಯವಾಗಿ ಪ್ರೌಢಕಳೆ ಬಂದಿದ್ದು, ಗಾಂಭೀರ್ಯ ಭಾವ ತಾನೇತಾನಾಗಿ ರಾರಾಜಿಸುತ್ತಿದ್ದಿತು. ಆಶ್ರಮದ ಶಿಷ್ಯರಿಗೆ ಅವಳು ಸ್ವಲ್ಪ ಸಮಯ ಇದ್ದು ಹೋಗುವವಳು ಎಂಬ ಅರಿವಿದ್ದರೂ ಅವಳ ನಡೆನುಡಿಯಿಂದ ಆಕೆಯ ಬಗ್ಗೆ ಅತ್ಯಂತ ಪೂಜ್ಯಭಾವ ಹೊಂದಿದ್ದರು. ಆ ಶಿಷ್ಯರಲ್ಲಿ ಯದು ಕೂಡಾ ಒಬ್ಬನು. ಈತ ಇನ್ನೂ ಚಿಗುರುಮೀಸೆ ಮೂಡುತ್ತಿರುವ ಹುಡುಗ. ಯದು ಮಾಧವಿಯ ಮೇಲೆ ವಾತ್ಸಲ್ಯ ಭಾವನೆಯನ್ನು ಇಟ್ಟುಕೊಂಡಿದ್ದ. ಹಾಗೆಯೇ ಮಾಧವಿಯು ತನ್ನ ತಮ್ಮನ ಹೆಸರಿನವನಾದ ಯದುವನ್ನು ಕಂಡರೆ ತುಂಬಾ ಅಕ್ಕರೆಯಿಂದಿದ್ದಳು. ಆದರೆ ಒಮ್ಮೆ

ಯದು ಕಾಡಿನಲ್ಲಿ ಹಾವಿನಿಂದ ಕಚ್ಚಿಸಿಕೊಂಡು ಅಕಾಲಮರಣಕ್ಕೆ ತುತ್ತಾದಾಗ ಮಾಧವಿಯಂತೂ ಗೊಳೋ ಎಂದು ಅತ್ತಿದ್ದಳು. ಜೊತೆಗೆ ಮಾಧವಿ ತನ್ನ ದೇಹವನ್ನು ಮುಡಿಪಾಗಿಟ್ಟು ಸಂಪಾದಿಸಿದ ಆ ವಿಶೇಷ ಕುದುರೆಗಳು ಕಾಡಿನಲ್ಲಿ ದಿಕ್ಕುತಪ್ಪಿ ಅಲೆಯುತಿದ್ದು, ಕೆಲವನ್ನು ನೆರೆರಾಜ್ಯದ ರಾಜರು ಹೊಡಕೊಂಡು ಹೋಗುತ್ತಿದ್ದ ವಿಚಾರ ತಿಳಿದು ಮನನೊಂದಿದ್ದಳು.

ಮಾಧವಿಗೆ ದಿನತುಂಬಿ ಗಂಡುಮಗುವಿಗೆ ಜನ್ಮ ನೀಡಿದಳು. ವಿಶ್ವಾಮಿತ್ರನು ಆ ಮಗುವಿಗೆ **ಅಷ್ಟಕ** ಎಂದು ನಾಮಕರಣ ಮಾಡಿದನು. ಜೊತೆಗೆ ಆ ಮಗು ಮುಂದೆ ದೊಡ್ಡ ಋಷಿಯಾಗುತ್ತಾನೆಂದು ಭವಿಷ್ಯ ನುಡಿದನು. ಮಗುವಿಗೆ ಎರಡು ತಿಂಗಳಾಗುವ ಹೊತ್ತಿಗೆ ಗಾಲವ ಮಾಧವಿಯನ್ನು ಕರೆದುಕೊಂಡು ಹೋಗಲು ಬಂದಿದ್ದ. ಆಶ್ರಮದಲ್ಲಿ ಮಗುವನ್ನು ಸಾಕೋದಕ್ಕೆ ಒಂದು ಹೆಣ್ಣು ಜೀವವೂ ಗತಿಯಿಲ್ಲದ್ದನ್ನು ನೆನೆದು ಮಾಧವಿ ನೊಂದುಕೊಂಡಿದ್ದಳು. ತಾನೇ ಮಗುವನ್ನು ಕರೆದುಕೊಂಡು ಹೋಗಲು ಬಯಸಿದ್ದಳು. ಆದರೆ ಅದು ಸಾಧ್ಯವಿಲ್ಲವೆಂದು ತಿಳಿದು ಗಟ್ಟಿಮನಸ್ಸು ಮಾಡಿ ಮಗುವನ್ನು ವಿಶ್ವಾಮಿತ್ರನ ಕೈಗಿತ್ತು ಗಾಲವನೊಂದಿಗೆ ಹೊರಟಳು.

ಗಾಲವ ಮಾಧವಿಯನ್ನು ಕರೆದುಕೊಂಡು ಪ್ರತಿಷ್ಠಾನ ನಗರದತ್ತ ಪಯಣ ಬೆಳೆಸಿದ್ದನು. ಗಾಲವ ಮುನಿಯು ವ್ಯಥೆಯಿಂದ ಕುಗ್ಗಿ ಹೋಗಿದ್ದ. ಕಾರಣ, ಗುರುದಕ್ಷಿಣೆ ಸಲ್ಲಿಸಿ ತಾನು ಪೂರ್ಣ ಋಣಮುಕ್ತನಾದೆ ಎಂಬ ಹಿಗ್ಗು ಒಂದೆಡೆಗಾದರೆ, ಈ ಹುಡುಗಿಗೆ ದುಃಖ ಉಂಟುಮಾಡಿದೆ ಎಂಬ ಬೇಸರ ಇನ್ನೊಂದೆಡೆ. ಮಾಧವಿ ಮೂರು ಜನ ರಾಜರ್ಷಿಗಳಿಂದಲೂ ಓರ್ವ ಬ್ರಹ್ಮರ್ಷಿಯಿಂದಲೂ ಸಂಸಾರ–ಸುಖವನ್ನುಂಡು ನಾಲ್ಕು ಪುತ್ರರನ್ನು ಪಡೆದಿದ್ದು ಇನ್ನೂ ಕನ್ಯೆಯಂತೆಯೇ ಇರುವ ಆಕೆಯ ಕೀರ್ತಿ ಅಖಂಡವಾಗಲಿ, ಶುಭವಾಗಲಿ ಎಂದು ಗಾಲವನು ಆಶೀರ್ವದಿಸಿದನು. ಆದರೆ ಮಾಧವಿ ಗಾಲವನ ಆಶೀರ್ವಾದವನ್ನು ತಿರಸ್ಕರಿಸಿ ಕೋಪದಿಂದ, "ನನ್ನನ್ನು ಅಯ್ಯೋ ಅನ್ನಿಸಿದ್ದಕ್ಕೆ ಪ್ರಪಂಚದ ಯಾವ ಹೆಂಗಸರೂ ಯಾವ ಕಾಲಕ್ಕೂ ನಿಮ್ಮನ್ನು ಕ್ಷಮಿಸೋಲ್ಲ!" ಎಂದು ನುಡಿದಳು. ಇದರಿಂದ ಮತ್ತಷ್ಟು ಕುಸಿದ ಗಾಲವ, ತನ್ನ ಎಲ್ಲ ಪಾಪಗಳಿಗೆ ತಪಸ್ಸಿನಿಂದ ಪ್ರಾಯಶ್ಚಿತ ಮಾಡಿಕೊಳ್ಳಬೇಕೆಂದು ನಿರ್ಧರಿಸಿದನು.

ಸುಮಾರು ಐದು ವರ್ಷಗಳ ಹಿಂದೆ ಪ್ರತಿಷ್ಠಾನಗರದ ಯಯಾತಿ ಮಹಾರಾಜನು ಗಾಲವ ಮುನಿಗೆ ದಾನ ನೀಡಲ್ಪಟ್ಟಿದ್ದ ಮುಗ್ಧಬಾಲೆ ಮಾಧವಿಯು, ಈಗ

ಜೀವನದ ಕಹಿಸಿಹಿಯನ್ನೆಲ್ಲ ಉಂಡ ಹೆಂಗಸಾಗಿ ಯಯಾತಿಯ ಅರಮನೆಗೆ ಬಂದಿದ್ದಳು. ಮಾಧವಿ ಇನ್ನು ಚಾರುನೇತ್ರೆ, ಅವ್ವೆಯರನ್ನು ನೋಡುತ್ತೇನೆ ಎಂದು ಸಂತಸಗೊಂಡಳಾದರೂ, ಮರುಕ್ಷಣ ತನ್ನ ದುಃಸ್ಥಿತಿ ನೆನೆದು ಸಂಕಟಗೊಂಡಿದ್ದಳು.

ಯಯಾತಿ ಮಹಾರಾಜನು ಮಾಧವಿಯನ್ನು ದಾನಕೊಟ್ಟ ಬಳಿಕ ಅವಳ ಬಗ್ಗೆ ಯಾವ ವಿಚಾರವೂ ತಿಳಿಯದೆ ಅವನು ಪರಿತಪಿಸಿದ್ದ. ಆದರೆ ಈಗ ಗಾಲವನ ಜೊತೆ ನಾರುಡುಗೆಯಲ್ಲಿ ಬಂದ ಮಗಳನ್ನು ನೋಡಿ ಯಯಾತಿ ದಿಗ್ಭ್ರಾಂತನಾದ. ಮಾಧವಿ ಊರು ಬಿಟ್ಟ ದಿನಕ್ಕೂ ಇಂದಿಗೂ ಅವಳ ಹೊರ ರೂಪದಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ಆದರೆ ಮಾಧವಿಯು ಮಾನಸಿಕವಾಗಿ ಜರ್ಜರಿತಗೊಂಡಿದ್ದುದು ಆತನಿಗೆ ತಿಳಿದಿರಲಿಲ್ಲ. ಗಾಲವನು ಆ ಐದು ವರ್ಷಗಳಲ್ಲಿ ನಡೆದುದೆಲ್ಲವನ್ನೂ ಯಯಾತಿಗೆ ವರದಿ ಮಾಡಲು, ಕೋಪಗೊಂಡ ರಾಜ ಕೂಗಾಡಿದನು. ಏಕೆಂದರೆ ಯಯಾತಿ ಗಾಲವನಿಗೆ ತನ್ನ ಮಗಳು ಮಾಧವಿಯನ್ನು ದಾನ ನೀಡಿ, "ಆಕೆಯನ್ನು ಯಾರಾದರೂ ಪುಣ್ಯಾತ್ಮನಿಗೆ ಕೊಟ್ಟು ನಿಮ್ಮ ಗುರುದಕ್ಷಿಣೆಗೆ ಬೇಕಾದ ಅಶ್ವಗಳನ್ನು ಕನ್ಯಾಶುಲ್ಕ ರೂಪದಲ್ಲಿ ದೊರಕಿಸಿಕೊಳ್ಳಿ" ಎಂದಷ್ಟೇ ಹೇಳಿದ್ದು. ಆದರೆ ಗಾಲವ ಮಾಧವಿಯನ್ನು ನಾಲ್ಕು ಜನರಿಗೆ ಮಾರಿ ಅವಳ ಬಾಲನ್ನೆಲ್ಲಾ ಹಾಳು ಮಾಡಿದ್ದನ್ನು ತಿಳಿದ ಯಯಾತಿ ಕೋಪಗೊಂಡಿದ್ದನು. ಯಯಾತಿ ತಾನು ಮಗಳನ್ನು ಗಾಲವನಿಗೆ ದಾನ ಮಾಡದಿದ್ದರೆ ಅವಳಿಗೆ ಈ ದುಃಸ್ಥಿತಿ ಒದಗುತ್ತಿರಲಿಲ್ಲ ಎಂದು ತಿಳಿದು ಸಮಾಧಾನಗೊಂಡಿದ್ದನು. ತನ್ನ ತಪ್ಪಿಗೆ ಪ್ರಾಯಶ್ಚಿತವಾಗಿ ಮಾಧವಿಗೆ ಸ್ವಯಂವರವನ್ನೇರ್ಪಡಿಸಿದ್ದನು.

ಮಾಧವಿ ಹಿಂತಿರುಗಿ ಬಂದಳೆಂಬ ವಿಚಾರ ದೇವಯಾನಿಗೆ ಆಶ್ಚರ್ಯ, ಮತ್ಸರ ತಂದಿತ್ತು. ಜೊತೆಗೆ ಯಯಾತಿ ಮಾಧವಿಗೆ ಸ್ವಯಂವರ ಏರ್ಪಡಿಸಿದ್ದ ವಿಚಾರ ತಿಳಿದ ದೇವಯಾನಿ ಅದಕ್ಕೆ ಅಡ್ಡಿಪಡಿಸಿದ್ದಳು. ಆದರೆ ಯಯಾತಿಯು ಈ ಹಿಂದೆ ದೇವಯಾನಿಯ ಮಾತನ್ನು ಕೇಳ್ಕೊಂಡು ಮಾಧವಿಯನ್ನು ಅಡವಿಪಾಲು ಮಾಡಿದ್ದನ್ನು ನೆನೆದು, ಈ ಬಾರಿಯೂ ಅದೇ ತಪ್ಪು ಮಾಡದೇ ತಂದೆಯಾಗಿ ಮಾಧವಿಗೆ ಮಾಡಬೇಕಾದ ಧರ್ಮ ಮಾಡುವುದಾಗಿ ಸ್ವಯಂವರ ಏರ್ಪಡಿಸಿದ್ದನು. ಇದಕ್ಕೆ ಮಾಧವಿಯು ಒಪ್ಪದಿದ್ದಾಗ, ಯಯಾತಿ ತಾನು ಕ್ಷತ್ರಿಯ ಧರ್ಮಪಾಲಿಸಲು ಹಾಗೂ ಮುಕ್ತಿಹೊಂದಲು ಈ ಸ್ವಯಂವರ ನಡೆಯಲೇಬೇಕೆಂದು ಮಾಧವಿಯನ್ನು ಒಪ್ಪಿಸಿದನು.

ಆದರೆ ಮಾಧವಿಗೆ ವೈವಾಹಿಕ ಜೀವನದ ಬಗ್ಗೆಯೇ ಜುಗುಪ್ಸೆ ಬಂದಿತ್ತು. ಅದೂ ಅಲ್ಲದೇ ತಾನು ಹೆತ್ತ ನಾಲ್ಕು ಮಕ್ಕಳನ್ನು ನಾಲ್ಕೂ ಕಡೆ ಬಿಟ್ಟು ಬಂದಿದ್ದು, ಮಮಕಾರವೂ ಹರಿದುಹೋಗಿತ್ತು. ಈ ಬದುಕಿನಲ್ಲಿ ಏನೂ ಬೇಡ, ಒಂಟಿಯಾಗಿ ಯಾರಿಗೂ ಕಾಣದ ಹಾಗೆ ಇದ್ದು ಬಿಡಬೇಕು ಎಂಬ ಬಯಕೆ ಅದಮ್ಯವಾಗಿತ್ತು. ಜೊತೆಗೆ ಯಯಾತಿ ಮಾಧವಿಗೆ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುವ ಹಕ್ಕನ್ನು ಸ್ವಯಂವರದ ರೂಪದಲ್ಲಿ ಆಕೆಗೆ ನೀಡಿದ್ದನು. ಆಯ್ಕೆಯ ಸ್ವಾತಂತ್ರ್ಯವನ್ನು ಪಡೆದ ಮಾಧವಿ ತನ್ನ ತಂದೆ ಏರ್ಪಡಿಸಿದ್ದ ಸ್ವಯಂವರದಲ್ಲಿ ಜಯಮಾಲೆ ಹಿಡಿದು ಬಂದಳಾದರೂ, "ನನಗೆ ಸ್ವಯಂವರ ಬೇಡ, ನಾನು ಆತ್ಮೋದ್ಧಾರಕ್ಕಾಗಿ ಅರಣ್ಯಕ್ಕೆ ಹೋಗಿ ತಪಸ್ಸು ಮಾಡ್ತೀನಿ, ವನವೇ ನನ್ನ ವರ! ನನ್ನನ್ನು ಬಿಡಿ!" ಎನ್ನುತ್ತಾ ಮಾಧವಿ ಹಾರವನ್ನು ಎಸೆದು ಅವರೆಲ್ಲರನ್ನೂ ತಿರಸ್ಕರಿಸಿ ಅರಣ್ಯದ ಕಡೆಗೆ ನಡೆದಳು.

ಮಾಧವಿಯ ಆಪ್ತಸಖಿ ಚಾರುನೇತ್ರೆ ತಾನು ಬರ್ತೀನಿ ಎಂದು ಕೂಗಲು, ಮಾಧವಿ ಹುಟ್ಟಿದಾಗ ತಾನೊಬ್ಬಳೇ ಇನ್ನು ಮುಂದೆಯೂ ಅಷ್ಟೇ ಎಂದಳು. ಜಗತ್ತನ್ನು ಧಿಕ್ಕರಿಸಿ ಬಿರಬಿರನೆ ಹೆಜ್ಜೆ ಹಾಕುತ್ತಾ ಕಾಡಿನೊಳಗೆ ಧಾವಿಸಿದ ಮಾಧವಿಯನ್ನು ತಡೆಯುವ ಚೈತನ್ಯ ಯಾರಿಗೂ ಇರಲಿಲ್ಲ. ಅಷ್ಟು ದೃಢವಾಗಿತ್ತು ಅವಳ ನಿರ್ಧಾರ. ಹೀಗೆ ಶೋಷಣೆಯ ಬಂಧನದಿಂದ ಬಿಡುಗಡೆಗೊಂಡ ಮಾಧವಿಯ ಸ್ವಾತಂತ್ರ್ಯ ಜೀವನದ ಚಿತ್ರಣದೊಂದಿಗೆ 'ಮಾಧವಿ' ಕಾದಂಬರಿಯು ಮುಕ್ತಾಯವಾಗಿದೆ.

ಅಧ್ಯಾಯ – ೩

ಕಪ್ಪು ಕಿವಿಯ ಬಿಳಿಯ ಕುದುರೆಗಳು : ವಸ್ತು ಮತ್ತು ಪಾತ್ರ ನಿರ್ವಹಣೆ

ಕನ್ನಡ ಸಾಹಿತ್ಯದ ಸೃಜನಶೀಲ ಬರಹಗಾರ್ತಿಯರಲ್ಲೊಬ್ಬರು ಡಾ. ಎಂ.ಎಸ್.ವೇದಾರವರು. ಅವರ ಸಾಹಿತ್ಯ ಬತ್ತಳಿಕೆಯಿಂದ ಮೂಡಿಬಂದ ಅಪೂರ್ವ ಅಸ್ತ್ರವೇ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಎಂಬ ಕಾದಂಬರಿ. ಪೌರಾಣಿಕ ವಸ್ತುವನ್ನು ಒಳಗೊಂಡಿರುವ ಈ ಕಾದಂಬರಿಯು ತನ್ನ ಒಡಲಲ್ಲಿ ವರ್ತಮಾನದ ಬದುಕಿನ ಹಲವು ಮುಖಗಳನ್ನು ಅನಾವರಣಗೊಳಿಸುತ್ತಾ ಹೋಗುತ್ತದೆ. ಆ ಮೂಲಕ ಸಾರ್ವಕಾಲಿಕ ಸತ್ಯವೊಂದನ್ನು ಸಾರುವ ಅಪರೂಪದ ಶಕ್ತಿಯಾಗಿ ಹೊರಹೊಮ್ಮಿದೆ. ಮಹಾಭಾರತ-ದಲ್ಲಿ ಬರುವ ಮಾಧವಿಯ ಜೀವನ ವೃತ್ತಾಂತವನ್ನು ಪ್ರಸ್ತುತ ಕಾದಂಬರಿಯು ಎಳೆ ಎಳೆಯಾಗಿ ವಿವರಿಸುತ್ತಾ ಸಾಗುತ್ತದೆ.

ಕಾದಂಬರಿಯು ಒಂದು ಸುಂದರ ಹಕ್ಕಿಗೂಡಿನ ಚಿತ್ರಣದೊಂದಿಗೆ ಆರಂಭ-ವಾಗುತ್ತದೆ. ಆ ಹಕ್ಕಿಗೂಡಿನಲ್ಲಿದ್ದ ಮರಿಹಕ್ಕಿಗೆ ಪುಟ್ಟಹಕ್ಕಿಯೊಂದು ಉಣಿಸುತ್ತಿದ್ದನ್ನು ನೋಡುತ್ತಾ ಮಾಧವಿ ಅದೊಂದು ಬಗೆಯ ಮತ್ತಿನಲ್ಲಿದ್ದಳು. ಆದಿಮ "ಮಾಧವಿ" ಎಂದು ಕರೆದಾಗಲೇ ಅವಳು ಎಚ್ಚರಗೊಂಡದ್ದು. ತನ್ನೆದುರಿಗಿದ್ದ ಆದಿಮನನ್ನು "ಗೂಡಿನಲ್ಲಿ ಎಷ್ಟು ಮರಿಹಕ್ಕಿಗಳಿರಬಹುದು ಆದಿ!" ಎಂದು ಮಾಧವಿ ಬಹಳ ಆಸಕ್ತಿಯಿಂದ ಕೇಳಿದ್ದಳು. ಆದಿಮ ತಾನು ಮರಹತ್ತಿ ನೋಡುತ್ತೇನೆಂದು ಹೊರಟಾಗ, ಆತನನ್ನು ತಡೆದು "ಬೇಡ ಬೇಡಾ" ಎಂದು ಕಿರುಚಿಕೊಂಡಿದ್ದಳು. ಅವಳ ಕಿರುಚುವಿಕೆಯಿಂದ ಆದಿಮನೇನೂ ಗಾಬರಿಗೊಂಡಿರಲಿಲ್ಲ. ಏಕಂದರೆ ಮಾಧವಿಯ ಆ ಬಗೆಯ ವರ್ತನೆ ಇತ್ತಿತ್ತಲಾಗಿ ಅವನಿಗೆ ಅಭ್ಯಾಸವಾಗಿಬಿಟ್ಟಿತ್ತು.

ಆದಿಮ ಮಾಧವಿಯನ್ನು ಬಾಲ್ಯದಿಂದಲೂ ನೋಡುತ್ತಾ ಬಂದಿದ್ದಾನೆ, ಬರಿ ಮೈಯಲ್ಲಿ ತನ್ನವ್ವನಿಂದ ಜಳಕ ಮಾಡಿಸಿಕೊಳ್ಳುತ್ತಾ ನಿಂತಿದ್ದ ಗೊಣ್ಣೆ ಸುರುಕಿ ಪುಟ್ಟ ಮಾಧವಿಯಿಂದ ಹಿಡಿದು ಬೆಳೆದಂತೆ ಗೊಣ್ಣೆ ಸುರುಕಿಯೊಬ್ಬಳಲ್ಲಿ ಇಂತಹ ಸುಂದರಿಯೊಬ್ಬಳು ಇದ್ದಿರಬಹುದೆಂದು ಊಹಿಸಲೂ ಆಗದಂತಹ ಕಣ್ಣೆದುರಿಗಿದ್ದ ಬೆಳದಿಂಗಳ ಷೋಡಶಿಯ ತನಕ! ಸದಾ ಆದಿಯ ಬಾಲವಾಗಿಯೇ ಓಡಾಡುತ್ತಿದ್ದ ಬಾಲೆ ಮಾಧವಿ. ಈಕೆಯ ಅವ್ವ ಲಕ್ಷ್ಮಿಗೆ ಇದ್ದೊಬ್ಬ ಮಗಳನ್ನೂ ನೋಡಲಾರದಂತಹ

ನಿರ್ಲಿಪ್ತತೆ, ಸದಾ ಏನನ್ನೋ ಧ್ಯಾನಿಸುತ್ತಾ ಕುಳಿತಿರುತ್ತಿದ್ದಳು. ಹಾಗಾಗಿ ಮಾಧವಿಯ ಯೋಗಕ್ಷೇಮವನ್ನು ಆದಿಮನ ಅವ್ವ ಪಾರ್ವತಿಯೇ ವಿಚಾರಿಸಿಕೊಳ್ಳುತ್ತಿದ್ದಳು.

ದಿನಕಳೆದಂತೆ ಮಾಧವಿಗೆ ಹದಿಮೂರು ವರ್ಷ ತುಂಬಿ ದೊಡ್ಡವಳಾಗಲು, ಈ ವಿಚಾರ ಅವಳವ್ವನನ್ನು ಇನ್ನಷ್ಟು ಯೋಚನೆಗೀಡುಮಾಡಿತು. ಮಾಧವಿ ಜಗತ್ತಿನ ಅದ್ಭುತ ವಸ್ತುವೆಂಬಂತೆ ಕಾಂತಿಹೊಮ್ಮಿಸುವ ಹೊಸ ಮಾಧವಿಯಾಗಿ ರೂಪುತಳೆದಿದ್ದಳು. ಒಂದೆರಡು ವರುಷಗಳು ಕಳೆಯುತ್ತಿದ್ದಂತೆ ಆದಿಮನಲ್ಲಿಯೂ ಬದಲಾವಣೆಗಳಾಗಿದ್ದವು. ದೇಹ ಬಾಲ್ಯ ಕಳೆದುಕೊಂಡು, ಗಂಟಲು ಒಡೆದಿತ್ತು, ಚಿಗುರುಮೀಸೆ ಮೂಡಿತ್ತು, ಆದಿಮ ಬದಲಾದ ಭಾವನೆಗಳೊಂದಿಗೆ ಮಾಧವಿಗೆ ಹತ್ತಿರನಾಗಲು ಆರಂಭಿಸಿದ್ದ. ಹತ್ತಿರನಾದಂತೆ ಮಾಧವಿಯ ಉಕ್ಕು-ಬಿಕ್ಕುಗಳು ಅವನಿಗೆ ಅಭ್ಯಾಸವಾಗತೊಡಗಿತ್ತು. ಮಾಧವಿ ತನ್ನ ಸುಖ-ದುಃಖಗಳನ್ನು ಕೇಳುವ ಓರ್ವಗೆಳೆಯನನ್ನಾಗಿ ಅವನನ್ನು ಹಚ್ಚಿಕೊಂಡಿದ್ದಳು. ಆಸೆ, ನಿರಾಸೆ, ಪ್ರೀತಿ, ದ್ವೇಷ, ಸಹನೆ, ಕೋಪ, ಅಪಮಾನ, ಅಭಿಮಾನ, ನೋವು, ನಲಿವು.. . .. ಆದಿಮ ಅವಳಿಗೆ ಕನ್ನಡಿಯಂತೆ ಆಗಿದ್ದನು.

ಮಾಧವಿ - ಆದಿಮ ಇಬ್ಬರೂ ಜೊತೆಯಾಗಿ ಕಾಲದ ಪರಿವೆ ಇಲ್ಲದೆ ಕಾಡು-ಮೇಡು ಅಲೆಯುತ್ತಾ, ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ, ಹಕ್ಕಿಗೂಡಿನ ಬಳಿ ಬಂದು ಹಕ್ಕಿಗಳು ಪರಸ್ಪರ ಗುಟುಕು ಕೊಡುವುದನ್ನು ಮನತಣಿಯೇ ನೋಡಿ ಆನಂದಿಸುತ್ತಿದ್ದರು. ಈ ಸಂದರ್ಭದಲ್ಲಿ ಮಾಧವಿ ತನ್ನ ಗೂಡ (ಮನೆ)ನ್ನು ನೆನೆದು "....ಬೆಚ್ಚನೆಯ ಭಾವ ಮೂಡಿಸದ ಮನೆ, ಅವ್ವ ಎಂದೋ ಒಂದು ದಿನ ತೆತ್ತಿರಬಹುದಾದ ದೇಹಕ್ಕಾಗಿ ಇಂದಿಗೂ ಅರಮನೆಯಿಂದ ಬರುತ್ತಿರುವ ಉಂಬಳಿ, ನೋವು ವಿಷಾದಗಳ ಮೂಟೆಯಾಗಿ ಕುಳಿತ ಅವ್ವ.... ಪ್ರೀತಿಯ ಗುಟುಕು ಯಾರಿಂದಲೂ ಯಾವಾಗಲೂ ಸಿಗಲೇ ಇಲ್ಲ ಆದಿ" ಎಂದು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಆದಿಮ ಅವಳನ್ನು ಸಮಾಧಾನಿಸಿ ಮನೆಗೆ ವಾಪಸ್ಸಾಗುವಷ್ಟರಲ್ಲಿ ಸೂರ್ಯ ಮುಳುಗಿ ಕತ್ತಲೆಯೇ ಆಗಿಬಿಡುತ್ತಿತ್ತು.

ಮಾಧವಿಯ ತಾಯಿ ಲಕ್ಷ್ಮಿಯು, ಮಹಾರಾಜರ ಅರಮನೆಯಲ್ಲಿ ಪಹರೆ ಕಾಯುವ ನೂರು ಆಳುಗಳ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸುತ್ತಿದ್ದ ಶರಭಯ್ಯನ ಮಗಳಾಗಿದ್ದಳು. ಹುಟ್ಟುತ್ತಲೇ ಅವ್ವನನ್ನು ಕಳೆದುಕೊಂಡಿದ್ದ ಲಕ್ಷ್ಮಿಗೆ ತಾಯಿಯ ಮಮತೆ ಏನೆಂದು ತಿಳಿದಿರಲಿಲ್ಲ. ಕೆಲಸದ ನಿಮಿತ್ತ ಹೊರಹೋಗಿಬಿಡುವ ಶರಭಯ್ಯನ

ಗೈರುಹಾಜರಿಯಲ್ಲಿ ಎದಿರುಮನೆಯಲ್ಲಿದ್ದ ಪಾರ್ವತಿಯ ಅವ್ವನೇ ಲಕ್ಷ್ಮಿಯನ್ನು ಮತ್ತೊಬ್ಬ ಮಗಳಾಗಿ ನಿರ್ವಂಚನೆಯಿಂದ ಸಾಕಿ ಸಲಹಿದ್ದಳು. ಲಕ್ಷ್ಮಿ ಎಷ್ಟೋ ಬಾರಿ "ನಮ್ಮವ್ವನಿದ್ದರೂ ನಿನ್ನಷ್ಟು ಪ್ರೀತಿಯನ್ನು ನನಗೀಯುತ್ತಿರಲಿಲ್ಲ ಅವ್ವೆ" ಎಂದು ಕಣ್ಣೀರುದುಂಬಿ ಹೇಳುತ್ತಿದ್ದುದುಂಟು. ಏಕತಾನದಿಂದ ಸಾಗಿದ್ದ ಲಕ್ಷ್ಮಿಯ ಬದುಕಿನಲ್ಲಿ ಪಾರ್ವತಿಯ ಮದುವೆ ಒಂದು ಹೊಸ ಹುರುಪನ್ನು ತಂದಿತ್ತು. ಅವಳಿಗಿಂತ ಒಂದೆರಡು ವರುಷ ದೊಡ್ಡವಳಿದ್ದ ಪಾರ್ವತಿಯ ಮದುವೆ, ಶರಭಯ್ಯನ ಮಧ್ಯಸ್ಥಿಕೆಯಲ್ಲಿಯೇ ಅರಮನೆಯ ಅಶ್ವದಳದಲ್ಲಿದ್ದ ಹುಡುಗನೊಂದಿಗೆ ನಡೆದಿತ್ತು. ಚಿಗುರುಮೀಸೆಯ ಯುವಕ, ಪಾರ್ವತಿಯ ಹಿಂದೆ ಮುಂದೆ ಓಡಾಡುವುದನ್ನು ಕದ್ದು ನೋಡುವಾಗ ಲಕ್ಷ್ಮಿಯ ಮನಸ್ಸಿನಲ್ಲೇನೋ ಮುದ, ಮೈಯ್ಯಲ್ಲೇನೋ ಪುಳಕ! ಲಕ್ಷ್ಮಿ ತನ್ನ ಕನಸಿನ ರಾಜಕುಮಾರನೊಬ್ಬನನ್ನು ಸೃಷ್ಟಿ ಮಾಡಿಕೊಂಡಿದ್ದಳು. ಅವನೊಂದಿಗೆ ಮದುವೆ ಪ್ರೀತಿಯ ಬದುಕು ಬೆಚ್ಚನೆಯ ಸಂಸಾರ, ಸುಖದ ತೂಗುಯ್ಯಾಲೆ.... ಅವಳ ಕನಸಿಗೆ ಒಂದು ಅಂತ್ಯವೇ ಇರಲಿಲ್ಲ.

ಲಕ್ಷ್ಮಿ ಕನಸಿನಲ್ಲಿಯೇ ತೇಲಾಡುತ್ತಿದ್ದ ದಿನಗಳಲ್ಲಿ ಪಾರ್ವತಿ ಗರ್ಭಿಣಿಯಾಗಿ ಅವ್ವನ ಮನೆಗೆ ಬಂದಿದ್ದಳು. ಪಾರ್ವತಿ ತುಂಬು ಗರ್ಭಿಣಿಯಾಗಿದ್ದಾಗ ತನ್ನ ಗಂಡನನ್ನು ಯುದ್ಧಕ್ಕೆ ಕಳುಹಿಸುವ ಸಂದರ್ಭ ಎದುರಾಗಲು ತುಂಬಾ ದುಃಖದಿಂದಲೇ ಬೀಳ್ಕೊಟ್ಟಳು. ಈ ನಡುವೆ ಒಮ್ಮೆ ಶರಭಯ್ಯ ತನ್ನ ಗೆಳೆಯರೊಡಗೂಡಿ ಓಲೆಗರಿಗಳ ಕಡತಗಳಲ್ಲಿ ಏನನ್ನೋ ಹುಡುಕಲು ಮನೆಗೆ ಬಂದಿದ್ದನು. ಆಗ ಆ ಗೆಳೆಯರು ಶರಭಯ್ಯನ ಮಗಳು ಲಕ್ಷ್ಮಿಯನ್ನು ನೋಡಿ "ಅಲ್ಲ ಶರಭಯ್ಯ, ಇಷ್ಟು ಚೆಂದುಳ್ಳಿ ಹುಡುಗೀನಾ ಮನೆಯಾಗೆ ಇಟ್ಕಂಡು ಉಪ್ಪಿನ್‌ಕಾಯಿ ಹಾಕ್ಬೇಕೂಂತ ಇದ್ದೀಯಾ? ಅರಮನೆಯ ಊಳಿಗಕ್ಕೆ ಕಳುಹಿಸಿಕೊಡು. ಆಗ ನೋಡು ಮಗಳ ರೂಪ ಮುಂದಿಟ್ಟುಕೊಂಡು ನೀನೇ ಮಹಾರಾಜನಾಗದಿದ್ದರೆ ಕೇಳು" ಎಂದು ಸಲಹೆ ನೀಡಿದ್ದರು. ಅವರ ಸಲಹೆಯಿಂದ ಶರಭಯ್ಯನ ಬುದ್ಧಿ ಚೂಪಾಗಿ, ಮಗಳು ಲಕ್ಷ್ಮಿಯನ್ನು ಊಳಿಗಕ್ಕೆ ಸೇರಿಸುವ ತೀರ್ಮಾನ ಮಾಡಿ ಆಕೆಯ ಒಪ್ಪಿಗೆ ಕೇಳುತ್ತಾನೆ. ಆದರೆ ಲಕ್ಷ್ಮಿಯು "ಪಾರ್ವತಿಯ ಹಾಗೆ ಮದುವೆಯಗಿ ಸಂಸಾರ ಮಾಡುತ್ತೇನೆ, ಮಕ್ಕಳನ್ನು ಹೆರುತ್ತೇನೆ, ಸಾಕುತ್ತೇನೆ, ಹೆಂಡತಿಯಾಗುತ್ತೇನೆ, ಅವ್ವನಾಗುತ್ತೇನೆ, ಅಜ್ಜಿಯಾಗುತ್ತೇನೆ, ಊಳಿಗಕ್ಕೆ ಮಾತ್ರ ಹೋಗುವುದಿಲ್ಲ" ಎನ್ನುತ್ತಾಳೆ.

ಪಾರ್ವತಿಯ ಅವ್ವೆಯ ಮಾರ್ಗದರ್ಶನದಂತೆ ಶರಭಯ್ಯ ತನ್ನ ಮಗಳು ಲಕ್ಷ್ಮಿಯ ಮದುವೆ ಮಾಡಲು ಮುಂದಾಗುತ್ತಾನೆ. ಲಕ್ಷ್ಮಿ ತನ್ನ ಹರೆಯದ ಬಣ್ಣ-ಬಣ್ಣದ

ಕನಸಿನಲ್ಲಿ ಮುಳುಗಿರಲು, ಪಾರ್ವತಿಯ ಗಂಡ ಯುದ್ಧದಲ್ಲಿ ಮಡಿದನೆಂಬ ಸುದ್ಧಿ ಪಾರ್ವತಿಯ ಬದುಕಿನೊಡನೆ ಲಕ್ಷ್ಮಿಯ ಬದುಕನ್ನೂ ಅಲ್ಲೋಲಕಲ್ಲೋಲ ಮಾಡಿಬಿಟ್ಟಿತು. ಲಕ್ಷ್ಮಿಯ ಕನಸುಗಳು ಛಿದ್ರ-ಛಿದ್ರವಾಗಿ, ಗಂಡ, ಮನೆ, ಸಂಸಾರ, ಎಲ್ಲಾ ಇಷ್ಟು ಕ್ಷಣಿಕವೇ? ಇಷ್ಟು ದುಃಖದಾಯಕವೇ? ಎಂದೆನಿಸಿತ್ತು. ಪಾರ್ವತಿಯ ಮನೆಯಲ್ಲಿ ಗಂಡ ಸತ್ತ ಸೂತಕ ಕಳೆಯುವಷ್ಟರಲ್ಲಿ ಹೊಸ ಮಗು ಹುಟ್ಟಿದ ಸೂತಕ ಆಗಮಿಸಿದರೆ ಗೆಳತಿ ಪಾರ್ವತಿಯ ಬದುಕಿನ ದುರಂತದಿಂದಾಗಿ ಲಕ್ಷ್ಮಿಯ ಕನಸುಗಳು ಕುಸಿದು ಬೀಳಲು, ತಾನು ಅರಮನೆಯ ಊಳಿಗಕ್ಕೆ ಹೋಗಲು ನಿರ್ಧರಿಸುತ್ತಾಳೆ.

ಲಕ್ಷ್ಮಿಗೆ ಅರಮನೆಯ ವಾತಾವರಣ ನಿಜಕ್ಕೂ ಮಾಯಾಬಜಾರಿನದಾಗಿತ್ತು. ವೈಭವ, ಸಂಪತ್ತು, ನಡೆ, ನುಡಿ, ಆಚಾರ-ವಿಚಾರ! ಅದೇ ಒಂದು ಭಿನ್ನ ಲೋಕವಾಗಿತ್ತು. ಮೊದಲಿಗೆ ಅವಳು ಅರಮನೆಯ ಊಳಿಗಕ್ಕೆ ಬಂದಿದ್ದು ಯಾರು ಏನೇ ಹೇಳಿದರೂ ಮಾಡುವ ಸಾಮಾನ್ಯ ಊಳಿಗದವಳಾಗಿ, ಆದರೆ ಅವಳ ಅರಳಿದ ಸೌಂದರ್ಯವೇ ಮೆಟ್ಟಿಲುಗಳಾಗಿ ಕೆಲವಾರು ತಿಂಗಳು ಕಳೆಯುವುದರಲ್ಲಿ ಲಕ್ಷ್ಮಿ ಮಹಾರಾಣಿ ದೇವಿದೇವಯಾನಿಯವರ ಅಂತಃಪುರದ ಬಾಗಿಲನ್ನು ಕಾಯುತ್ತಾ ನಿಲ್ಲುವ ಹಂತವನ್ನು ತಲುಪಿದ್ದಳು. ಈ ವಿಚಾರ ಶರಭಯ್ಯನ ಬದುಕಿನಲ್ಲಿ ಅದ್ಭುತ ಪವಾಡ ಸದೃಶ ಸಂಗತಿಯಾಗಿ, ಆತನನ್ನು ಸಮಾಜದ ಬಹಳ ದೊಡ್ಡ ಮನುಷ್ಯನ ಸ್ಥಾನದಲ್ಲಿ ನಿಲ್ಲಿಸಿತ್ತು. ಅವನ ಮನೆಯೂ ಒಂದು ಪುಟ್ಟ ಅರಮನೆಯ ರೂಪವನ್ನು ಪಡೆದುಕೊಳ್ಳಲು ಹವಣಿಸಿತ್ತು. ಅಲಂಕಾರಿಕ ವಸ್ತುಗಳು, ಪಾತ್ರೆ ಪಗಡಗಳು, ಆಸನಗಳು, ಅವೆಲ್ಲದರ ಜೊತೆಗೆ ಮಗಳಿಗಾಗಿ ಇಬ್ಬರು ಊಳಿಗದವರು. ಊಳಿಗದವಳಿಗೆ ಇಬ್ಬರು ಊಳಿಗದವರು! ಲಕ್ಷ್ಮಿ ವಿಷಾದದಿಂದ ನಕ್ಕುಬಿಟ್ಟಿದ್ದಳು.

ನಿರ್ಲಿಪ್ತವಾಗಿ ಬದುಕನ್ನು ಸಾಗಿಸುತ್ತಾ ಸಾಗಿದ್ದ ಲಕ್ಷ್ಮಿಯ ಬದುಕಿನಲ್ಲಿ ಪರೋಕ್ಷವಾಗಿ ಸಣ್ಣದೊಂದು ಅಲೆ ಏಳುವ ಘಟನೆಗಳು ಅರಮನೆಯಲ್ಲಿ ಜರುಗತೊಡಗಿದ್ದವು. ಮಹಾರಾಣಿ ದೇವಿದೇವಯಾನಿಯವರ ಅಸಹನೆ, ಕೋಪ, ತಾಪ, ಅರಚಾಟ ಇತ್ಯಾದಿಗಳು ಇತ್ತಿತ್ತಲಾಗಿ ಹೆಚ್ಚಾಗತೊಡಗಿದ್ದವು. ಇದರಿಂದ ಗಾಬರಿಯಾಗಿದ್ದ ಲಕ್ಷ್ಮಿಯು ತನ್ನೊಂದಿಗೆ ರಾತ್ರಿ ಪಹರೆ ಕಾರ್ಯದಲ್ಲಿ ಭಾಗಿಯಾಗುತ್ತಿದ್ದ ಗೆಳತಿ ಅಂಬಿಕೆಯನ್ನು ಕೇಳಲು ಆಕೆ ತಾವಿಬ್ಬರೂ ಪಹರೆ ಕೆಲಸ ಮುಗಿಸಿ ಮನೆಗೆ ಹಿಂದಿರುಗಿ ಹೋದಮೇಲೆ ಮಹಾರಾಣಿಯವರ ಕೋಪಕ್ಕೆ ಕಾರಣವನ್ನು ಕುರಿತು ಹೀಗೆ ತಿಳಿಸುತ್ತಾಳೆ.

ರಾಕ್ಷಸರ ದೊರೆ ವೃಷಪರ್ವ, ಮಗಳು ಶರ್ಮಿಷ್ಠೆ, ಗುರುಶುಕ್ರಾಚಾರ್ಯ, ಇವರ ಮಗಳು ದೇವಿದೇವಯಾನಿ, ದೇವಿದೇವಯಾನಿ ಶರ್ಮಿಷ್ಠೆಯರದು ಅತಿಯಾದ ಸ್ನೇಹ. ಯಾವುದೋ ಒಂದು ಸಲ್ಲದ ಸಲಿಗೆಯ ಕಾರಣಕ್ಕಾಗಿ ಮುರಿಯಿತು. ದೇವಿದೇವಯಾನಿವರ ರವಿಕೆಯನ್ನು ಶರ್ಮಿಷ್ಠೆ ಅಪ್ಪಿತಪ್ಪಿ ತೊಟ್ಟುಬಿಟ್ಟರಂತೆ. ಅದೇ ಕಾರಣದಿಂದಾಗಿ ದೇವಯಾನಿ ಶರ್ಮಿಷ್ಠೆಯೊಂದಿಗೆ ಸಿಕ್ಕಾಪಟ್ಟೆ ಜಗಳಕಾದರಂತೆ. ಜಗಳ ತಾರಕಕ್ಕೆ ಮುಟ್ಟಿ, ಸಾಕಾದ ಶರ್ಮಿಷ್ಠಾದೇವಿ ದೇವಯಾನಿಯವರನ್ನು ಹಾಳು ಬಾವಿಗೆ ದೂಡಿಬಂದುಬಿಟ್ಟರು. ಬೇಟೆಗಾಗಿ ಅಚಾನಕ್ಕಾಗಿ ಯಯಾತಿ ಮಹಾರಾಜರು ಅತ್ತಲೇ ಹೋಗಿದ್ದರಿಂದ ದೇವಿದೇವಯಾನಿಯವರನ್ನು ಬಾವಿಯಿಂದ ಮೇಲೆತ್ತಿ ಕಾಪಾಡಿದರು. ಊರಿಗೆ ವಾಪಸ್ಸಾದ ದೇವಯಾನಿ ಅಪ್ಪನಿಗೆ ಚಾಡಿ ಹೇಳಲು, ರಾಜನ ಬಳಿ ದೂರು ಹೋಗಲು, ಶರ್ಮಿಷ್ಠೆಗೆ ದೇವಿದೇವಯಾಗಿರುವ ದಾಸಿಯಾಗುವ ಶಿಕ್ಷೆ ವಿಧಿಸಲಾಯಿತು.

ಮುಂದೆ ದೇವಿದೇವಯಾನಿ ಯಯಾತಿ ಮಹಾರಾಜರನ್ನೇ ಒಲಿದು ಅವರನ್ನೇ ಮದುವೆಯಾಗಿ ಮಹಾರಾಜರೊಂದಿಗೆ ಹೊರಟಾಗ ಶರ್ಮಿಷ್ಠೆ ದೇವಯಾನಿಯವರ ದಾಸಿಯಾಗಿ ಯಯಾತಿ ಮಹಾರಾಜರ ರಾಜ್ಯವನ್ನು ಪ್ರವೇಶಿಸಬೇಕಾಯಿತು. ದಾಸಿಯಾಗಿ ಬಂದ ಶರ್ಮಿಷ್ಠೆ ತನ್ನನ್ನು ಕೂಡ ಯಯಾತಿ ಮಹಾರಾಜರಿಗೆ ಒಲಿಯಲು, ಆಕೆಯಲ್ಲಿ ಮತ್ತೊಂದು ಸಂಸಾರ ಸಾಗಿಸಿದರು ಮಕ್ಕಳಾದವು. ಈ ವಿಚಾರ ತಿಳಿದೇ ದೇವಯಾನಿದೇವಿಯ ಅರಚಾಟ ಮುಗಿಲು ಮುಟ್ಟಿತ್ತು. ಮಹಾರಾಜರು ಕ್ಷಮೆ ಕೇಳಿದರೂ ದೇವಯಾನಿಯವರು ಅವರನ್ನು ದೂರವಿಟ್ಟಿದ್ದರು. ಶರ್ಮಿಷ್ಠೆಯು ತನ್ನನ್ನು ದೇವಯಾನಿ, ಮಹಾರಾಣಿ ಎಂದು ಒಪ್ಪಿಕೊಳ್ಳುವವರೆಗೂ ನನ್ನತ್ತ ಬರಬೇಡಿ ಎಂದು ಮಹಾರಾಜರಿಗೆ ಹೇಳಿಬಿಟ್ಟಿದ್ದಳು. ಹಾಗಾಗಿ ಮಹಾರಾಜರು ದೇವಯಾನಿ, ಶರ್ಮಿಷ್ಠೆಯರಿಬ್ಬರ ಪ್ರೀತಿ, ಸಾಮೀಪ್ಯವನ್ನು ಕಳೆದುಕೊಂಡು ನಲುಗಿಹೋಗಿದ್ದರು. ಒಮ್ಮೆ ದೇವಯಾನಿದೇವಿಯವರ ಅಂತಃಪುರಕ್ಕೆ ಬಂದ ಮಹಾರಾಜರಿಗೆ ಅಂತಃಪುರದ ಬಾಗಿಲಬಳಿ ಸುಂದರವಾದ ಪುತ್ತಳಿಯಂತೆ ನಿಂತಿದ್ದ ದಾಸಿ ಲಕ್ಷ್ಮಿಯರೂಪ ಅಚಾನಕಾಗಿ ಕಣ್ಣಿಗೆ ಬೀಳುತ್ತದೆ. ಆದರೆ ಲಕ್ಷ್ಮಿಗೆ ಮಹಾರಾಜರನ್ನು ಕುರಿತಂತೆ, ಬೇರೆಯವರಲ್ಲಿ ಇದ್ದಂತೆ ಅನನ್ಯ ಗೌರವವೇನೂ ಮೂಡಿರಲಿಲ್ಲ. ಕುತೂಹಲವಿತ್ತಷ್ಟೇ. ಮದ್ಯಸೇವನೆಯ ಅಮಲಿನಲ್ಲಿದ್ದ ಮಹಾರಾಜರು ಲಕ್ಷ್ಮಿಯ ಎದುರು ಧುತ್ತೆಂದು ಪ್ರತ್ಯಕ್ಷವಾಗಿ "ಯಾರು ನೀನು?" ಎಂದು ಪ್ರಶ್ನಿಸುತ್ತಾ, ಆಕೆ ಉತ್ತರಿಸುವ ಮುನ್ನವೇ

ಹಸಿದ ಹೆಬ್ಬುಲಿಯೊಂದು ಹರಿಣಿಯ ಮೇಲೆ ಹರಿಹಾಯ್ವಂತೆ ಲಕ್ಷ್ಮಿಯ ಕೈಗಳನ್ನು ಹಿಡಿದುಕೊಂಡು ದರದರನೆ ಕೋಣೆಯೊಳಗೆ ಎಳೆದುಕೊಂಡುಹೋಗಿ ಅವಳ ಮೇಲೆರಗಿದರು. ಕ್ಷಣಮಾತ್ರದಲ್ಲೇ ಯಾರೂ ಊಹಿಸದಿದ್ದ ದುರಂತ ಘಟನೆಯೊಂದು ನಡದೇ ಹೋಗಿತ್ತು. ಲಕ್ಷ್ಮಿಗೆ ತಾನು ಕಟ್ಟಿದ್ದ ಕನಸಿನ ಸಂಸಾರ ಸುಟ್ಟುಭಸ್ಮವಾಗಿ, ಧಾರಾಕಾರವಾಗಿ ಕಣ್ಣೀರು ಸುರಿಸಲಷ್ಟೇ ಸಾಧ್ಯವಾಗಿತ್ತು. ತಾಯ್ತನದ ಭಾಗ್ಯವಷ್ಟೇ ಸಿಕ್ಕಿದ್ದು. ಲಕ್ಷ್ಮಿಯ ಅಪ್ಪ ಶರಭಯ್ಯ ತನ್ನ ಮಗಳನ್ನು ಮಹಾರಾಜರು ಒಲಿದಿದ್ದಾರೆಂಬುದಾಗಿ ವಿಜಯೋತ್ಸವವನ್ನೇ ಆಚರಿಸಿದ್ದ. ಶರಭಯ್ಯನ ಬುದ್ಧಿವಂತಿಕೆ-ಯಿಂದಾಗಿ ಅರಮನೆಯಿಂದ ಮಹಾರಾಜರ ಪರವಾಗಿ ಹರಿತ ಕಳೆದುಕೊಂಡ ಕಠಾರಿಯೊಂದನ್ನು ಪುರೋಹಿತರು ತಂದು ಲಕ್ಷ್ಮಿಗೆ ವಿವಾಹ ನಡೆಸಿ ಮಂಗಳ ಸೂತ್ರ ಹಾಕಿಸಿದರು. ಜೊತೆಗೆ ಅವಳು ಸಾಯುವ ತನಕವೂ ಅರಮನೆಯಿಂದ ಉಂಬಳಿ ಬರುವ ಹಾಗೆ ಮಾಡಲಾಗಿತ್ತು.

ಈ ನಡುವೆ ಲಕ್ಷ್ಮಿ ತುಂಬು ಬಸುರಿಯಾಗಿರಲು ತಂದೆ ಶರಭಯ್ಯ ಸುಳಿವೇ ಸಿಗದಹಾಗೆ ನಾಪತ್ತೆಯಾಗಿ ಮರಣಹೊಂದಿದ್ದ. ಇದೇ ಸಮಯದಲ್ಲಿ ಲಕ್ಷ್ಮಿಗೆ ಮಗಳು ಹುಟ್ಟಿದ್ದಳು. ಅವಳೇ ಮಾಧವಿ. ಮಗು ಮಾಧವಿಯನ್ನು ಪಾರ್ವತಿಯ ಅವ್ವನೇ ನೋಡಿಕೊಳ್ಳುತ್ತಿದ್ದಳು. ಆದರೆ ಕೆಲವು ದಿನಗಳಲ್ಲಿಯೇ ಪಾರ್ವತಿಯ ಅವ್ವೆ ಸಣ್ಣದೊಂದು ಮೂಳೆ ಮುರಿತವೇ ಕಾರಣವಾಗಿ ಹಾಸಿಗೆ ಹಿಡಿದು ಕಣ್ಣುಮುಚ್ಚಿ ಕೊಂಡಿದ್ದಳು. ಲಕ್ಷ್ಮಿಗೆ ಅಪ್ಪನ ಸಾವಿಗಿಂತಲೂ ಪ್ರೀತಿಯ ಅವ್ವೆಯ ಸಾವು ತುಂಬಾ ದುಃಖತರಿಸಿತ್ತು.

ತಾಯಿ ಲಕ್ಷ್ಮಿಯು ಮಾಧವಿಯ ಸ್ವಾತಂತ್ರ್ಯವನ್ನು ಬಯಸಿದ್ದವಳು ಹಾಗಾಗಿ ಮಾಧವಿ ತನ್ನ ಬದುಕನ್ನು ಅವಳು ಇಷ್ಟ ಬಂದಂತೆ ಅವಳೇ ಬದುಕಲಿ ಅವಳ ಬದುಕಿನ ಮೇಲೆ ಅವಳಿಗೇ ಸಂಪೂರ್ಣ ಅಧಿಕಾರವಿರಲಿ ಎಂದು ಆಶಿಸಿದವಳು ಅಂತೆಯೇ ಮಾಧವಿ ಆದಿಮರಿಬ್ಬರೂ ಸ್ವತಂತ್ರ ಹಕ್ಕಿಗಳಂತೆ ಕಾಡು ಮೇಡು ಅಲೆಯುತ್ತಾ ಬೆಳೆಯುತ್ತಿದ್ದರು. ಮಹಾರಾಜರೇ ತನ್ನ ತಂದೆ ಎಂಬುದನ್ನು ತಿಳಿದಿದ್ದ ಮಾಧವಿ, ಅರಮನೆ ಮತ್ತು ಮಹಾರಾಜರನ್ನು ನೋಡುವ ಆಸೆಯನ್ನು ಆದಿಮನಿಗೆ ತಿಳಿಸುತ್ತಾಳೆ. ಆದಿಮ ಈ ವಿಷಯವನ್ನು ಲಕ್ಷ್ಮಿ ಅತ್ತೆಗೆ ಹೇಳಲು, ಅವಳು

ಕೆಂಡಾಮಂಡಲವಾಗಿ ಮಾಧವಿ ಅರಮನೆಗೆ ಹೋದರೆ ಮತ್ತೇನು ಹೊಸ ಕಥಾಂತರವಾಗುತ್ತದೋ ಎಂಬ ಆತಂಕದಿಂದ ಮಗಳಿಗೆ ಬೈದು ಸುಮ್ಮನಿರಿಸುತ್ತಾಳೆ.

ಇತ್ತ ಮಹಾರಾಜರು ಮಹಾರಾಣಿಯವರೊಡನೆ ಮನಸ್ತಾಪವನ್ನು ಮುಂದುವರಿಸಲು ಇಚ್ಛಿಸದೆ ಶರ್ಮಿಷ್ಠೆಯನ್ನು ಗಡೀಪಾರು ಮಾಡುತ್ತಾರೆ. ಇದರಿಂದ ಸಂತುಷ್ಟರಾದ ದೇವಯಾನಿಯೊಂದಿಗೆ ಕೆಲವು ವರ್ಷ ಸುಖವಾಗಿದ್ದರು. ಆದರೆ ಈ ನಡುವೆ ಮಹಾರಾಜರು ಕೈಗೊಂಡ ದಿಗ್ವಿಜಯೋತ್ಸವವನ್ನು ಆಚರಿಸುವ ಗುಂಪಿನಲ್ಲಿ ಶರ್ಮಿಷ್ಠೆ ಮತ್ತು ಆಕೆಯ ಮಕ್ಕಳು ಕಾಣಿಸಿಕೊಳ್ಳಲು, ಮಹಾರಾಜರ ಮೇಲೆ ಇನ್ನಷ್ಟು ಕೋಪಗೊಂಡ ದೇವಿದೇವಯಾನಿಯವರು ತಮ್ಮ ತಂದೆ ಶುಕ್ರಾಚಾರ್ಯರಿಗೆ ದೂರು ನೀಡುತ್ತಾರೆ. ತನ್ನ ಯೌವನದ ಮೂಲಕವೇ ಅಲ್ಲವೇ ಮಹಾರಾಜ ಇಷ್ಟೆಲ್ಲಾ ಕಾರುಬಾರು ನಡೆಸಿರುವುದು! ಮಗಳಿಗೆ ಮೋಸ ಮಾಡಿರುವುದು? ಎಂದು ಅಳಿಯನಿಗೆ **'ಅಕಾಲ ವೃದ್ಧಾಪ್ಯ'**ದ ಶಾಪ ಕೊಡುತ್ತಾರೆ. ಈ ಶಾಪದಿಂದಾಗಿ ಮಹಾರಾಜರ ಅಕಾಲ ವೃದ್ಧಾಪ್ಯದ ಸ್ವರೂಪ ನೋಡಿ ಸಹಿಸದೆ ದೇವಯಾನಿ ತಂದೆಯನ್ನು ಬೇಡಲು, ವೃದ್ಧಾಪ್ಯವನ್ನು ಯಾರಾದರೂ ತೆಗೆದುಕೊಂಡು ತಮ್ಮ ಯೌವನವನ್ನು ಅವರಿಗೆ ಕೊಡುವುದಾದರೆ ಮಹಾರಾಜರಿಗೆ ಮತ್ತೆ ವಯಸ್ಸು ಹಿಂತಿರುಗುತ್ತದೆ ಎಂದು ಹೇಳುತ್ತಾರೆ. ಅರ್ಧ ರಾಜ್ಯವನ್ನು ಕೊಡುವ ಆಸೆಯನ್ನು ತೋರಿಸಿದರೂ ಯಾರೂ ವೃದ್ಧಾಪ್ಯ ಸ್ವೀಕರಿಸಲು ಬರುವುದಿಲ್ಲ. ಆದರೆ ಶರ್ಮಿಷ್ಠಾದೇವಿ ತನ್ನಿಂದ ಮಹಾರಾಜರು ಈ ಶಾಪಕ್ಕೀಡಾದರೆಂದು ದುಃಖಿಸಲು ಶರ್ಮಿಷ್ಠೆಯ ಮಗ ಪುರು ತಂದೆಯಿಂದ ವೃದ್ಧಾಪ್ಯ ಸ್ವೀಕರಿಸಿ ತನ್ನ ಯೌವನವನ್ನು ತಂದೆಗೆ ಕೊಟ್ಟನು. ಇದರಿಂದ ಮಹಾರಾಜರು ಮಗನನ್ನು ಮೆಚ್ಚಿ ರಾಜ್ಯದ ಉತ್ತರಾಧಿಕಾರಿಯಾಗಿ ನೇಮಿಸಿದ್ದನು.

ಮಾಧವಿ ಇನ್ನೂ ಚಿಕ್ಕವಳೇನಲ್ಲ. ಬೆಳೆ-ಬೆಳೆಯುತ್ತಾ ಅವಳಿಗೂ ರಾಜ್ಯದ, ರಾಜರ ವಿಚಾರಗಳನ್ನು ತಿಳಿದುಕೊಳ್ಳುವ ಮಟ್ಟಿಗಿನ ಬುದ್ಧಿ ಬೆಳೆದಿತ್ತು. ಅವಳವ್ವೆಯ ಸ್ಥಿತಿ ಅವಳಿಗೀಗ ಅರ್ಥವಾಗಿತ್ತು. ತನ್ನದಲ್ಲದ ತಪ್ಪಿಗೆ, ತನ್ನದಲ್ಲದ ಬದುಕನ್ನು ಒಪ್ಪಿಕೊಂಡು ಬದುಕುತ್ತಿರುವ ಅವ್ವೆಗೆ ಬದುಕು ಬದುಕಾಗಿಲ್ಲ; ನೋವಿನ ಮೊತ್ತವಾಗಿದೆ ಎಂದು ಅವಳಿಗೆ ಗೊತ್ತಿದೆ. ಮಹಾರಾಜರ ಕ್ಷಣಿಕ ಸುಖಕ್ಕೆ, ಆಕ್ರಮಣಕ್ಕೆ ಒಳಗಾದ ಅವ್ವೆಗೆ ಹುಟ್ಟಿದವಳು ತಾನು ಎಂಬ ನೋವು ಅವಳನ್ನೀಗ ಕಾಡುತ್ತಿತ್ತು. ಅಪ್ಪನನ್ನು ನೋಡಬೇಕೆಂದಿದ್ದ ಅವಳ ಆಸೆ ಆಸೆಯಾಗಿ ಉಳಿಯದೇ, ಮಹಾರಾಜರ ಮೇಲೆ

ಕೋಪ ತಳೆದಿದ್ದಳು. ತನ್ನ ಸ್ವಾರ್ಥಕ್ಕಾಗಿ ಎಲ್ಲರ ಸುಖದ ಗೂಡುಗಳಿಗೂ ಬೆಂಕಿ ಇಡುವ ಬೇಟೆಗಾರನ ಹಾಗೆ ಸ್ವಾರ್ಥದ ಮಹಾಪರ್ವತದಂತೆ ಮಹಾರಾಜರು ಅವಳಿಗೆ ಕಾಣತೊಡಗಿದ್ದರು. ಆದರೂ ಮಾಧವಿಗೆ ಅಂತಹ ಮಹಾರಾಜರನ್ನು ನೋಡುವ ಮನಸ್ಸಿತ್ತು.

ದಿನಗಳು, ಮಾಸಗಳು ಉರುಳುತ್ತಿದ್ದವು. ಲಕ್ಷ್ಮಿಗೆ ದಿನೇ ದಿನೇ ಅರಳಿಕೊಳ್ಳುತ್ತಿದ್ದ ಮಾಧವಿಯದೆ ಒಂದು ಚಿಂತೆಯಾಗಿಬಿಟ್ಟಿತ್ತು. ಅವಳಿಗೆ ಮದುವೆ ಮಾಡುವ ವಯಸ್ಸಾಯಿತು ಎಂಬುದು ಅರಿವಿಗೆ ಬರುತ್ತಿದ್ದಂತೆಯೇ ಲಕ್ಷ್ಮಿಯ ಎದೆ ಢವಢವ ಎಂದು ಹೊಡೆದುಕೊಳ್ಳುತ್ತಿತ್ತು. ಲಕ್ಷ್ಮಿ ಮಹಾರಾಜರ ದಾಸಿಯಾದರೂ, ಮಾಧವಿ ಮಹಾರಾಜರ ಮಗಳಾಗಿದ್ದಳು. ಲಕ್ಷ್ಮಿ ಮತ್ತು ಮಹಾರಾಜರ ನಡುವಿನ ಸಂಬಂಧ ಎಷ್ಟೇ ಶಿಥಿಲವಾಗಿದ್ದರೂ, ಮಾಧವಿಯ ಮದುವೆಯ ಬಗೆಗೆ ನಿರ್ಧಾರ ತೆಗೆದುಕೊಳ್ಳುವ ಹಕ್ಕು ತನಗಿದೆಯೇ ಎಂಬ ಪ್ರಶ್ನೆ ಮೂಡಿ ಆಕೆಗೂ ಮಗಳಿಗೂ ನಡುವೆ ದೊಡ್ಡ ಕಂದಕವೇ ಮೂಡಿಬಿಡುತ್ತಿತ್ತು.

ಈ ವಿಚಾರವನ್ನು ಕುರಿತು ಲಕ್ಷ್ಮಿ ಪಾರ್ವತಿಯ ಬಳಿ ಹೇಳುತ್ತಾಳೆ. ಪಾರ್ವತಿ ಅದಾಗಲೇ ಆದಿಮ, ಮಾಧವಿ ಒಟ್ಟಾಗಿ ಇರುವಾಗಲೆಲ್ಲಾ ಅವಳ ಮನಸ್ಸಿನಲ್ಲಿ ಅವರಿಬ್ಬರೂ ಬದುಕಿಡೀ ಒಟ್ಟಿಗೆ ಇರುವಂತಾದರೆ?! ಎಂಬ ಸಣ್ಣದೊಂದು ಆಸೆ ಮಿಂಚಿನಂತೆ ಮೂಡಿ ಮಾಯವಾಗುತ್ತಿತ್ತು. ಆದರೆ ಮಾಧವಿ ಮಹಾರಾಜರ ಕುಡಿ ಎಂಬುದು ಪಾರ್ವತಿಯ ಬುದ್ಧಿಯಲ್ಲಿ ಸದಾ ಜಾಗೃತವಾಗಿ ಇರುತ್ತಿತ್ತು. ಹಾಗಾಗಿ ಪಾರ್ವತಿ ಅವರಿಬ್ಬರ ಒಡನಾಟವನ್ನು ಕಡಿಮೆಗೊಳಿಸಲು ಪ್ರಯತ್ನಿಸಿದಳಾದರೂ, ಅವರ ಸನಿಹ ತೀವ್ರಗೊಂಡು ಪ್ರೀತಿ ಚಿಗುರೊಡೆದು ಆದಿಮ 'ನನ್ನ ಪ್ರೀತಿಯ ಹುಡುಗಿ ನೀನೇ ಆಗಬೇಕೆಂದು' ಹೇಳಲು ಮಾಧವಿ ಆದಿಮನ ಬೆಚ್ಚನೆಯ ಪ್ರೀತಿಯನ್ನು ಒಪ್ಪಿಕೊಂಡಿದ್ದಳು. ಆ ದಿನದ ರಾತ್ರಿ ಆದಿಮನಿಗೆ ಕನಸುಗಳೋ ಕನಸುಗಳು. ಆ ಕನಸುಗಳ ಮಹಾರಾಣಿ ಮಾಧವಿಯೇ ಆಗಿದ್ದಳು. ಆದರೆ ಮಾಧವಿಗೆ ನಿದ್ದೆ ಬಾರದೆ ತಾನು, ಆದಿಮ, ಅವ್ವೆ, ಅತ್ತೆ! ಹೊಸದೊಂದ ಲೋಕ! ಹೊಸ ಸಂಬಂಧ! ಬೆಚ್ಚನೆಯ ಗೂಡು, ಪ್ರೀತಿಯ ಬದುಕು – ಕಲ್ಪನೆಯಲ್ಲಿಯೇ ಮುಳುಗಿ ಹೋಗಿದ್ದಳು ಮಾಧವಿ.

ಮಾರನೆಯ ದಿನ ಆದಿಮನನ್ನು ಕನಸಿನಲೋಕದಿಂದ ವಾಸ್ತವಲೋಕಕ್ಕೆ ತರುವಂತಹ ಗದ್ದಲ ಮನೆಯ ಹೊರಗಡೆ ಉಂಟಾಗಿತ್ತು. ಬೆದರಿದ ಎಳೆಗರುವಿನಂತೆ "ಅವ್ವೆ, ಅವ್ವೆ" ಎಂದು ಕೂಗುತ್ತಾ ಹೊರಬಂದ ಆದಿಮ, ಮಾಧವಿಯ ಮನೆಯ

ಮುಂದೆ ಎಷ್ಟೊಂದು ಜನ! ರಾಜಭಟರು, ದಾಸಿಯರು! ಮೂರ್ನ್ನಾಲ್ಕು ರಥಗಳೂ, ನಾಲ್ಕು ಬೆಂಗಾವಲಿನ ಅಶ್ವಗಳನ್ನು ನೋಡಿ ಆದಿಮನಿಗೆ ಆತಂಕವಾಗಿತ್ತು. ಏನು ನಡೆಯುತ್ತಿದೆ? ಎಂಬುದು ಅರಿವಾಗುವಷ್ಟರಲ್ಲೇ, ರಥಗಳು, ಕುದುರೆಗಳು..... ಬಂದ ಹಾದಿಯಲ್ಲೇ ತಮ್ಮೊಟ್ಟಿಗೆ ಮಾಧವಿಯನ್ನು ಕರೆದುಕೊಂಡು ಹಿಂದಿರುಗಿದ್ದವು. ಅವು ಹೊರಟ ತಕ್ಷಣವೇ ಪಾರ್ವತಿ ಆದಿಮರಿಬ್ಬರು ಲಕ್ಷ್ಮಿಯ ಮನೆಗೆ ಓಡಿಬಂದರು ಕಣ್ಣೀರು ಸುರಿಸುತ್ತಾ ಕುಳಿತಿದ್ದ ಲಕ್ಷ್ಮಿಯನ್ನು ಕುರಿತು "ಯಾಕೆ ಏನಾಯಿತು? ಮಾಧವಿ ಎಲ್ಲಿ?" ಎಂದು ಪ್ರಶ್ನಿಸಲು ಲಕ್ಷ್ಮಿಯು, ಮಾಧವಿಯನ್ನು ಅರಮನೆಗೆ ಕಳುಹಿಸಿಕೊಡಬೇಕೆಂಬ ರಾಜಾಜ್ಞೆಯಾಗಿದ್ದು, ಮಾಧವಿ ಅದೇನೆಂದು ಮಾತನಾಡಿ ಬರುತ್ತೇನೆಂದು ತನ್ನನ್ನು ಸಮಾಧಾನಪಡಿಸಿ ಹೊರಟ ವಿಚಾರ ತಿಳಿಸುತ್ತಾಳೆ. ಆದಿಮ ತಾನು ರಾತ್ರಿ ಕಂಡ ಕನಸುಗಳ ಸುಖ ಬೆಳಗಿನ ವಾಸ್ತವತೆಯ ಕಾವಿನೆದುರು ಕರಗಿ ಹೋಗುತ್ತಿರುವ ಆತಂಕವನ್ನು ಅನುಭವಿಸತೊಡಗಿದ್ದ ಹಾಗೆಯೇ ರಾತ್ರಿ ಕಳೆದು ಬೆಳಗಾಗುವುದರೊಳಗಾಗಿ ಬಾನು, ಭೂಮಿಗಳು ಬೇರ್ಪಟ್ಟು ನಿಂತಿದ್ದವು. ಮಾಧವಿ ಮತ್ತೆ ಮರಳಿ ಬರುತ್ತಾಳಾ?! ಎಲ್ಲರ ಮನಸ್ಸುಗಳೂ ಏಕಪ್ರಕಾರವಾಗಿ ಒಂದೇ ಒಂದು ಪ್ರಶ್ನೆಯನ್ನು ನಿರಂತರವಾಗಿ ಕೇಳುತ್ತಿದ್ದವು.

ಮಾಧವಿಯನ್ನು ಅರಮನೆಗೆ ಕರೆತಂದಾಗ, ಯಯಾತಿ ಮಹಾರಾಜರ ಕಾರುಬಾರುಗಳಿಂದ ಅರಮನೆಯ ವಾತಾವರಣ ತುಂಬಾ ಬಿಗುವಿನಿಂದ ಕೂಡಿತ್ತೇ ವಿನಾ ಸೌಹಾರ್ದಯುತ ವಾತಾವರಣವಿರಲಿಲ್ಲ ಏಕೆಂದರೆ ಯೌವನವನ್ನು ಹೊತ್ತು ಬಾನು-ಭೂಮಿಗಳನ್ನು ಒಂದು ಮಾಡಲು ಪುಟಿದೇಳಬೇಕಿದ್ದ ಪುರು ವೃದ್ಧಾಪ್ಯವನ್ನು ಹೊಂದಿ ಮೂಲೆ ಸೇರಿದ್ದಾನೆ. ಯೌವನದ ಏರುಸ್ಥಿತಿ ದಾಟಿ ಮಧ್ಯವಯಸ್ಕ ಸ್ಥಿತಿ ಮುಟ್ಟಿ ಪರಿಪಕ್ವವಾಗಿ ಪ್ರಬುದ್ಧವಾಗಿ ನಡೆದುಕೊಳ್ಳಬೇಕಾಗಿದ್ದ ಯಯಾತಿ ಮಹಾರಾಜರು ಮತ್ತೆ ಯೌವನದ ಏರುಸ್ಥಿತಿಗೆ ಬಂದು ನಿಂತಿದ್ದರು. ಏರು ಯೌವನವನ್ನು ಪಡೆದುಕೊಂಡಿದ್ದ ಮಹಾರಾಜರು ವಿಜೃಂಭಿಸುತ್ತಾ, ಹಸಿದ ಹುಲಿಯಂತೆ ದೇವಯಾನಿ, ಶರ್ಮಿಷ್ಠೆಯರನ್ನು ಬಯಸಿ ಬರಲು ಏಕಕಾಲಕ್ಕೆ ಅವರಿಬ್ಬರೂ ನಿರಾಕರಿಸುತ್ತಾರೆ. ಮಹಾರಾಜರಿಗಾದ ನಿರಾಕರಣೆಯ ಏಕೆಂದರೆ ಬಳಿಸಾರುವ ಮಹಾರಾಜರ ಮುಖದಲ್ಲಿ ಪುರುವೇ ಕಂಡುಬರುವ ಆತಂಕ ಅವರನ್ನು ಮಹಾರಾಜರಿಂದ ದೂರವಿರಿಸಿತ್ತು. ಪೆಟ್ಟು ಯುದ್ಧ, ದಿಗ್ವಿಜಯಗಳಲ್ಲಿ ಅದು ತನ್ನ ರೂಪವನ್ನು ಪಡೆದುಕೊಂಡಿತ್ತು.

ದೇವಿದೇವಯಾನಿ, ಶರ್ಮಿಷ್ಠಾದೇವಿಯರಿಬ್ಬರೂ ಮಹಾರಾಜರ ಮೇಲಿನ ತಮ್ಮ ದ್ವೇಷ ಅರ್ಥವಿಲ್ಲದ್ದೆನಿಸಿ, ಅವರಿಗೆ ಹತ್ತಿರವಾಗತೊಡಗಿದ್ದರು. ಇದರಿಂದ ಅವರಲ್ಲಿ

ಸೌಹಾರ್ದ ಕಾಣಿಸಿಕೊಂಡು ಅರಮನೆಯ ವಾತಾವರಣ ತಿಳಿಯಾಗಿ ನೆಮ್ಮದಿಪಟ್ಟುಕೊಳ್ಳುವಷ್ಟರಲ್ಲಿ ಮತ್ತೊಂದು ಬಂಡೆಗಲ್ಲು ತಲೆಯ ಮೇಲೆ ಬಿದ್ದಂತಹ ವಾತಾವರಣ ರಾಜಧಾನಿಯಲ್ಲಿ ಉಂಟಾಗಿತ್ತು. ಕಾರಣ ಗಾಲವಮುನಿಗಳ ಆಗಮನ. ಇದು ದೇವಯಾನಿ, ಶರ್ಮಿಷ್ಠಾದೇವಿಯರನ್ನು ಬುಡಸಮೇತ ಅಲ್ಲಾಡಿಸಿಬಿಟ್ಟಿತ್ತು.

ಗಾಲವಮುನಿಗಳು ವಿಶ್ವಾಮಿತ್ರರ ಶಿಷ್ಯರಾಗಿದ್ದರು. ಶಿಷ್ಯನ ಶಿಷ್ಯತ್ವದಿಂದಲೇ ತೃಪ್ತರಾಗಿದ್ದ ವಿಶ್ವಾಮಿತ್ರರು ಸರಳವಾಗಿ ಏನೂ ಬೇಡವೆಂದು ನುಡಿದಿದ್ದರು. ಆದರೆ ಶಿಷ್ಯನಿಗೆ ಮಾತ್ರ ಗುರು ತನ್ನಲ್ಲಿ ಗುರುದಕ್ಷಿಣೆ ಕೇಳಬೇಕು, ತಾನು ಕೊಡಬೇಕು ಎಂಬ ಹುಚ್ಚು ಹಠ, ಅಧಿಕಪ್ರಸಂಗ, ಸುಳ್ಳು ಪ್ರತಿಷ್ಠೆಯ ಭಾವನೆಗಳು ತೀವ್ರವಾಗಿ ಮೂಡಿದ್ದುವು. ಹಾಗಾಗಿ ವಿಶ್ವಾಮಿತ್ರರು ಗುರುದಕ್ಷಿಣೆ ಕೇಳಲೇಬೇಕೆಂದು ಒತ್ತಾಯಿಸತೊಡಗಿದ್ದರು. ವಿಶ್ವಾಮಿತ್ರರಿಗೆ ಒತ್ತಾಯವೇ?! ವಿಶ್ವಾಮಿತ್ರರ ಮುಂದೆ ಶಿಷ್ಯನ ಹಠವೇ?! ಮೊದಲೇ ದೀನನಾದ ಶಿಷ್ಯನಲ್ಲಿ ಎಂಟುನೂರು ಕುದುರೆಗಳನ್ನು ಗುರುದಕ್ಷಿಣೆಯಾಗಿ ಕೇಳಿದ್ದರು. ಅದೂ ಎಂತಹ ಕುದುರೆಗಳು?! ಶರೀರವಿಡೀ ಬಿಳುಪಾಗಿದ್ದು, ಒಂದು ಕಿವಿ ಮಾತ್ರ ಕಪ್ಪಾಗಿರುವಂಥ ಕುದುರೆಗಳು! ವಿಶ್ವಾಮಿತ್ರರಿಗೆ ಅಂತಹ ಕುದುರೆಗಳು ಅಷ್ಟು ಸಂಖ್ಯೆಯಲ್ಲಿ ಏಕೆ ಬೇಕೆಂದು ಶಿಷ್ಯರಾದ ಗಾಲವರು ಕೇಳುವಂತಿಲ್ಲ. ಹೋಗಲಿ ಎಂದರೆ ಆ ತರಹದ ವಿಶೇಷ ಕುದುರೆಗಳು ವಿಶ್ವದಲ್ಲಿ ಇವೆಯೇ? ಇದ್ದರೆ ಎಲ್ಲಿ ದೊರೆತಾವು? ಎಂಬುದರ ಬಗೆಗೂ ಅವರಿಗೆ ತಿಳಿವಳಿಕೆ ಇರಲಿಲ್ಲ! ಕೊಟ್ಟಮಾತಿಗೆ ತಪ್ಪುವ ಹಾಗೂ ಇರಲಿಲ್ಲ. ಗಾಲವರು ತಮ್ಮ ಹಠ, ಅಹಂಕಾರಕ್ಕೆ ಸರಿಯಾದ ಶಿಕ್ಷೆಯೇ ಆಯಿತು ಎಂದುಕೊಂಡಿದ್ದರು. ದಿನೇ ದಿನೇ ತಮ್ಮ ಅಸಹಾಯಕ ಸ್ಥಿತಿಯಿಂದ ಕಂಗಲಾಗಿ ಕೃಶರಾಗಿದ್ದು, ಮಾತು ತಪ್ಪಿದ ತನಗೆ ಆತ್ಮಹತ್ಯೆಯೊಂದೇ ಕೊನೆಯ ಹಾದಿ ಎಂದು ಯೋಚಿಸಿದ್ದರು. ಇಂತಹ ಅತಂತ್ರ ಸ್ಥಿತಿಯಲ್ಲಿ ಗೆಳೆಯ ಗರುಡರು ಅವರನ್ನು ಸಮಾಧಾನಿಸಿ, ವಿಶೇಷ ವಿಚಿತ್ರ ಕುದುರೆಗಳನ್ನು ಕೊಳ್ಳಲು ಹಣವನ್ನು ಸಂಗ್ರಹಿಸುವ ಸಲಹೆಯನ್ನು ಗಾಲವರಿಗೆ ನೀಡಲು, ಅವರೂ ಈ ಸಲಹೆ ಒಪ್ಪಿದ್ದರು. ಈ ಗರುಡರೇ ಯಯಾತಿ ಮಹಾರಾಜರ ಬಳಿಗೆ ಗಾಲವರನ್ನು ಕರೆತಂದಿದ್ದರು. ಗಾಲವರ ಎಲ್ಲ ವೃತ್ತಾಂತವನ್ನು ಮಹಾರಾಜರ ಮುಂದೆ ಅರುಹಿದ್ದರು.

ಯಯಾತಿ ಮಹಾರಾಜರಿಗೆ ಗರುಡರು ಗಾಲವರನ್ನು ಸಹಾಯ ಬಯಸಿ ತಮ್ಮ ಬಳಿಗೇ ಕರೆತಂದಿದ್ದು, ಹೆಮ್ಮೆ ಮತ್ತು ಗೌರವಾಭಿಮಾನಗಳ ವಿಷಯವೇ ಆಗಿತ್ತು. ಆದರೆ ಅದನ್ನು ಕಾಯ್ದುಕೊಳ್ಳುವ ಯೋಗ್ಯತೆ ಮಹಾರಾಜರಿಗೆ ಇರಲಿಲ್ಲ. ಪುರುವಿನ ಯೌವನವನ್ನು ಪಡೆದುಕೊಂಡಿದ್ದ ಮಹಾರಾಜರು ನಿರಂತರ ಯುದ್ಧ, ದಿಗ್ವಿಜಯ,

ವಿಲಾಸ ಜೀವನದಲ್ಲಿ ಮುಳುಗಿಹೋಗಿದ್ದು, ಅವರ ರಾಜ್ಯ ಮತ್ತು ಕೋಶಗಳು ಬಹಳವೇ ಬಡವಾಗಿದ್ದವು. ತಮ್ಮಲ್ಲಿ ದೇಹಿ ಎಂದು ಬಂದ ಗಾಲವವರಿಗೆ ನೀಡಲು ವಿಶೇಷ ಕುದುರೆಗಳೂ ಇರಲಿಲ್ಲ. ಅಂತಹ ಕುದುರೆಗಳನ್ನು ಕೊಳ್ಳಲು ಬೇಕಾದ ಸಂಪತ್ತನ್ನು ನೀಡಲು ಬೊಕ್ಕಸವೂ ಅಸಮರ್ಥವಾಗಿತ್ತು.

ಗಾಲವರನ್ನು ಮರಳಿ ಕಳುಹಿಸಲು ಇಷ್ಟಪಡದ ಮಹಾರಾಜರು, ತಮ್ಮ ಖ್ಯಾತಿಯ ಪ್ರತಿಪಾದನೆಗಾಗಿ ತತ್‌ಕ್ಷಣದಲ್ಲಿ ಹೊಳೆದ ಒಂದು ಸಾಧನವೇ ಮಾಧವಿ. ತಮ್ಮ ಮಗಳೆಂದು ಗುರುತಾಗಿ ಯಾವುದೋ ಒಂದು ಪುಟ್ಟ ಹಳ್ಳಿಯಲ್ಲಿ ಬದುಕುತ್ತಿರುವ ದಾಸಿ ಲಕ್ಷ್ಮಿಯ ಮಗಳು ಮಾಧವಿಯ ಮೇಲೆ ತಮಗೆ ಸಂಪೂರ್ಣವಾಗಿ ಅಧಿಕಾರ ಇದೆಯೆಂದೇ ಅವರು ಭಾವಿಸಿದ್ದರು. ಅದೂ ರಾಣಿಯರಲ್ಲಿ ಹುಟ್ಟಿದ ಮಗಳಲ್ಲ! ದಾಸಿಯೋರ್ವಳಲ್ಲಿ ಹುಟ್ಟಿದ ಮಗಳು. ಮತ್ತೊಬ್ಬ ದಾಸಿ?! ತಂದೆಯೂ ಆಗಿರುವ ಮಹಾರಾಜರ ಸೇವೆಗೆ ಅವಳು ಸಿದ್ಧಳಾಗಿರಬೇಕಿತ್ತು. ರಾಜಾಜ್ಞೆಯಂತೆ ನಡೆದುಕೊಳ್ಳಬೇಕು, ಇಲ್ಲವೇ ತಲೆಯನ್ನು ದಂಡವಾಗಿ ಒಪ್ಪಿಸಬೇಕು. ಪ್ರಭುತ್ವದ ಅಧಿಕಾರ, ಶಕ್ತಿಗಳನ್ನು ಇಟ್ಟುಕೊಂಡು ಅವರು ಮಾಧವಿಯನ್ನು ಕರೆತರಿಸಿದ್ದರು.

ರಾಜಾಜ್ಞೆಯಂತೆ ಅರಮನೆಗೆ ಬಂದ ಮಾಧವಿಯನ್ನು ಯಯಾತಿ ಮಹಾರಾಜರು ಗಾಲವ ಮುನಿಗಳಿಗೆ 'ದಾನ' ನೀಡುವ ತೀರ್ಮಾನ ಮಾಡಿ "ಅವಳನ್ನು ನಿಮಗೆ ಬೇಕಾದ ಕುದುರೆಗಳಿಗೆ ವಿನಿಮಯ ಮಾಡಿಕೊಳ್ಳಬಹುದು. ಅಥವಾ ಅವಳನ್ನು ಉಪಯೋಗಿಸಿಕೊಂಡು ಕುದುರೆಗಳನ್ನು ಕೊಳ್ಳಲು ಬೇಕಾದ ಸಂಪತ್ತನ್ನು ಆರ್ಜಿಸಿಕೊಳ್ಳುವುದು" ಎಂದು ಗಾಲವರಿಗೆ ಹೇಳಿ ತಮ್ಮ ಅಹಂ, ಪ್ರತಿಷ್ಠೆಯನ್ನು ಮೆರೆದಿದ್ದರು. ಒಂದು ಹೆಣ್ಣನ್ನು 'ಒತ್ತೆ' ಇಡುವುದೆಂದರೆ, 'ದಾನ' ನೀಡುವುದೆಂದರೆ ಅದರರ್ಥ – 'ಅದು ಅವಳ ದೇಹದ ಅನುಭೋಗವೇ ಹೊರತು ಮತ್ತೇನಲ್ಲ'ವೆಂದು ತಿಳಿದ ದೇವಿದೇವಯಾನಿ ಮತ್ತು ಶರ್ಮಿಷ್ಠಾದೇವಿಯರಿಬ್ಬರಿಗೂ, ಪುರುವೂ ಎಲ್ಲರೂ ದಾಸಿ ಲಕ್ಷ್ಮಿ ಮತ್ತು ಅವಳ ಮಗಳು ಮಾಧವಿಯ ಮೇಲಿನ ಮಹಾರಾಜರ ಕ್ರೌರ್ಯವನ್ನು ತಡೆಗಟ್ಟಲು ಪ್ರಯತ್ನಿಸಿದರು. ಆದರೆ ಅವರೆಲ್ಲರ ಮಾತಿಗೆ ಕಿಂಚಿತ್ತೂ ಬೆಲೆಕೊಡದ ಸ್ವಾರ್ಥದ ಮೂಟೆ, ಕಟುಕ ಪಿತೃಮನದ ಮಹಾರಾಜರು ಮಾಧವಿಯನ್ನು ಗಾಲವರಿಗೆ ದಾನವಾಗಿ ನೀಡಿಯೇಬಿಟ್ಟರು.

ಮಾಧವಿ ರಾಜಾಜ್ಞೆಯಂತೆ ಅರಮನೆಗೆ ಬಂದಳಾದರೂ ಆ ರಾಜಾಜ್ಞೆಯ ಹಿಂದಿದ್ದ ಮಹಾರಾಜರ ಸ್ವಾರ್ಥಭರಿತ ಉದ್ದೇಶ ಅರ್ಥವಾಗಿರಲಿಲ್ಲ. ತನ್ನಿಂದಾಗ–

ಬಹುದಾದ ಯಾವುದೋ ಕೆಲಸಕ್ಕೆ ತನ್ನನ್ನು ಅರಮನೆಗೆ ಕರೆಸಿರಬಹುದು. ಮಹಾರಾಜರನ್ನು ನೋಡಬೇಕೆಂದಿದ್ದ ತನ್ನ ಆಸೆಯೂ ಈಡೇರಬಹುದು, ತನ್ನವ್ವೆಗಾಗಿದ್ದ ಅನ್ಯಾಯದ ಬಗ್ಗೆಯೂ ಕೇಳಬಹುದು, ಇದೆಲ್ಲಾ ಮುಗಿದು ತನ್ನಹಳ್ಳಿಗೆ ವಾಪಸ್ಸಾಗವಹುದೆಂದುಕೊಂಡೇ ಬಂದಿದ್ದಳು. ಮಾಧವಿಯನ್ನು ಅರಮನೆಯಲ್ಲಿ ದೇವಿದೇವಯಾನಿ, ಶರ್ಮಿಷ್ಠೆಯರು ದೊಡ್ಡವ್ವೆಯರ ರೀತಿಯಲ್ಲೇ ಪ್ರೀತಿ-ವಾತ್ಸಲ್ಯದಿಂದ ನೋಡಿಕೊಂಡರು. ಆ ದೊಡ್ಡವ್ವೆಯರು ಮಾಧವಿಗೆ ಹೇಳಲಾಗದ ಆಕೆಯ ದಾನದ ವಿಚಾರವನ್ನು, ಮುಂದೆ ಮಹಾರಾಜರೇ ಆಕೆಗೆ ಹೇಳುತ್ತಾರೆ. 'ಮಗಳೇ ಮಗಳೇ' ಎನ್ನುತ್ತ ಪ್ರೀತಿಯ ಮುಖವಾಡ ಹಾಕಿ ದಾನದ ವಿಚಾರ ತಿಳಿಸಲು, ಮಾಧವಿ ಮಹಾರಾಜರಿಗೆ "ನಾನು ನಿಮ್ಮ ಮಗಳು, ಸೂಳೆಯಲ್ಲ" ಎಂದು , ಮುಂದೆ 'ನೀವು ನನ್ನ ತಂದೆಯೇ ಅಲ್ಲ' ತನ್ನನ್ನು ಹಳ್ಳಿಗೆ ಕಳುಹಿಸಿಕೊಡಿ' ಎಂದು ಕೂಗಾಡುತ್ತಾ ಪ್ರತಿಭಟಿಸುತ್ತಾಳೆ. ಮಹಾರಾಜರ ಮುಂದೆ ಮದವೇರಿದ ಆನೆಯೂ ಮುದುರಿ ಕೂರಬೇಕು, ಹಾಗೆಯೇ ಮಹಾರಾಜರ ಆರ್ಭಟಕ್ಕೆ ಹೆದರಿ ಮಾಧವಿ ಜೀವರಸ ಸೋರಿಹೋದ ಕಬ್ಬಿನಜಲ್ಲೆಯಂತೆ ನಿಸ್ಸಾರವಾಗಿ ಕುಸಿದುಹೋದಳು. ಮಹಾರಾಜರು ತನ್ನ ಮೇಲಿನ ಕೋಪಕ್ಕೆ ತನ್ನ ಜೀವವಾದ ಅವ್ವೆಗೆ ಪ್ರಭುತ್ವದ ಶಕ್ತಿಯನ್ನು ಬಳಸಿ ಏನಾದರೂ ಮಾಡಿಬಿಟ್ಟರೇ? ಎಂಬ ಭಯದಿಂದ ಮಾಧವಿ ಮಹಾರಾಜರ ಸೇವೆಗೆ ಓರ್ವ ದಾಸಿಯೆಂಬಂತೆ ಸಿದ್ಧಳಾಗುತ್ತಾಳೆ.

ಮಾಧವಿ ಹೇಳುವಂತೆ, 'ಮಹಾರಾಜರು ನನ್ನ ದೇಹದ ಮೇಲೆ ತಮ್ಮ ಅಧಿಕಾರ ಸ್ಥಾಪಿಸಬಹುದು. ಅದನ್ನು ದಾನ ಮಾಡಬಹುದು. ದಾನ ಪಡೆದ ಮುನಿಗಳಿಗೂ ಅಷ್ಟೇ ನನ್ನ ದೇಹವನ್ನಷ್ಟೇ ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳಲು ಸಾಧ್ಯ. ಆದರೆ ನನ್ನ ಮನಸ್ಸು....?! ನನ್ನ ಮನಸ್ಸು ನನ್ನದೇ ಆಗಿರುತ್ತದೆ. ಮಹಾರಾಜರಿಗೇ ಮಹಾರಾಜರಾಗುವವರು ಬಂದರೂ ಅದರ ಮೇಲೆ ಆಕ್ರಮಣ ಮಾಡಲು ಎಂದಿಗೂ ಸಾಧ್ಯವಿಲ್ಲ. ನಾನೇ ಮನಸ್ಸು, ನನ್ನದೇ ಮನಸ್ಸು, ಅದೇ ನನ್ನ ಅಸ್ತಿತ್ವ, ನನ್ನವ್ವೆಯ ಮಗಳಾಗಿಯೇ ಹಿಂದಿರುಗುತ್ತೇನೆ' ಎಂದು ದೃಢನಿರ್ಧಾರಮಾಡಿ ಮಹಾರಾಜರ ವಾಕ್‌ಪರಿಪಾಲನೆಗಾಗಿ ಗಾಲವರ ಜೊತೆ ಹೊರಡಲು ಸಿದ್ಧಳಾದಳು.

ಇತ್ತ ತನ್ನವ್ವೆ ನನ್ನನ್ನು ಹುಡುಕಿಕೊಂಡು ಅರಮನೆಗೆ ಬಂದುಬಿಟ್ಟರೆ! ತನ್ನ ಮಗಳಿಗೊದಗಿದ ದುಃಸ್ಥಿತಿಯ ಬಗ್ಗೆ ತಿಳಿದರೆ! ಎದೆಯೊಡೆದು ಸಾಯುತ್ತಾಳೆಂದು ತಿಳಿದ ಮಾಧವಿ, ಅವ್ವೆಗೊಂದು ಓಲೆ ಬರೆದಿದ್ದಳು 'ತಾನಿಲ್ಲಿ ಸೌಖ್ಯವಾಗಿದ್ದು, ರಾಜ್ಯಕಾರ್ಯ-ವೊಂದು ತನ್ನಿಂದಾಗಬೇಕಿದ್ದು, ಅದಕ್ಕೆ ನಿರ್ದಿಷ್ಟ ಅವಧಿಯಿಲ್ಲ. ತಾನು ಬರುವ ತನಕ

ಅವ್ವೆಯನ್ನು ಆದಿ, ಅತ್ತೆ ಚೆನ್ನಾಗಿ ನೋಡಿಕೊಳ್ಳಬೇಕೆಂದು, ಅವ್ವೆ ತನ್ನನ್ನು ಹುಡುಕಿಕೊಂಡು ಅರಮನೆಗೆ ಬರಬಾರದೆಂದು. ಒಂದು ವೇಳೆ ಅವ್ವೆ ಅರಮನೆಗೆ ಬಂದುಬಿಟ್ಟರೆ ಅವಳೆಂದೂ ಅವ್ವೆಯನ್ನು ನೋಡುವುದಿಲ್ಲವೆಂದು' ಬರೆದಿದ್ದಳು. ಅಂತೆಯೇ ಲಕ್ಷ್ಮಿ ಅವಳು ಬರುವ ದಾರಿಯನ್ನೇ ಕಾಯುತ್ತಾ ಕುಳಿತಳು.

ಯಯಾತಿ ಮಹಾರಾಜರು ಮಾಧವಿಯನ್ನು ಗಾಲವರಿಗೆ ದಾನವಾಗಿ ಒಪ್ಪಿಸಿದಾಗ, ಮಾಧವಿ ಗಾಲವರನ್ನು ಕುರಿತು "ನಾನು ಮಾಧವಿ ಅರಮನೆಯ ಊಳಿಗದಲ್ಲಿದ್ದ ದಾಸಿ ಲಕ್ಷ್ಮಿಯ ಮಗಳು. ನಿಮ್ಮ ಇಷ್ಟಾರ್ಥ ಸಾಧನೆಗೆ ಒಂದು ಸರಕಾಗಿ, ಸಲಕರಣೆಯಾಗಿ ರಾಜತ್ವದ ಒತ್ತಾಯಕ್ಕೆ ಮಣಿದು ನಿಮ್ಮೊಡನೆ ಒತ್ತೆಯಾಗಿ ಬರುತ್ತಿದ್ದೇನೆ. ನಿಮ್ಮ ಕಾರ್ಯ ಸಾಧನೆ ಆದ ಬಳಿಕ ನಾನು ಸ್ವತಂತ್ರಳಾಗುತ್ತೇನೆ" ಎಂಬ ವಿಚಾರವನ್ನು ತಿಳಿಸಿ, ಗಾಲವಮುನಿಗಳೊಂದಿಗೆ ಹೊರಟಳು.

ಮಾಧವಿ ನಿಸರ್ಗ ಪ್ರಿಯೆ ಕಾಡೆಂದರೆ ಬಲು ಇಷ್ಟ. ಆಪ್ಯಾಯಮಾನ. ಒಂದೊಂದು ಕಾಡು ಹೂಗಳ ಕಂಪೂ ಅವಳಿಗೆ ಪರಿಚಿತ, ಒಂದೊಂದು ಕಾಡುಹಕ್ಕಿಯ ಕಂಠವೂ ಅವಳಿಗೆ ಪರಿಚಿತ. ಯಾವ ಯಾವ ಮರದ ಮೇಲೆ ಯಾವ ಯಾವ ಹಕ್ಕಿಗಳ ಸಂಸಾರ ನಡೆದಿದೆ ಎಂಬುದರ ಪಟ್ಟಿ ಅವಳ ನೆನಪಿನಲ್ಲಿ ಅನಾಯಾಸವಾಗಿ ಇರುತ್ತಿತ್ತು. ಆದರೀಗ ಮಾಧವಿ ಅದಾವುದರ ಪರಿವೆಯೂ ಇಲ್ಲದೆ ಗಾಲವರಿಗಿಂತ ಮುಂದೆ ಮುಂದೆಯೇ ಕಾಡಿನ ನಡುವೆ ನಡೆಯುತ್ತಲೇ ಇದ್ದಳು. ಕತ್ತಲು ಆವರಿಸುತ್ತಿದ್ದರಿಂದ ಯಾವುದಾದರೂ ಋಷಿಗಳ ಆಶ್ರಮವಿದ್ದಲ್ಲಿ ಅಲ್ಲಿಯೇ ಉಳಿದುಕೊಳ್ಳೋಣವೆನ್ನುವಷ್ಟರಲ್ಲಿ ಮಹಾರಾಜ ಹರ್ಯಶ್ವರು ಹಾಕಿದ್ದ ಡೇರೆ ಕಾಣಿಸಿತ್ತು. ಹರ್ಯಶ್ವ ಮಹಾರಾಜರು ಬೇಟೆಗಾಗಿ ಕಾಡಿಗೆ ಬಂದು ಮೂರ್ನಾಲ್ಕು ದಿನಗಳಾಗಿದ್ದು, ಆ ಜಾಗದಲ್ಲಿ ಈ ರಾತ್ರಿ ವಾಸ್ತವ್ಯ ಹೂಡಲು ಗಾಲವರು ಮನಸ್ಸಿನಲ್ಲಿ ಆಲೋಚಿಸಿದ್ದರು. ಈ ವಿಚಾರ ಹರ್ಯಶ್ವರಿಗೆ ತಿಳಿದು, ವಿಶ್ವಾಮಿತ್ರರ ಶಿಷ್ಯರಾದ ಗಾಲವಮುನಿಗಳನ್ನು ಹರ್ಯಶ್ವರು ಬಹಳವೇ ಘನತೆ ಗೌರವಗಳಿಂದ ಎದಿರುಗೊಂಡಿದ್ದರು. ಗಾಲವರ ಜೊತೆ ಬಂದ ಮಾಧವಿಯನ್ನು ಕಂಡ ಹರ್ಯಶ್ವರಿಗೆ ಆಕಾಶದಲ್ಲಿ ಉದಿಸಬೇಕಿದ್ದ ಹೊಂಬಣ್ಣದ ಚಂದ್ರಮ ಇದ್ದಕ್ಕಿದ್ದಂತೆಯೇ ಭೂಮಿಯಲ್ಲಿ ಅವತರಿಸಿಬಿಟ್ಟಂತಹ ಲಾವಣ್ಯವತಿಯ ಹಾಗೆ ಕಂಡುಬಂದಳು. ಮುನಿಗಳೊಂದಿಗೆ ಬಂದಾಕೆ ಯಾರಿರಬಹುದೆಂಬ ಪ್ರಶ್ನೆ ಹರ್ಯಶ್ವರನ್ನು ಕಾಡಿತ್ತು. ಗಾಲವರ ಯೋಗಕ್ಷೇಮ ವಿಚಾರಿಸುತ್ತಿದ್ದ ಹರ್ಯಶ್ವರಿಗೆ ಗಾಲವರು 'ನನ್ನ ಗುರು ವಿಶ್ವಾಮಿತ್ರರಿಗೆ ವಿಶೇಷವೆನಿಸಿದ ಬಿಳಿಯ ದೇಹ, ಕಪ್ಪು ಕಿವಿಗಳನ್ನೊಂದಿದ ಕುದುರೆಗಳನ್ನು ದಕ್ಷಿಣೆ ನೀಡಬೇಕಾಗಿದ್ದು, ಅವುಗಳನ್ನು ಕೊಳ್ಳಲು

ಅಪಾರ ಸಂಪತ್ತು ಬೇಕು. ಅದಿಲ್ಲದ ಕಾರಣ ಯಯಾತಿ ಮಹಾರಾಜರು ತಮ್ಮ ಮಗಳಾದ ಮಾಧವಿಯನ್ನು ನನಗೆ ದಾನವಾಗಿ ನೀಡಿ ಅವಳನ್ನು ವಿನಿಮಯ ಮಾಡಿಕೊಂಡು ಕುದುರೆಗಳನ್ನು ಗಳಿಸಲು ಅವಳನ್ನು ನನ್ನೊಂದಿಗೆ ಕಳುಹಿಸಿದ್ದಾರೆ' ಎಂಬ ವಿಚಾರ ತಿಳಿಸಿದರು.

ಹರ್ಯಶ್ವ ಮಹಾರಾಜರು ಗಾಲವರೊಂದಿಗೆ ಕಾಣಿಸಿಕೊಂಡ ಮಾಧವಿಯ ಸೌಂದರ್ಯವನ್ನು ನೋಡಿ ಮೊದಲೇ ಬಯಸಿದ್ದರು. ಹಾಗಾಗಿ ಆಕೆಯನ್ನು ಪಡೆಯಲು ಆ ವಿಶೇಷ ಇನ್ನೂರು ಕುದುರೆಗಳನ್ನು ಗಾಲವರಿಗೆ ನೀಡಲು ಮುಂದಾದರು. ಆ ಇನ್ನೂರು ಕುದುರೆಗಳಿಗೆ ಪ್ರತಿಯಾಗಿ ಗಾಲವರು ಮಾಧವಿಯನ್ನು ಹರ್ಯಶ್ವರಿಗೆ ಒಪ್ಪಿಸಿದರು. ಗಾಲವರ ಒಪ್ಪಂದದಂತಗೆ ಒಂದು ವರ್ಷ ಮಾತ್ರ ಮಾಧವಿಯನ್ನು ಇಟ್ಟುಕೊಂಡು ಗಂಡು ಸಂತಾನವನ್ನು ಪಡೆದು ಬಳಿಕ ಆಕೆಯನ್ನು ಮುನಿಗಳೊಂದಿಗೆ ಕಳುಹಿಸಿಕೊಡಬೇಕಿತ್ತು. ಕಾಡಿನಲ್ಲಿ ಹುಲಿಯನ್ನು ಬೇಟೆಯಾಡಲು ಬಂದಿದ್ದ ಹರ್ಯಶ್ವರ ಕೈಗೆ ಹುಲ್ಲೆಮರಿಯೊಂದು ಸಿಕ್ಕಿಹಾಕಿಕೊಂಡ ಹಾಗಿತ್ತು. ಮಾಧವಿಯ ಸ್ಥಿತಿ. ಅವಳ ಮೇಲೆರಗಿದ ಹರ್ಯಶ್ವರ ಬೇಟೆ ಕೊನೆಗೊಂಡಿತ್ತು. ಮಾಧವಿ ರಸ ಹೀರಿ ಬಿಸಾಡಿದ ಕಬ್ಬಿನಂತಾಗಿದ್ದಳು. ಮಾಧವಿಗೊದಗಿದ್ದ ದುಸ್ತರವಾದ ಹಾದಿಯಲ್ಲಿದ್ದು ಮೊಟ್ಟ ಮೊದಲನೆಯ ನರಕದರ್ಶನದಂತಾಗಿತ್ತು. ರೌರವ ನರಕವದು!

ಹರ್ಯಶ್ವರಿಗೆ ಎರಡೂ ಹೆಣ್ಣುಮಕ್ಕಳೇ. ಗಂಡು ಸಂತಾನವಿರಲಿಲ್ಲ. ಹರ್ಯಶ್ವರು ಮಹಾರಾಣಿಯಿಂದ ದೂರವಿರಲು ಇದೂ ಒಂದು ಕಾರಣವಾಗಿತ್ತು. ಮಾಧವಿಯನ್ನು ಹರ್ಯಶ್ವರು ಅರಮನೆಗೆ ಕರೆತಂದಾಗ ಆಕೆಯ ದುರಂತದ ಕಥೆ ತಿಳಿದು ರಾಣಿ ಮರುಗಿದ್ದಳು. ಹಾಗಾಗಿ ಮಾಧವಿಗೆ ಪ್ರತಿ ದಿನ ಹರ್ಯಶ್ವರಿಂದ ಆಗಬಹುದಿದ್ದ ನರಕದರ್ಶನ, ಹಿಂಸೆ, ಆಕ್ರಮಣ, ಯಾತನೆಯನ್ನು ಆದಷ್ಟು ಮಟ್ಟಿಗೆ ತಪ್ಪಿಸಿದ್ದಳು. ಹರ್ಯಶ್ವರ ಮೊದಲ ಆಕ್ರಮಣದಿಂದಾಗಿಯೇ ಮಾಧವಿ ಅನಾರೋಗ್ಯಕ್ಕೆ ತುತ್ತಾಗಿದ್ದಳು. ಆಕೆಯ ಮಾನಸಿಕ ಸ್ಥಿತಿ ಮಾತ್ರ ಆನೆ ಹೊಕ್ಕ ಬಾಳೆ ತೋಟದಂತೆ ಜರ್ಜರಿತವಾಗಿತ್ತು. ಮುಂದೆ ಮಾಧವಿ ಗರ್ಭಿಣಿಯದಾಗ ಮಹಾರಾಣಿಯವರು ಅವಳನ್ನು ತಾಯಿಯಂತೆಯೇ ಪೋಷಿಸಿದ್ದಳು. ಆದರೆ ತಂದೆಸಮಾನ ವಯಸ್ಕರಾಗಿದ್ದ ಹರ್ಯಶ್ವರು ಆಕೆ ಗರ್ಭಿಣಿಯಾಗಿದ್ದಾಗಲೂ ಅವಳನ್ನು ಬಯಸಿ ಬರುತ್ತಿದ್ದ ಅಮಾನವೀಯ ಪ್ರವೃತ್ತಿಯವರಾಗಿದ್ದರು.

ಯಾವ ತಾಯಿಗೇ ಆಗಲಿ ಮಗುವನ್ನು ನಿರಾಕರಿಸುವುದು ಆಕೆ ತನ್ನ ಪ್ರಾಣ ನಿರಾಕರಿಸುವಷ್ಟೇ ನೋವಿನ ವಿಷಯ. ಆದರೆ ಮಾಧವಿ ತಾನು ಹೆತ್ತ ಮಗುವನ್ನು

ಬಿಟ್ಟು ಹೋಗುತ್ತಾಳೆಂಬುದನ್ನು ನೆನೆದು ಮಹಾರಾಣಿ ತುಂಬಾ ವೇದನೆಪಟ್ಟಿದ್ದರು. ಅಂತೆಯೇ ಮಾಧವಿ ಗಂಡುಮಗುವಿಗೆ ಜನ್ಮ ನೀಡಲು, ಸುದ್ದಿ ತಿಳಿಯುತ್ತಿದ್ದಂತೆಯೇ ಗಾಲವರು ಅವಧಿ ಮುಗಿದ ಬಳಿಕ ಮಾಧವಿಯನ್ನು ಕರೆದೊಯ್ದರು. ಹರ್ಯಶ್ವರ ಬಳಿ ಇನ್ನೂರು ಅಶ್ವಗಳಷ್ಟೇ ಸಿಕ್ಕಿದ್ದರಿಂದ ಇನ್ನೂ ಆರುನೂರು ಅಶ್ವಗಳನ್ನು ಸಂಪಾದಿಸಲು ಗಾಲವರು ಮಾಧವಿಯನ್ನು ಕರೆದುಕೊಂಡು ಪ್ರಯಾಣ ಬೆಳೆಸಿದರು.

ಮಾಧವಿಗೆ ತನ್ನದು ದಿಟವಾಗಿಯೂ ವೇಶ್ಯಾಕಾರ್ಯವೇ ಆಗುತ್ತಿದೆ ಎಂದೆನಿಸಿತ್ತು. ಏಕೆಂದರೆ ಒಬ್ಬನ ಬಳಿಯೇ ಎಂಟುನೂರು ಕುದುರೆಗಳು ಸಿಗಬಹುದು. ಒಂದು ಬಾರಿ ತನ್ನನ್ನು ತಾನು ಇಲ್ಲವಾಗಿಸಿಕೊಂಡರೆ, ಒಂದು ವರ್ಷದಲ್ಲಿ ಮತ್ತೆ ಅವ್ವೆಯ ಬಳಿಗೆ ಸಾಗಿಬಿಡಬಹುದು ಎಂಬ ಒಂದೇ ಒಂದು ಗುರಿ ಮಾಧವಿಗಿತ್ತು. ಆದರೆ ಆ ಗುರಿ ಅವಳು ಕೇವಲ ಇನ್ನೂರು ಕುದುರೆಗಳಿಗಷ್ಟೇ ಹರ್ಯಶ್ವರಿಗೆ ಒತ್ತೆಯಾದಾಗ ಛಿದ್ರಗೊಂಡಿತ್ತು.

ಗಾಲವರಿಗೆ ಆ ವಿಶೆಷ ಕುದುರೆಗಳನ್ನು ಹೊಂದಿದ್ದ ಮತ್ತೊಬ್ಬ ಮಹಾಶಯ ಸಿಕ್ಕಿದ್ದ. ಅವರೇ ದಿವೋದಾಸ ಮಹಾರಾಜರು. ಹಾಗಾಗಿ ಗಾಲವರು ಮಾಧವಿಯನ್ನು ದಿವೋದಾಸರಿಗೆ ಒಪ್ಪಿಸಲು ಕರೆದೊಯ್ದಿದ್ದರು. ದಿವೋದಾಸ ಮಹಾರಾಜರು ಬಹಳ ಒಳ್ಳೆಯ ವ್ಯಕ್ತಿ. ಧಾರ್ಮಿಕ ಸ್ವಭಾವದ ಧರ್ಮಬೀರು. ಆದರೆ ಭಗವಂತ ಅವರಿಗೆ ಮಕ್ಕಳ ಭಾಗ್ಯವನ್ನೇ ಕರುಣಿಸಿರಲಿಲ್ಲ. ಅದಕ್ಕಾಗಿ ಕೊರಗುತ್ತಿದ್ದರು. ರಾಜ್ಯ ಉತ್ತರಾಧಿಕಾರಿ ಇಲ್ಲದೆ ಅರಾಜಕತೆ ಕಡೆ ಸಾಗಿಬಿಡಬಹುದೆಂಬ ಆತಂಕದಲ್ಲಿದ್ದರೂ, ಎರಡನೆಯ ವಿವಾಹದ ಬಗೆಗೆ ಯೋಚಿಸದಷ್ಟೂ ಧರ್ಮಾತ್ಮ! ಮಹಾರಾಣಿಯವರೂ ಹಾಗೆಯೇ ಇದ್ದರು. ಇಬ್ಬರದೂ ಪ್ರೇಮ ವಿವಾಹ ಹೇಳಿ ಮಾಡಿಸಿದ ಜೋಡಿ ಅವರದಾಗಿತ್ತು.

ದಿವೋದಾಸ ಮಹಾರಾಜರ ರಾಜ್ಯಕ್ಕೆ ಬರುವಾಗ ಅಂದು ಸಂಜೆಯಾದ್ದರಿಂದ ಗಾಲವರು ತಮಗೆ ಪರಿಚಯವಿದ್ದ ಮುನಿಗಳ ಪರ್ಣಕುಟೀರದಲ್ಲಿ ಉಳಿದುಕೊಳ್ಳುತ್ತಾರೆ. ಮಾಧವಿ ರಾತ್ರಿಯಿಡೀ ನಿದ್ದೆಯಿಲ್ಲದೆ ಹೊರಳಾಡುತ್ತಿದ್ದಳು. ಕಾರಣ ಒಂದು ಕಡೆ ಹರ್ಯಶ್ವರ ಅರಮನೆಯಲ್ಲಿ ಬಿಟ್ಟು ಬಂದ ತನ್ನ ಮಗುವಿಗೆ ಹಾಲು ಕೊಡದಿದ್ದದ್ದು. ಅವಳ ಎದೆ ತುಂಬಾ ಹಾಲು ತುಂಬಿಕೊಂಡು ಎದೆ ಬಿಗಿಯುತ್ತಿತ್ತು. ಮತ್ತೊಂದು ಕಡೆ ಅವಳ ಇಡೀ ದೇಹದ ನರನಾಡಿಗಳೇ ಬಿಗಿಯುತ್ತಿದ್ದ ಅನುಭವಕ್ಕೆ ಅವಳು ಒಳಗಾಗಿದ್ದಳು. ಮಾಧವಿ ತನ್ನ ಈ ನೋವಿನಿಂದಾಗಿ ತನ್ನ ಈ ಶಿಕ್ಷೆಗೆ ಗಾಲವರೇ

ಕಾರಣ, ಹಾಗಾಗಿ ಅವರನ್ನು ಇಲ್ಲವಾಗಿಸಿಬಿಡುವ ಕೋಪವನ್ನು ತಂದುಕೊಂಡು ಕೊನೆಗೆ ಪ್ರಭುತ್ವದ ಸ್ವಾರ್ಥವನ್ನು ನೆನೆದು ಸುಮ್ಮನಾಗುತ್ತಿದ್ದಳು. ಮಾಧವಿಯ ವೇದನೆಯನ್ನಿರತ ಮುನಿಪತ್ನಿಯು ಆಕೆಗೆ ಸಮಾಧಾನಿಸುತ್ತಾ, ಅವಳ ಎದೆ ಅದುಮುತ್ತಾ ಹಾಲನ್ನು ನೆಲಕ್ಕೆ ಚಿಮ್ಮಿಸುತ್ತಾಳೆ. ರಾತ್ರಿ ಕಳೆದಿತ್ತು.

ಮಾಧವಿ ಬಾಣಂತಿ ಎಂಬ ವಿಚಾರ ತಿಳಿದಿದ್ದ ದಿವೋದಾಸರು, ಗಾಲವರು ಮತ್ತು ಮಾಧವಿಯನ್ನು ಕರೆತರಲು ರಥವನ್ನು ಕಳುಹಿಸಿಕೊಟ್ಟಿದ್ದರು. ದಿವೋದಾಸರ ಬಳಿಯೂ ಇನ್ನೂರು ಅಶ್ವಗಳೇ ಇದ್ದು, ಮಾಧವಿ ಇಲ್ಲಿಯೂ ಒಂದು ವರ್ಷದ ಅವಧಿಗೆ ದಾನವಾಗಿದ್ದಳು. ವಂಶೋದ್ಧಾರಕನನ್ನು ಪಡೆಯುವ ಹಿರಿಯರ ಹಂಬಲದಿಂದಾಗಿ ದಿವೋದಾಸರು ಮಾಧವಿಯಲ್ಲಿ ಗಂಡುಸಂತಾನವನ್ನು ಪಡೆಯಲು ಬಯಸಿದ್ದರು. ಅದಕ್ಕಾಗಿ ತಮ್ಮ ಮತ್ತು ಮಾಧವಿಯ ನಡುವೆ ಪರಸ್ಪರ ಸಾಂಗತ್ಯ, ಸಾಹಚರ್ಯೆ, ಸಂಬಂಧಗಳು ಮೂಡಬೇಕೆಂದು ಆಸೆಪಟ್ಟಿದ್ದವರು. ಆದರೆ ಮಾಧವಿ ಒಂದು ವಿನಿಮಯ ಸರಕಾಗಿದ್ದರಿಂದ ಅವಳಲ್ಲಿ ಈ ಸಾಹಚರ್ಯ-ಸಂಬಂಧಗಳು ಮೂಡುವ ಕಲ್ಪನೆಯೇ ಇಲ್ಲವೆಂಬುದನ್ನು ತಿಳಿದ ದಿವೋದಾಸರು, ಮಾಧವಿಯನ್ನು ಪಡೆದ ಗಡುವು ಮುಗಿಯುತ್ತಿದ್ದರಿಂದ ಜೊತೆಗೆ ಅವಳನು ಮುಂದಿನ ಕಾರ್ಯ ನಿರ್ವಹಿಸಲು ಕಳುಹಿಸಕೊಡಬೇಕಾಗಿದ್ದರಿಂದ ದಿವೋದಾಸರು ಅವರಿಗಿಷ್ಟವಿಲ್ಲದಿದ್ದರೂ ಮಾಧವಿಯ ಮೇಲೆ ಆಕ್ರಮಣ ಮಾಡಿಯೇ ಬಿಟ್ಟರು. ದಿವೋದಾಸರ ಪತ್ನಿ ಐಶ್ವರ್ಯಾದೇವಿ ಅಸಾಮಾನ್ಯ ಸೌಂದರ್ಯ, ಸಂಗೀತ, ನೃತ್ಯ, ಕಲೆ, ಚಿತ್ರ ರಚನೆಗಳಲ್ಲಿ ಪ್ರಾವೀಣ್ಯ ಹೊಂದಿದ್ದರೂ ಸಂತಾನ ಫಲ ಇರಲಿಲ್ಲ. ಹಾಗಾಗಿ ಐಶ್ವರ್ಯಾದೇವಿಗೆ ಮಾಧವಿಯ ಫಲವಂತಿಕೆಯನ್ನು ಕಂಡು ಈರ್ಷ್ಯೆ ಮೂಡಿತ್ತು. ಆದರೆ 'ಫಲವತ್ತಾದ ಭೂಮಿ'ಯಾಗಿದ್ದ ಮಾಧವಿ ದೀವೋದಾಸರಿಂದಾಗಿ ಮತ್ತೆ ಗರ್ಭಧರಿಸಿ ಅವರಿಗೂ ಗಂಡು ಸಂತಾನವನ್ನು ನೀಡಿದ್ದಳು. ಇಲ್ಲಿ ಮಾಧವಿಗೆ 'ಮಲ್ಲಿಕಾ' ಎಂಬ ಓರ್ವ ಸಂವೇದನೆಯುಳ್ಳ ದಾಸಿ ಸಿಕ್ಕಿದ್ದು ಮಾತ್ರ ಅವಳಿಗೆ ಸ್ವಲ್ಪ ಸಮಾಧಾನದ ವಿಚಾರವಾಗಿತ್ತು.

ಮಾಧವಿ ದಿವೋದಾಸರಿಗೆ ವಂಶೋದ್ಧಾರಕನನ್ನು ಕೊಟ್ಟು ಹೊರಡುವಷ್ಟರಲ್ಲಿ ಮಾಧವಿಯ ದುಃಸ್ಥಿತಿ ಕಂಡು ಈರ್ಷ್ಯೆಯ ಐಶ್ವರ್ಯಾದೇವಿಯಂತಹವರು ಕೊರಗಿದ್ದರು. ಗಾಲವರ ಬಂಧನದಿಂದ ಮಾಧವಿಯನ್ನು ಬಿಡುಗಡೆ ಮಾಡುವಷ್ಟು ವಿಶೇಷ ಕುದುರೆಗಳು ತಮ್ಮಲ್ಲಿರಬಾರದಿತ್ತಾ? ಎಂಬುದಾಗಿ ದಿವೋದಾಸರು ಮರುಗಿದ್ದರು. ಆದರೆ ಅವಧಿ ಮುಗಿದಿದ್ದರಿಂದ ಗಾಲವರು ಮಾಧವಿಯನ್ನು ಕರೆದುಕೊಂಡು ಹೊರಟಿದ್ದರು. ಮುಂದೆ ಗಾಲವ ಮುನಿಗಳು ಹಿಂದೆ ಮಾಧವಿ!

ಯಯಾತಿ ಮಹಾರಾಜರ ಸತ್ಯವಾಕ್ಕಿನ ಪ್ರಖ್ಯಾತಿಯ ಚೈತ್ರಯಾತ್ರೆ, ಗಾಲವ ಮುನಿಗಳ ಗುರುದಕ್ಷಿಣೆ ಸಂಗ್ರಹದ ಭಿಕ್ಷಾ ಯತ್ರೆ ಏಕಕಾಲಕ್ಕೆ ಮೆರವಣಿಗೆ ಹೊರಟಿದ್ದವು.

ಮಾಧವಿ ಈಗ ಉಶೀನರ ಮಹಾರಾಜರಿಗೆ ಒತ್ತೆಯಾಗಿದ್ದಳು. ಗಾಲವರ ಮತ್ತೊಬ್ಬ ಮಹಾರಾಜರನ್ನು ಹುಡುಕಿಕೊಂಡು ಹೋಗುವ ತಾಳ್ಮೆ ಕಳೆದುಕೊಂಡಿದ್ದರಿಂದ, ಒಟ್ಟಿಗೆ ನಾನೂರು ಕುದುರೆಗಳನ್ನು ಕೊಡಲು, ಅದಕ್ಕೆ ಪ್ರತಿಯಾಗಿ ಮಾಧವಿಯನ್ನು ಹೊಂದಿ ಎರಡು ಮಕ್ಕಳನ್ನು ಪಡೆದುಕೊಳ್ಳಲೂ ಉಶೀನರರನ್ನು ಕೇಳಿಕೊಂಡಿದ್ದರು. ಆದರೆ ಮಾಧವಿಯ ದುರದೃಷ್ಟ! ಉಶೀನರ ಬಳಿ ಇದ್ದದ್ದು ಇನ್ನೂರು ಅಶ್ವಗಳೇ.

ಉಶೀನರ ಮಹಾರಾಜರಿಗೆ ಅದಾಗಲೇ ಮೂವರು ಪತ್ನಿಯರಿದ್ದರು. ಹೆಣ್ಣು ಸಂತಾನವೂ ಸಾಕಷ್ಟಿತ್ತು. ಆದರೆ ಹೆತ್ತವರನ್ನು ಸ್ವರ್ಗಕ್ಕೆ ಸೇರಿಸಲು ಗಂಡುಸಂತಾನ ಬೇಕೆಂಬುದು ಮಹಾರಾಜರ ಮಾತಾಪಿತೃಗಳ ಬಯಕೆಯಾಗಿತ್ತು. ಅದಕ್ಕಾಗಿ ಮತ್ತೊಂದು ವಿವಾಹದ ಯೋಚನೆಯಲ್ಲಿದ್ದಾಗಲೇ ಅವರಿಗೆ ಗಾಲವ ಮುನಿಗಳ ಮೂಲಕ ಬಯಸದೇ ಬಂದ ಭಾಗ್ಯದಂತೆ ಮಾಧವಿ ದೊರಕಿದ್ದಳು.

ಮಾಧವಿಯನ್ನು ನೋಡಿಕೊಳ್ಳಲು ಉಶೀನರು ಸೇವಂತಿ ಎಂಬ ದಾಸಿಯನ್ನು ನೇಮಿಸಿದ್ದರು. ಮಾಧವಿಯ ದುಃಸ್ಥಿತಿಯನ್ನು ಕಂಡು ದಿವೋದಾಸರು. ಮಲ್ಲಿಕಾ.... ಈವರೆಗೂ ಎಲ್ಲರೂ ದುಃಖಪಟ್ಟವರೆ! ಮರುಕ ಪಟ್ಟವರೆ! ಆದರೆ ಈ ಸೇವಂತಿ ಎಂಬ ದಾಸಿ ಮಾತ್ರ ಮಾಧವಿಯನ್ನು, ಆಕೆಯ ಸ್ಥಿತಿಯನ್ನು ಕುರಿತು ತುಚ್ಛೀಕರಿಸಿ ಮಾತನಾಡುತ್ತಿದ್ದಳು. ಮೊನ್ನೆ ಮೊನ್ನೆಯ ತನಕವೂ ಹಿರಿಯ ದೊರೆಗಳು ಅಂತಃಪುರ ಬಿಟ್ಟು ಕದಲದಿದ್ದವರು, ಇತ್ತಿತ್ತಲಾಗಿ ಮಾಧವಿಯ ಕೋಣೆಗೆ ಬರುವುದನ್ನು ಅಭ್ಯಾಸ ಮಾಡಿಕೊಂಡಿರುವುದನ್ನು ಗಮನಿಸಿದ ಸೇವಂತಿ, ಮಾಧವಿಯನ್ನು 'ಯಾವ ಲೋಕದಲ್ಲೂ ಕಾಣೆ ಕಾಣವ್ವ, ಮಗನಿಗೂ ಅಪ್ಪನಿಗೂ ಬಲೆ ಬೀಸಿದ ಮಾಯಾಂಗನೆಯನ್ನು' ಎಂದು ವ್ಯಂಗ್ಯವಾಡುತ್ತಾಳೆ. ಮಾಧವಿ ಕೋಪಗೊಳ್ಳದೆ ಲೋಕದ ಜನರು ತನ್ನನ್ನು ನೊಡುವ ದೃಷ್ಟಿ ಸೇವಂತಿಯ ಮಾತುಗಳಲ್ಲಿದೆ ಎಂದು ಭಾವಿಸಿದ್ದಳು.

ಮಾಧವಿ ಉಶೀನರ ತಂದೆಯ ಸಣ್ಣತನವನ್ನು ಕಂಡು ತಾನು ಎಲ್ಲರ ಬಯಕೆಗಳನ್ನು ಪೂರೈಸುವ 'ಬೆಲೆವೆಣ್ಣಲ್ಲ' ಎಂಬುದನ್ನು ಉಶೀನರ ಮಹಾರಾಜರಿಗೆ ಅರ್ಥೈಸಿದ್ದಳು. ಮಾಧವಿಯ ಈ ಮಾತುಗಳಿಂದ ಉಶೀನರು ತಮ್ಮ

ವಂಶೋದ್ಧಾರಕನನ್ನು ಹೆತ್ತುಕೊಡುವ ಹೆಣ್ಣನ್ನು ಕೇವಲ ಓರ್ವ ದಾಸಿಯೆಂದೋ, ಬೆಲೆವೆಣ್ಣೆಂದೋ ತಿಳಿದಿದ್ದ ತಮ್ಮ ಭಾವನೆಯನ್ನು ಮನಸ್ಸಿನಿಂದ ದೂರವಿರಿಸಿದ್ದರು. ಉಶೀನರ ಪತ್ನಿಯರು ಅಕ್ಕ-ತಂಗಿರಂತಿದ್ದು, ದಾಸಿ ಸೇವಂತಿಯು ಮಾಧವಿಯ ಬಗ್ಗೆ ಚಾಡಿ ಹೇಳಿದರೂ, ಆ ಮಹಾರಾಣಿಯರು ಮಾಧವಿಯನ್ನು ತುಂಬಾ ಪ್ರೀತಿಯಿಂದಲೇ ನೋಡಿಕೊಂಡಿದ್ದರು. ಉಶೀನರರಿಂದ ಗರ್ಭಿಣಿಯಾಗಿದ್ದ ಮಾಧವಿಯನ್ನು ನೋಡಲು ರಾಜಮಾತೆಯವರು ಬಂದಿದ್ದು, ಮಾಧವಿಯ ನೋವಿನ ಸ್ಥಿತಿ ಅವರಲ್ಲಿ ವೇದನೆ-ಯನ್ನುಂಟುಮಾಡಿತ್ತು. ಆ ಮಹಾರಾಣಿಯರ ಒಡನಾಟ ಮಾಧವಿಗೆ ಆಕೆಯ ದೊಡ್ಡವ್ವೆಯವರನ್ನು ನೆನಪಿಸಿತ್ತು. ಆಕೆ ನಿರಾಳತೆಯಿಂದಿದ್ದಳು. ಆ ನಿರಾಳತೆ ಯಲ್ಲಿಯೇ ಮಾಧವಿ ಗಂಡುಮಗುವಿಗೆ ಜನ್ಮನೀಡಿ, ನಿರಾತಂಕವಾಗಿ ಮಹಾರಾಣಿಯರಿ ಗೊಪ್ಪಿಸಿದಳು. ಅಷ್ಟರಲ್ಲಾಗಲೇ ಗಾಲವರ ಓಲೆ ಬಂದಿತ್ತು.

ಗಾಲವರ ಓಲೆ ಉಶೀನರ ಅರಮನೆಗೆ ಬಂದ ಬೆನ್ನಿನಲ್ಲಿಯೇ ಗಾಲವರ ಆಗಮನವೂ ಶೀಘ್ರವಾಗಿಯೇ ಆಗಿತ್ತು. ಈ ಬಾರಿಯ ಅವರ ಮುಖ ಕಳೆದ ಬಾರಿಯಂತೆ ಅರಳಿಕೊಂಡಿರಲಿಲ್ಲ. ಏಕೆಂದರೆ ಮಾಧವಿ ಗಂಡುಸಂತಾನವನ್ನು ಹೆತ್ತುಕೊಡಲು ಇನ್ನೂ ಶಕ್ತಳಾಗಿದ್ದರರೂ, ಆ ವಿಶೇಷ ಕುದುರೆಗಳನ್ನು ಕೊಡುವವರಾರೂ ಸಿಕ್ಕಿರಲಿಲ್ಲ. ಆದರೆ ಗಾಲವರು ಮಾಧವಿಯನ್ನು ಕರೆದುಕೊಂಡು ತನ್ನ ಗುರು ವಿಶ್ವಾಮಿತ್ರರನ್ನು ಕಂಡು ವಿಷಯವನ್ನು ಇತ್ಯರ್ಥಪಡಿಸಿಕೊಳ್ಳಬೇಕೆಂದಿದ್ದರು.

ಮಾಧವಿ ಗಾಲವರಿಬ್ಬರೂ ಕಾಲ್ನಡಿಗೆಯಲ್ಲೇ ವಿಶ್ವಾಮಿತ್ರರ ಆಶ್ರಮಕ್ಕೆ ಬಂದಿದ್ದರು. ಇವರು ಆಶ್ರಮವನ್ನು ತಲುಪುವ ವೇಳೆಗಾಗಲೇ ಮಾಧವಿ ಸಂಪಾದಿಸಿಕೊಟ್ಟಿದ್ದ ಆರುನೂರು ಕುದುರೆಗಳೂ ಆಶ್ರಮವನ್ನು ತಲುಪಿಬಿಟ್ಟಿದ್ದವು. ಮಾಧವಿ ಕುಟೀರದ ಕಡೆ ನಡೆಯದೇ ಆಶ್ರಮದ ಸುತ್ತಯಿದ್ದ ಹಸಿರಿನ ಹುಲ್ಲನ್ನು ಮೇಯುತ್ತಿದ್ದ ಕುದುರೆಗಳತ್ತ ಹೋದಳು. ಅವುಗಳ ಇಡೀ ದೇಹ ಹುಣ್ಣಿಮೆಯ ಚಂದ್ರನಂತೆ ಶ್ವೇತವರ್ಣದಿಂದ ಕಂಗೋಳಿಸುತ್ತಿತ್ತು. ಕಿವಿಯೊಂದು ಮಾತ್ರ ಕಪ್ಪಾಗಿತ್ತು! ಭಗವಂತನ ಸೃಷ್ಟಿಯ ವೈಚಿತ್ರ್ಯ, ವಿಶೇಷತೆಗೆ ಮಾಧವಿ ಬೆರಗಾಗಿದ್ದಳು!

ಗಾಲವರು ಮಾಧವಿಯನ್ನು ಗುರು ವಿಶ್ವಾಮಿತ್ರರಿಗೆ ಪರಿಚಯಿಸಿದ್ದರು. ಮಾಧವಿಯ ಕಣ್ಣುಗಳು ಅವರನ್ನು ದಿಟ್ಟಿಸುತ್ತಿದ್ದಂತೆ ಅವಳ ಕೈಗಳು ಜೋಡಿಸಿದ್ದವು. ವಿಶ್ವಾಮಿತ್ರರು ತನ್ನ ಇಡೀ ಬದುಕನ್ನು ಬಾಯಿ ತೆರೆದು ನುಂಗಿಹಾಕಿದ ದೊಡ್ಡದೊಂದು ಉರಿಯುತ್ತಿರುವ ಅಗ್ನಿಕುಂಡದಂತೆ ಕಂಡುಬರುತ್ತಿದ್ದರು. ಉರಿಯುವ ಜಟೆಗಳು,

ಉರಿಯುವ ಗಡ್ಡ, ಉರಿಯುವ ಕಂಗಳು, ಉರಿಯುತ್ತಿರುವ ರೋಮಭರಿತ ಶರೀರ! ಮಧ್ಯವಯಸ್ಸು ದಾಟಿದ ವೃದ್ಧಾಪ್ಯದ ಕಡೆಗೆ ಸರಿಯುತ್ತಿರುವ ದೇಹ. ಅದನ್ನು ಒಪ್ಪಿಕೊಳ್ಳದ ಸೆಡೆತವೂ ಅದರಲ್ಲಿಯೇ ಕಂಡುಬಂದಿತ್ತು. ಮಾಧವಿ ನಿರ್ಲಿಪ್ತತೆಯಿಂದ ಮೌನವಾಗಿ ನಿಂತಿದ್ದಳು. ಗಾಲವರು ಗುರುಗಳಿಗೆ ತಾವು ಹೇಳಿದಂತಹ ವಿಶೇಷ ತೆರನಾದ ಎಂಟುನೂರು ಕುದುರೆಗಳನ್ನು ಹೊಂದಿಸಲು ತನಗೆ ಸಾಧ್ಯವಾಗದೇ, ಆರುನೂರು ಕುದುರೆಗಳನ್ನು ಆಶ್ರಮಕ್ಕೆ ತಲುಪುವಂತೆ ಮಾಡಲಷ್ಟೇ ತನಗೆ ಸಾಧ್ಯವಾಗಿದ್ದೆಂದು ಹೇಳಿದರು. ಉಳಿದ ಇನ್ನೂರು ಕುದುರೆಗಳಿಗೆ ಪ್ರತಿಯಗಿ ತಾವೇ ಮಾಧವಿಯನ್ನು ಒಂದು ವರ್ಷದ ಅವಧಿಗೆ ಪರಿಗ್ರಹಿಸಿ ತಾವೂ ಒಂದು ವರ್ಷದ ಅವಧಿಗೆ ಪರಿಗ್ರಹಿಸಿ ತಾವೂ ಒಂದು ಸಂತಾನ ಪಡೆದುಕೊಂಡು ಬಿಟ್ಟರೆ ಗುರುದಕ್ಷಿಣೆ ಸಂದಂತೆ ಆಗುತ್ತದೆ ಎಂದರು.

ವಿಶ್ವಾಮಿತ್ರರು ಮಾಧವಿಯನ್ನು ನೋಡಿದಾಗ ಮೂರು ವರ್ಷ ಗಂಡಸ–ರೊಂದಿಗಿದ್ದು, ಮೂರು ಮಕ್ಕಳನ್ನು ಹೆತ್ತು ಬಂದಿದ್ದರೂ ಅವಳ ಅಪರೂಪದ ರೂಪಸಂಪತ್ತು ಅವರನ್ನು ಆಕರ್ಷಿಸಿತ್ತು. ಹಾಗಾಗಿ ಶಿಷ್ಯ ಗಾಲವರನ್ನು ಕುರಿತು 'ನೀನು ಮೊದಲೇ ಇವಳನ್ನು ನನ್ನ ಬಳಿಗೆ ಕರೆತಂದಿದ್ದರೆ, ವಂಶ ಪ್ರವರ್ತಕರಾದ ನಾಲ್ವರು ಮಕ್ಕಳನ್ನು ನಾನೇ ಇವಳಿಂದ ಪಡೆಯಬಹುದಿತ್ತು! ಈಗಲಾದರೂ ಕರೆತಂದೆಯಲ್ಲ!' ಎಂದು ವಿಶ್ವಾಮಿತ್ರರು ಹೇಳಿದ ಮಾತು ಕೇಳಿದ ಗಾಲವ, ಮಾಧವಿಯರಿಬ್ಬರೂ ತಲೆ ತಿರುಗಿ ಬೀಳುವ ಸ್ಥಿತಿ ತಲುಪಿದ್ದರು.

ವಿಶ್ವಾಮಿತ್ರರ ಆಶ್ರಮದಲ್ಲಿ ಮಾಧವಿಯ ಬದುಕು ಆರಂಭವಾಗಿತ್ತು. ದಿನಗಳೆದಂತೆ ಮಾಧವಿಗೆ ಮೊದಲ ಮೂವರು ಮಹಾರಾಜರೊಂದಿಗೆ ಕಳೆದ ದಿನಗಳೇ ಸಹ್ಯವೆನಿಸಿದ್ದವು. ಆದರೆ ಇಲ್ಲಿ ಅವಳು ದೈಹಿಕವಾಗಿ, ಮಾನಸಿಕವಾಗಿ ಅಸಹನೀಯ–ರೆಂದು ಅಂದುಕೊಳ್ಳುತ್ತಿದ್ದ ವಿಶ್ವಾಮಿತ್ರರಿಗೆ ಮಾಧವಿ ದಿನವೂ ಬೇಕಿದ್ದಳು. ಮಾಧವಿ ಬಹಳ ಕೆಟ್ಟ ದಿನಗಳನ್ನು ಕಳೆಯುತ್ತಿದ್ದಳು. ಹೂವಿನಂತಹ ಹುಡುಗಿಯಾದರೂ ಹಾವಿನಂತೆ ಬುಸುಗುಡುವ ಮಾಧವಿಯ ರೀತಿಅವರಿಗೆ ಬಿಸಿತುಪ್ಪದಂತಾಗಿದ್ದು. ವಿಶ್ವಾಮಿತ್ರರನ್ನು ಕ್ಷುದ್ರ ಜಂತುವಿನಂತೆ ನೋಡಿದ್ದಳು. ಅದನ್ನು ಶಿಷ್ಯರ ಮುಂದೆಯೂ ಸ್ಥಾಪಿಸಿ ತೋರಿಸಿದ್ದಳು.

ಮಾಧವಿಗೆ ದಿನ ತುಂಬಿ ಗಂಡುಮಗುವಿಗೆ ಜನ್ಮನೀಡಲು ವಿಶ್ವಾಮಿತ್ರ ಆನಂದಪಟ್ಟು, ಮಗುಹುಟ್ಟಿದ ತಕ್ಷಣವೇ ತಾಯಿಯಿಂದ ಬೇರೆ ಮಾಡಿದ್ದರು. ಮಾಧವಿ

ನೊಂದುಕೊಂಡಿದ್ದಳು. ಕಾರಣ ಇಲ್ಲಿ ಮಗುವನ್ನು ಸಲಹಲು ಒಂದು ಹೆಣ್ಣಿನ ಸುಳಿವೂ ಇರಲಿಲ್ಲ, ಅಹಂ ತುಂಬಿದ ವಿಶ್ವಾಮಿತ್ರನ ಕೈಗೆ ಮಗುವನ್ನು ಒಪ್ಪಿಸಿದ್ದಳು. ಆದರೆ ಮತ್ತೊಂದು ಕಡೆ ಮಾಧವಿಗೆ ಬಹಳ ಆನಂದವಾಗಿತ್ತು. ತಾನು ದಾಸ್ಯದಿಂದ ಸ್ವಾತಂತ್ರ್ಯ ಪಡೆದುಕೊಳ್ಳುವ ಆನಂದ, ದೈಹಿಕ ಪಾರತಂತ್ರ್ಯ ಕೊನೆಗೊಂಡ ಆನಂದ.... ಅವಳಿಗಿತ್ತು.

ಈ ಬಾರಿ ಗಾಲವರು ಕೊಟ್ಟ ಅವಧಿಗಿರಲಿ, ಅದನ್ನು ಮೀರಿ ಒಂದೆರಡು ದಿನ ಕಳೆದರೂ ಮರಳಿ ಬಂದಿರಲಿಲ್ಲ. ಆದರೆ ಮಾಧವಿ ಕಾಯಲು ಸಿದ್ಧಳಿರಲಿಲ್ಲ ಅಪ್ಪರಲ್ಲಾಗಮಿಸಿ ಗಾಲವರೊಂದಿಗೆ ಮಾಧವಿ ಹೊರಟಿದ್ದಳು. ಗಾಲವರು ಮಾಧವಿ ಇಬ್ಬರೂ ಯಯಾತಿ ಮಹಾರಾಜರ ರಾಜ್ಯದೆಡೆಗೆ ಸಾಗಿದ್ದರು.

ಮಾಧವಿ ರಾಜ್ಯಕ್ಕೆ ಹಿಂತಿರುಗಿದಳೆಂಬ ಸುದ್ದಿ ಕಾಳ್ಗಿಚ್ಚಿನಂತೆ ಅಂತಃಪುರವನ್ನು ತಲುಪಿತ್ತು. ಜೊತೆಯಾಗೇ ಇದ್ದ ದೇವಯಾನಿ, ಶರ್ಮಿಷ್ಠೆಯರಿಬ್ಬರೂ ಆಸ್ಥಾನಕ್ಕೆ ಧಾವಿಸಿ ಬಂದಿದ್ದರು. ಗಾಲವರು ಮಾಧವಿಯನ್ನು ಯಯಾತಿ ಮಹಾರಾಜರಿಗೆ ಒಪ್ಪಿಸಿ ಕೃತಜ್ಞತೆಯ ಮಾತನಾಡಿದ್ದರು. ಮಹಾರಾಣಿಯವರು ತಾವು ಮಾಧವಿಯಲ್ಲಿ ಅಂದು ಕಂಡಿದ್ದ ಅದೇ ತಾನೇ ಅರಳಿದ ಕುಸುಮದ ಹೊಸತನ ಇಂದು ಮಾಸಿಹೋಗಿತ್ತು. ಅಲ್ಲಿ ಗಾಂಭೀರ್ಯ, ಪ್ರಬುದ್ಧತೆ ತುಂಬಿತ್ತು. ದುಃಖದ ಬದುಕೇ ಅವಳನ್ನು ಗಟ್ಟಿಗೊಳಿಸಿತ್ತು. ಮಾಧವಿಯದು ಸೋಲು, ನೋವುಗಳಿಗೆ ಹೆದರದ ವ್ಯಕ್ತಿತ್ವ ಅವುಗಳಿಂದಲೇ ಬದುಕನ್ನು ಕಟ್ಟಿಕೊಡುವ ವ್ಯಕ್ತಿತ್ವವಾಗಿತ್ತು.

ಯಯಾತಿ ಮಹಾರಾಜರು ತಮ್ಮ ಮಗಳು ತಮ್ಮ ಸತ್ಯವಾಕ್ಕಿನ ಪರಿಪಾಲನೆ–ಯನ್ನು ಚಾಚೂ ತಪ್ಪದೇ ನಡೆಸಿಕೊಡಲು, ಸಂತಸಗೊಂಡು ಮಾಧವಿಯ ಸ್ವಯಂವರನ್ನು ಏರ್ಪಡಿಸಲು ಮುಂದಾಗುತ್ತಾರೆ. ಅವಳು ಏನು ಕೇಳಿದರೂ ಅದನ್ನು ನಡೆಸಿಕೊಡುವ ಮಾತು ಕೊಡುತ್ತಾರೆ. ಮಾಧವಿ ಮಹಾರಾಜರ ಬಳಿ "ನನ್ನನ್ನು ನಿಮ್ಮ ದಾಸ್ಯದಿಂದ ಬಿಡುಗಡೆಗೊಳಿಸಿ, ನನ್ನ ಸ್ವಾತಂತ್ರ್ಯವನ್ನು ನನಗೆ ಮರಳಿ ಕೊಡಿರಿ" ಎಂಬ ಕೋರಿಕೆಯನ್ನಿಡಲು, ಮಹಾರಾಜರು ತಾವು ಕೊಟ್ಟ ಮಾತಿನಂತೆ ನಡೆದುಕೊಳ್ಳ ಬೇಕಾದ್ದರಿಂದ ಮಾಧವಿಯ ಕೋರಿಕೆಗೆ ಒಪ್ಪಿಗೆ ನೀಡಿದರು. ಮಾಧವಿ ಮಹಾರಾಜರ ಸ್ವಾರ್ಥ, ಅಹಂಕಾರ, ರಾಜಕಾರಣ, ಪ್ರಭುತ್ವ, ಕೀರ್ತಿ, ಖ್ಯಾತಿ ಹೀಗೆ ಎಲ್ಲ.... ಎಲ್ಲದರ ಮೇಲೆಯೂ ದಿಗ್ವಿಜಯ ಸಾಧಿಸಿದ್ದಳು. ಮಾಧವಿ ತನ್ನ ದೊಡ್ಡವ್ವೆಯರಾದ ದೇವಿದೇವಯಾನಿ, ಶರ್ಮಿಷ್ಠಾದೇವಿ ಮತ್ತು ಅಣ್ಣ ಪುರುವಿನ ಬಳಿಯಲ್ಲಿ ಅವಳ ನಾಲ್ಕು ವರ್ಷಗಳಿಂದ ಮಡುಗಟ್ಟಿದ ಭಾವನೆಗಳು ಬೇಸಿಗೆಯಲ್ಲಿನ ಹಿಮಾಲಯದಂತೆ ಕರಗಿ

ಭೋರ್ಗರೆಯುತ್ತಾ ಹರಿಯತೊಡಗಿದ್ದವು. ಮುಂದೆ ಮಾಧವಿ ಹಳ್ಳಿಗೆ ಹೊರಡಲು ಸಿದ್ಧಳಾಗಿ ತನ್ನ ದೊಡ್ಡವ್ವೆಯರು ಅಣ್ಣನನ್ನು ತಾನೇ ಸಮಾಧಾನಪಡಿಸಿ ಹಳ್ಳಿಗೆ ರಥದಲ್ಲಿ ಹೊರಟಳು.

ಮಾಧವಿ ರಥದ ಪರದೆಯನ್ನು ಸರಿಸಿ ಬಾಗಿ ನೋಡಿದ್ದಳು. ಆಕಾಶವನ್ನು ಸಂಜೆಗೆಂಪು ಆವರಿಸಿಕೊಂಡಿತ್ತು. ವಿವಿಧ ಬಗೆಯ ಸಂಗೀತ ಹೊರಡಿಸುತ್ತಾ ಹಕ್ಕಿಗಳು ತಮ್ಮ ತಮ್ಮ ಗೂಡು ಸೇರಿಕೊಳ್ಳುವ ಧಾವಂತದಲ್ಲಿದ್ದವು. ಮಾಧವಿಗೂ ತನ್ನ ಗೂಡು ಸೇರಿಕೊಳ್ಳುವ ಧಾವಂತವಿತ್ತು. ಮಾಧವಿ ಕುಳಿತಿದ್ದ ರಥ ಮನೆಯ ಮುಂದೆ ನಿಂತಾಗ ಮಬ್ಬುಗತ್ತಲು ಇಡೀ ಭೂಮಿಯನ್ನು ಆವರಿಸಿತ್ತು. ಎಲ್ಲ ಮನೆಗಳಲ್ಲೂ ದೀಪ ಹಚ್ಚಲ್ಪಟ್ಟಿದ್ದವು. ಮಾಧವಿಯ ಮನೆಯಲ್ಲಿ ದೀಪ ಹೊತ್ತಿಸಿರಲಿಲ್ಲ ಕತ್ತಲಾದ ಮನೆಯೊಳಗೆ ಮಾಧವಿ ಅಡಿ ಇಡುತ್ತಾ ಅವಳ ಒಡಲಿನಿಂದ ನರ–ನರವೂ ಹುರಿಗೊಂಡು 'ಅವ್ವೆ' ಎಂಬ ಪದ ಹೊರಟಿತ್ತು. ಮೂಲೆಯೊಂದರಲ್ಲಿ ಕುಳಿತಿದ್ದ ಲಕ್ಷ್ಮಿ ಧಡಕ್ಕನೆ ಎದ್ದಿದ್ದಳು. ನಾಲ್ಕು ಯುಗಗಳು ಕಳೆದರೂ ಮರೆಯಲಾಗದ ಧ್ವನಿ, ಅವಳನ್ನು ಸಾವಿನಿಂದ ಬದುಕಿನತ್ತ ಸೆಳೆದುಕೊಂಡ ಧ್ವನಿ. ಲಕ್ಷ್ಮಿ 'ಮಾಧವಿ' ಎಂದು ಕರೆದಾಗ ಧ್ವನಿ ಬಂದತ್ತ ಓಡಿದ್ದ ಮಾಧವಿ ಅವ್ವೆಯನ್ನು ಬಿಗಿದಪ್ಪಿದಳು. ಮಾಧವಿ ಹಿಂತಿರುಗಿದ್ದು ಲಕ್ಷ್ಮಿಗೆ ಅಗಾಧ ಸಂತಸ ತಂದಿತ್ತು. ಮಾಧವಿ ಮನೆಯಲ್ಲಿ ದೀಪಗಳು ಬೆಳಗತೊಡಗಿದ್ದವು. ಪರಸ್ಪರ ಇಬ್ಬರೂ ಅಳುತ್ತಿದ್ದರು. ಮಾಧವಿ ಅಳು ನಿಲ್ಲಿಸಿ 'ಅಳದಿರು ಅವ್ವೆ, ಇನ್ನೆಂದೂ ನಾನು ನಿನ್ನನ್ನು ಬಿಟ್ಟು ಎಲ್ಲಿಯೂ ಹೋಗುವುದಿಲ್ಲ. ನಾನೀಗ ಸ್ವತಂತ್ರಳಿದ್ದೇನೆ" ಎಂದಿದ್ದಳು.

ಲಕ್ಷ್ಮಿ ಮಾಧವಿಯನ್ನು ದೀಪದ ಬೆಳಕಿನಲ್ಲಿ ದಿಟ್ಟಿಸಿನೋಡಲು, ನಾಲ್ಕು ವರ್ಷದ ಹಿಂದಿನ ಮಾಧವಿ ಮೋಡದ ಮರೆಯ ಚಂದ್ರನಂತೆ ಎಲ್ಲಿಯೋ ಕಳೆದು–ಹೋಗಿದ್ದಾಳೆನ್ನಿಸಿತ್ತು. ಕಣ್ಣುಸುತ್ತಿನ ಕಪ್ಪು ಉಂಗುರಗಳು, ಬದಲಾದ ದೇಹದ ಆಕಾರವನ್ನು ನೋಡಿ ಲಕ್ಷ್ಮಿ ಅತ್ತೆ ಪಾರ್ವತಿಯರಿಬ್ಬರೂ ಏನಾಯಿತೆಂದು ಪ್ರಶ್ನಿಸಲು, ಮುಚ್ಚಿಟ್ಟುಕೊಳ್ಳಬಯಸಿದ್ದ ಮಾಧವಿಯ ಮಾತುಗಳು ಮೌನವಾಗಿ ಹೊರಬರ–ತೊಡಗಿದ್ದವು. ಮಾಧವಿ ತನ್ನ ನಾಲ್ಕು ವರ್ಷಗಳ ದಾರುಣ ಕಥೆಯನ್ನು, ಹೆಪ್ಪಿಟ್ಟ ವೇದನೆಯನ್ನು, ಕನಸುಗಳು ಸುಟ್ಟು ಕರುಕಲಾದ ಬದುಕಿನ ವ್ಯವಸ್ಥೆಯನ್ನು ಹೇಳುತ್ತಾ ಹೋಗಿದ್ದಳು. ಮಾಧವಿಯ ಮಾತು ಮುಗಿದಾಗ ಬೆಳಗಾಗಿತ್ತು. ಲಕ್ಷ್ಮಿ ದಿಕ್ಕುಗೆಟ್ಟು ಮಗುವಿನಂತೆಯೇ ಮಗಳ ಕಥೆ ಕೇಳಿದ್ದಳು. ಮಗಳ ನಾಳಿನ ಭವಿಷ್ಯವನ್ನು ನೆನೆದುಕೊಂಡರೆ ದುಃಖ, ಆಕ್ರೋಶಗಳೆರಡೂ ಏಕಕಾಲಕ್ಕೆ ಮೂಡಿ ನಿಲ್ಲುತ್ತಿದ್ದವು.

ಪಾರ್ವತಿಗೆ ಮಾಧವಿಯ ಬಗೆಗೆ ಎಷ್ಟೇ ಪ್ರೀತಿ, ಸಹಾನುಭೂತಿ, ಮರುಕ ವಾತ್ಸಲ್ಯಗಳಿದ್ದರೂ ಮಾಧವಿ ಮರಳಿ ಬಂದ ಸ್ಥಿತಿಯಲ್ಲಿ ಅವಳನ್ನು ಸೊಸೆಯೆಂದು, ಆದಿಮನ ಮಡದಿಯೆಂದು ಒಪ್ಪಿಕೊಳ್ಳಲು ಅವಳಿಗೆ ಸಾಧ್ಯವಿರಲಿಲ್ಲ.

ಮಾಧವಿ ತನ್ನ ಮನೆಗೆ ಬಂದು ಹದಿನೈದು ದಿನಗಳಾದರೂ ಆದಿಮ ಅವಳನ್ನು ನೊಡಲು ಬಂದಿದ್ದಿಲ್ಲ. ಆದರೆ ಮಾಧವಿಗೆ ಅವನನ್ನು ಒಮ್ಮೆ ನೋಡಬೇಕೆನಿಸಿದ್ದಿತು. 'ದೇಹಮೂಲವಾದ ಪ್ರಜ್ಞೆ'ಯ ಮಾಧವಿ ಕೇಡನ್ನು ಎದುರಿಸುವಾಗ ಬಿಟ್ಟುಕೊಟ್ಟಿದ್ದಳು. ಆದರೆ ಆದಿಮನನ್ನು ಸಂಧಿಸಬೇಕೆಂದು ಆ ಪ್ರಜ್ಞೆ ಇವಳನ್ನು ಕಾಡುತ್ತಿದ್ದಿತು. ಹಾಗಾಗಿ ಮಾಧವಿ ಗಂಡು-ಹೆಣ್ಣಿನ ನಡುವೆ ನಿಸ್ವಾರ್ಥ ದೈಹಿಕ ಸಂಬಂಧವೇ ಸಾಧ್ಯವಿಲ್ಲವೇನೋ ಎಂದು ತಿಳಿದಿದ್ದಳು. ಇದರಿಂದ ಪ್ರೀತಿ, ಗೆಳೆತನ, ವಿಶ್ವಾಸ ತೋರುವ ಆದಿಮನನ್ನು ಯಾವ ದೈಹಿಕ ಬಂಧನದಲ್ಲೂ ಸಿಲುಕಿಸಲು ಇಚ್ಚಿಸಲಿಲ್ಲ, ಮಾಧವಿ.

ಆದಿಮ ಮಾಧವಿಯನ್ನು ಕುರಿತು "ನನ್ನ ಪ್ರೀತಿ ಒಂದಲ್ಲ ಒಂದು ದಿನ ನಿನ್ನನ್ನು ಮಣಿಸಬಹುದೆಂಬ ಆಸೆಯನ್ನು ಮಾತ್ರ ಬಿಟ್ಟುಕೊಡಲು ನಾನು ಸಿದ್ಧನಿಲ್ಲ" ಎಂಬ ಭರವಸೆಯ ಮಾತುಗಳನ್ನಾಡುತ್ತಾನೆ. ಈ ಮಾತುಗಳು ಮಾಧವಿಗೆ ಅಶಾಂತಿ-ಯನ್ನು ತಂದರೂ ಆಶಾಕಿರಣವೂ ಆಗುತ್ತದೆ. ಪ್ರಕೃತಿ, ಹಕ್ಕಿಗೂಡಿನ ವರ್ಣನೆ-ಯೊಂದಿಗೆ ಮುಂದಿನ ತಮ್ಮ ಹೊಸ ಜೀವನವನ್ನು ಸ್ವಾಗತಿಸುವ ಎಳೆಯ ಜೋಡಿಗಳ ಚಿತ್ರಣದೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಅಧ್ಯಾಯ – ೪

'ಮಾಧವಿ' ಮತ್ತು 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಒಂದು ತೌಲನಿಕ ನೋಟ

ಅನುಪಮಾ ನಿರಂಜನರ 'ಮಾಧವಿ' ಕಾದಂಬರಿಗಾಗಲಿ, ಡಾ.ಎಂ.ಎಸ್.ವೇದಾ ರವರ 'ಕಪ್ಪು ಕಿವಿಯ ಬೀಳಿಯ ಕುದುರೆಗಳು' ಕಾದಂಬರಿಗಾಗಲಿ ತೆಗೆದುಕೊಂಡಿರು ವಸ್ತು ಒಂದೇ, ಅದು 'ಮಹಾಭಾರತ'ದಲ್ಲಿ ಉಪಕತೆಯಾಗಿ ಬರುವ 'ಮಾಧವಿ ಕಥೆ' ಪುರಾಣದ ವಸ್ತುವನ್ನು ಸ್ತ್ರೀವಾದಿ ನೆಲೆಯಿಂದ ವಿಶ್ಲೇಷಿಸುವ ಕಾರ್ಯವನ್ನು ಈ ಎರಡೂ ಕಾದಂಬರಿಗಳು ಕೈಗೊಂಡಿದ್ದು, ಕಾದಂಬರಿಗಳೆರಡರ ವಸ್ತು ಒಂದೇ ಆದರೂ, ಅವುಗಳ ಸ್ವರೂಪದಲ್ಲಿ ಕೆಲವು ಭಿನ್ನತೆ, ಸಾಮ್ಯತೆಗಳಿರುವುದನ್ನು ಗಮನಿಸಬಹುದು.

ಅನುಪಮಾ ನಿರಂಜನರ ಪೌರಾಣಿಕ ಕಾದಂಬರಿಯಾದ 'ಮಾಧವಿ' ಕಾದಂಬರಿಯು ಮೂಲ ಮಹಾಭಾರತದ 'ಮಾಧವಿಕಥೆ'ಗೆ ಹೆಚ್ಚು ನಿಷ್ಠವಾದಂತೆ ಕಂಡುಬಂದರೂ, ಅಲ್ಲಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಿಕೊಂಡಿರುವುದು ಕಂಡುಬರುತ್ತದೆ. ಅನುಪಮಾರವರು ಮಾಧವಿಯನ್ನು ತಮ್ಮ ಕಾದಂಬರಿಯ ಕೇಂದ್ರಪಾತ್ರವಾಗಿಟ್ಟುಕೊಂಡು, ಆಕೆಯನ್ನು ಶೋಷಿತ ಸ್ತ್ರೀಯರ ಪ್ರತಿನಿಧಿಯಾಗಿ, ಬಂಡುಗಾರ್ತಿಯಾಗಿ, ಆದರ್ಶವ್ಯಕ್ತಿಯಾಗಿ ಚಿತ್ರಿಸಿದ್ದಾರೆ.

'ಮಹಾಭಾರತ' ಕತೆ ಸುಮಾರು ಕ್ರಿ.ಪೂ. ೧೦೦೦ರಲ್ಲಿ ನಡೆದಿರಬಹುದಾದ ದಾಯಾದಿಗಳ ಕಲಹ ಕುರಿತಾದದ್ದು. ಆದರೆ ಮಾಧವಿಯದು 'ಮಹಾಭಾರತ'ದಲ್ಲಿ ಬರುವ ಉಪಕತೆಯಾದುದರಿಂದ ಅದು ಕ್ರಿ.ಪೂ.೧೦೦೦ಕ್ಕೂ ಮೊದಲೇ ಘಟಿಸಿರಬೇಕು. ಜೊತೆಗೆ ಯಯಾತಿ ಕುರುವಂಶದ ಮೂಲಪುರುಷನಾಗಿದ್ದು, ಇವನಿಗೂ ಭೀಷ್ಮನಿಗೂ ಆರು ತಲೆಮಾರುಗಳ ಅಂತರವಿದೆ. 'ಮಾಧವಿ ಕತೆ' ಮಹಾಭಾರತದ ಘಟನೆಗಳಿಗಿಂತ ಸುಮಾರು ಮುರು ಶತಮಾನದ ಹಿಂದೆ ನಡೆದದ್ದು ಎಂದು ನಾವು ಊಹಿಸಬಹುದು ಎನ್ನುತ್ತಾರೆ ಅನುಪಮಾರವರು. ಹಾಗಾಗಿ ಅವರ 'ಮಾಧವಿ' ಕಾದಂಬರಿಯಲ್ಲಿ ಅಂದಿನ ಸಮಾಜದ ರೀತಿ-ನೀತಿಗಳನ್ನು ಸಮಾಜದ ವ್ಯವಸ್ಥೆಯಲ್ಲಿದ್ದ ಸ್ತ್ರೀಯರ ಸ್ಥಾನ-ಮಾನ, ಪ್ರಭುತ್ವದ ಅಧಿಕಾರ, ರಾಜರ ವೈಭೋಗ, ಮಾನವಸಹಜ ದೌರ್ಬಲ್ಯಗಳ ವಿವರಗಳಿರುವುದನ್ನೂ ಗುರುತಿಸಬಹುದು, ಜೊತೆಗೆ ಯುದ್ಧ ಮತ್ತು ಅದರ ಪರಿಣಾಮಗಳು, ಯಾಗಗಳ ವರ್ಣನೆಯನ್ನು ಕಾಣಬಹುದು.

ಮೂಲ 'ಮಹಾಭಾರತ'ದ ಕಾಲಕ್ಕಾಗಲೇ ಸ್ತ್ರೀಯು ಪುರುಷನ ಆಸ್ತಿ ಎಂಬ ಭಾವನೆ ಬಲವಾಗಿ ಬೇರೂರಿತ್ತು. ಊಳಿಗಮಾನ್ಯ ಸಮಾಜ ವ್ಯವಸ್ಥೆಯಲ್ಲಿ ಹೆಂಗಸನ್ನು ಕೊಳ್ಳುವುದು, ಮಾರುವುದು, ದಾನಮಾಡುವುದು ಸಾಧಾರಣ ಪದ್ಧತಿಯಾಗಿತ್ತು. ಗಂಡ ತನ್ನ ಹೆಂಡತಿಯನ್ನು ಮಾರಬಹುದಿತ್ತು. ದಾನ ಕೊಡಬಹುದಾಗಿತ್ತು. ಹಸುವಿನಂತೆ ಸ್ತ್ರೀಯ ವಿಕ್ರಮ ನಡೆಯುತ್ತಿತ್ತು. ಇದು ಮಗಳಿಗೂ ಅನ್ವಯವಾಗುತ್ತಿದ್ದ ನೀತಿಯಾದ್ದರಿಂದಲೇ 'ಮಾಧವಿ ಕಥೆ'ಯಲ್ಲಿ ಯಾಯಾತಿ ತನ್ನ ಮಗಳು ಮಾಧವಿಯನ್ನು ಅಷ್ಟು ಸುಲಭವಾಗಿ ದಾನವೀಯುತ್ತಾನೆ. ಹಾಗಾಗಿ ಗಾಲವ ಅವಳನ್ನು ರಾಜರಿಗೆ 'ಎರವಲು' ಕೊಟ್ಟು ತನ್ನ ಗುರುದಕ್ಷಿಣೆಗೆ ಬೇಕಾದದ್ದನ್ನು ದೊರಕಿಸಿಕೊಳ್ಳುತ್ತಾನೆ.

'ನಿಯೋಗ' ಪದ್ಧತಿ 'ಮಹಾಭಾರತ'ದ ಕಾಲದಲ್ಲಿ ರೂಢಿಯಲ್ಲಿತ್ತು. ನಿಯೋಗ ಎಂದರೆ ಹೆಂಡತಿಯನ್ನು 'ಭೂಮಿ'ಯನ್ನಾಗಿ ಮಾಡಿ ಬೇರೊಬ್ಬ ಪುರುಷನಿಂದ ಮಗನನ್ನು ಪಡೆಯುವುದು. ಕುಂತಿಗೆ ಮಕ್ಕಳಾದುದು ಹೀಗೆಯೇ. ಮಾಧವಿ ಕೂಡ ಮಕ್ಕಳನ್ನು ಪಡೆಯಲು 'ಭೂಮಿ'ಯಾಗಿ ಉಪಯೋಗಿಸಲ್ಪಟ್ಟಳು. ತಾವು ಅಬಲೆಯಾದ ಹೆಂಗಸನ್ನು ಹಿಂಸಿಸುತ್ತಿದ್ದೇವೆ ಎಂಬ ಭಾವನೆ ಪುರುಷರಿಗೆ ಬಂದಿರಲಿಲ್ಲ.

ಹೀಗೆ ಮಾಧವಿಯು ಮೂಲದಲ್ಲಿ ತನ್ನ ತಂದೆ ಯಯಾತಿಯಿಂದ ಗಾಲವನಿಗೆ ದಾನ ಕೊಡಲ್ಪಟ್ಟಾಗಲೀ, ದಾನ ಪಡೆದ ಗಾಲವನು ಗುರುದಕ್ಷಿಣೆಯ ಸಂಪಾದನೆಗಾಗಿ ಅವಳನ್ನು ವಿನಿಮಯ ಮಾಡುವಾಗಲೀ ಯಾವುದೇ ರೀತಿಯ ಪ್ರತಿಭಟನೆಯನ್ನು ವ್ಯಕ್ತಪಡಿಸಲಿಲ್ಲ. ಬದಲಾಗಿ ಗಾಲವನಿಗೆ ಸಲಹೆಯನ್ನು ನೀಡಲು ಮುಂದಾಗುತ್ತಾಳೆ. ಅಂದರೆ ಗಾಲವನು ಹರ್ಯಶ್ವನಿಗೆ ಕೇವಲ ಇನ್ನೂರು ಅಶ್ವಗಳಿಗೆ ಪ್ರತಿಯಾಗಿ ಮಾಧವಿಯನ್ನು ನೀಡಿದರೆ ಉಳಿದ ಅಶ್ವಗಳನ್ನು ಹೇಗೆ ಸಂಪಾದಿಸುವುದೆಂದು ಆಲೋಚಿಸುತ್ತಿದ್ದಾಗ, ಮಾಧವಿಯು ತನಗೆ ಬ್ರಹ್ಮವಾದಿಯೊಬ್ಬ **'ಪ್ರತಿಪ್ರಸವದ ಅಂತ್ಯದಲ್ಲಿಯೂ ನೀನು ಕನ್ಯೆಯಾಗಿಯೇ ಉಳಿಯುವೆ'** ಎಂಬ ಶ್ರೇಷ್ಠವಾದ ವರವನ್ನು ಕೊಟ್ಟಿದ್ದ ವಿಷಯವನ್ನು ಗಾಲವನಿಗೆ ತಿಳಿಸುತ್ತಾಳೆ. ಆದುದರಿಂದ ಎರಡು ನೂರು ಕುದುರೆಗಳನ್ನು ಪಡೆದುಕೊಂಡು ರಾಜನಿಗೆ ತನ್ನನ್ನು ಕೊಟ್ಟರೆ ರಾಜನ ಅಪೇಕ್ಷೆಯನ್ನು ಪೂರೈಸಿಕೊಟ್ಟು, ಪುನಃ ಬ್ರಹ್ಮವಾದಿಯ ವರದಂತೆ ಕನ್ಯಾವಸ್ಥೆ ಪಡೆದು, ಇದೇ ರೀತಿ ನಾಲ್ವರು ರಾಜರಿಂದ ಎಂಟು ನೂರು ಕುದುರೆಗಳನ್ನು ಕನ್ಯಾಶುಲ್ಕವಾಗಿ ಪಡೆಯಬಹುದಾಗಿದ್ದು ತನಗೂ ನಾಲ್ವರು ರಾಜರಿಂದ ನಾಲ್ವರು ಮಕ್ಕಳು ಹುಟ್ಟುತ್ತಾರೆ.

ಹಾಗೆಯೇ ತಮಗೂ ಗುರುದಕ್ಷಿಣೆಯಿಂದ ಮುಕ್ತಿ ದೊರೆಯುತ್ತದೆಂಬ ಸಲಹೆ ನೀಡುತ್ತಾಳೆ.

ಹಾಗಾಗಿ ಮೂಲದ ಮಾಧವಿಯಲ್ಲಿ ಯಾವುದೇ ರೀತಿಯ ಭಾವನಾತ್ಮಕ ಸಂಬಂಧಗಳಾಗಲಿ, ರಾಜ್ಯ ವ್ಯಾಮೋಹವಾಗಲಿ, ಪುತ್ರವಾತ್ಸಲ್ಯವಾಗಲಿ ವ್ಯಕ್ತವಾಗುವುದಿಲ್ಲ. ಜೊತೆಗೆ ಮಾಧವಿಯು ಬ್ರಹ್ಮವಾದಿಯಿಂದ ಆ ಶ್ರೇಷ್ಠವರನ್ನು ಪಡೆದಿದ್ದರಿಂದಲೇನೋ ಯಯಾತಿಯು ತನ್ನ ಸ್ವಾರ್ಥಕ್ಕಾಗಿ ಮಗಳನ್ನು ದಾನವಾಗಿ ಕೊಟ್ಟುದಕ್ಕಾಗಲಿ, ಗಾಲವನು ಅವಳನ್ನು ದಾನವಾಗಿ ಸ್ವೀಕರಿಸಿದುದಕ್ಕಾಗಲಿ, ಇಬ್ಬರೂ ಮಾಧವಿಯ ಬಗೆಗೆ ಪಶ್ಚಾತ್ತಾಪ ಪಡದಿರುವುದನ್ನು ಕಾಣಬಹುದು. ಆದರೆ ಯಯಾತಿಯು ಮಾಧವಿಗೆ ಸ್ವಯಂವರದ ಮೂಲಕ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಲು, ಅವಳು ತನಗಿಷ್ಟವಾದ ವನರಾಜನನ್ನು ಪತಿಯಾಗಿ ಸ್ವೀಕರಿಸಿ ವನವನ್ನು ಸೇರಿ ತಪಸ್ಸನ್ನಾಚರಿಸುವಲ್ಲಿ ತನ್ನ ತಂದೆ, ಗಾಲವ, ರಾಜರುಗಳ ಸ್ವಾರ್ಥದ ಬಂಧನದಿಂದ ಮುಕ್ತಳಾಗುತ್ತಾಳೆ. ಹೀಗೆ ಮೂಲದಲ್ಲಿ ಎಲ್ಲಿಯೂ ಪ್ರತಿಭಟಿಸದ ಮಾಧವಿಯು ತನ್ನ ತಂದೆ ಯಯಾತಿ 'ಏರ್ಪಡಿಸಿದ ಸ್ವಯಂವರದ ವರರನ್ನು ಧಿಕ್ಕರಿಸಿ ತನಗಿಷ್ಟ ಬಂದವನನ್ನು ಆರಿಸಿಕೊಳ್ಳುವ ಮೂಲಕ ಕೊಂಚ ಪ್ರತಿಭಟನೆ ವ್ಯಕ್ತಪಡಿಸಿರುವುದನ್ನು ಕಾಣಬಹುದು.

ಆದರೆ **ಅನುಪಮಾರವರ 'ಮಾಧವಿ'** ಕಾದಂಬರಿಯಲ್ಲಿ ಚಿತ್ರಿಸಿರುವ ಮಾಧವಿಯು ರಾಜಕುಮಾರಿಯೇ, ಯಯಾತಿ ರಾಜನ ಮಗಳೇ ಆಗಿದ್ದರೂ ಯಾವುದೇ ಬ್ರಹ್ಮವಾದಿಯಿಂದ ಶ್ರೇಷ್ಠವರವನ್ನು ಪಡೆದವಳಲ್ಲ. ಹಾಗಾಗಿ ಇಲ್ಲಿ ಮಾಧವಿ ರಾಜಕುಮಾರಿಯಾಗಿ ಹುಟ್ಟಿದ್ದರೂ ಸಾಮಾನ್ಯ ಸ್ತ್ರೀಯಂತೆ ಕಷ್ಟ-ನಷ್ಟಗಳನ್ನು ಅನುಭವಿಸಿದವಳು. ಹುಟ್ಟುತ್ತಲೇ ತಾಯಿಯನ್ನು ಕಳೆದುಕೊಂಡು, **ಮಲತಾಯಿ** ದೇವಯಾನಿಯ ನಿಂದನೆಗೆ ಒಳಗಾದವಳು. ಹಾಗೆಯೇ ವೃದ್ಧದಾಸಿಯೊಬ್ಬಳ ಹಾರೈಕೆಯಿಂದ ನಿಜವಾದ **ಅವ್ವೆಯ ಪ್ರೀತಿಯನ್ನು**, ಸಖಿ ಚಾರುನೇತ್ರೆಯಿಂದ ಪ್ರೀತಿಯ **ಸ್ನೇಹವನ್ನು** ಪಡೆದಿದ್ದವಳು. ಜೊತೆಗೆ ದೇವಯಾನಿ ಮತ್ತು ಶರ್ಮಿಷ್ಠೆಯರ ನಡುವಿನ **ಸವತಿ ಮತ್ಸರವನ್ನು** ಕಣ್ಣಾರೆ ಕಂಡಿದ್ದಳು.

ಭಿಕ್ಷಾರ್ಥಿಯಾಗಿ ಬಂದ ಗಾಲವನನ್ನು ಹಿಂದೆ ಕಳುಹಿಸುವುದು ಕ್ಷತ್ರಿಯ ಧರ್ಮವಲ್ಲವೆಂದು ತಿಳಿದ ಯಯಾತಿಯು ಧರ್ಮಸಂಕಟಕ್ಕೆ ಒಳಗಾಗಿ ತನ್ನ ಮಗಳನ್ನೇ ದಾನ ನೀಡಲು ಮುಂದಾಗುತ್ತಾನೆ. ಅಪಾರ ಸೌಂದರ್ಯವತಿಯಾದ ಮಾಧವಿಯನ್ನು ಯಾರಾದರೂ ಪುಣ್ಯಾತ್ಮರಾಜನಿಗೆ ಕೊಟ್ಟು, ನಿಮ್ಮ ಗುರುದಕ್ಷಿಣೆಗೆ ಬೇಕಾದ ಅಶ್ವಗಳನ್ನು

ಕನ್ಯಾಶುಲ್ಕ ರೂಪದಲ್ಲಿ ದೊರಕಿಸಿಕೊಳ್ಳುವಂತೆ ಹೇಳಿ ಮಾಧವಿಯನ್ನು ಗಾಲವನಿಗೆ ದಾನ ನೀಡುವ ಮೂಲಕ ಇಲ್ಲಿ ಯಯಾತಿ ತನ್ನ **ಪ್ರಭುತ್ವದ ಅಧಿಕಾರ**ವನ್ನು ಮಗಳ ಮೇಲೆ ಹೇರುತ್ತಾನೆ. ಹಾಗೆಯೇ ಗಾಲವ ಆಕೆಯನ್ನು ದಾನ ಪಡೆದು ಗುರುದಕ್ಷಿಣೆಯನ್ನು ಸಂಪಾದಿಸುವ ಮೂಲಕ ಆಕೆಯ ಮೇಲೆ ಅಧಿಕಾರ ಸ್ಥಾಪಿಸಿದರೆ, ಮಾಧವಿಯನ್ನು ತಲಾ ಎರಡು ನೂರು ಅಶ್ವಗಳಿಗೆ ದಾನ ಪಡೆಯುವ ಮೂಲಕ ಮೂವರು ರಾಜರೂ ಒಬ್ಬ ರಾಜರ್ಷಿಯೂ ಆಕೆಯ ಮೇಲೆ ಅಧಿಕಾರ ಚಲಾಯಿಸುವುದನ್ನು ಕಾಣಬಹುದು. ಹೀಗೆ ಮಾಧವಿ ಪುರುಷರ ದಬ್ಬಾಳಿಕೆ, ಕ್ರೌರ್ಯಕ್ಕೆ ತುತ್ತಾಗಿದ್ದಳು.

ವೇದಪಾರಂಗತರಾದ ಋಷಿಗಳೂ ಮಾನವ ಸಹಜ ದೌರ್ಬಲ್ಯದಿಂದ ದೂರವಾಗಿರಲಿಲ್ಲ. ಗುರುದಕ್ಷಿಣೆಯನ್ನು ನೀಡಲೇಬೇಕೆಂಬ ಗಾಲವನ **ಹಠ,** ವಿಶ್ವಾಮಿತ್ರನಲ್ಲಿ **ಕೋಪ**ವನ್ನುಂಟುಮಾಡುತ್ತದೆ. ಈ ಕೋಪದ ಪರಿಣಾಮದಿಂದಲೇ ವಿಶ್ವಾಮಿತ್ರನು ವಿಚಿತ್ರವಾದ, ಅಪರೂಪದ 'ಮೈಯೆಲ್ಲಾ ಬೆಳ್ಳಗಿರುವ ಒಂದು ಕಿವಿ ಮಾತ್ರ ಕಪ್ಪಾಗಿರುವ ಎಂಟುನೂರು ಕುದುರೆ'ಗಳನ್ನು ಗುರುದಕ್ಷಿಣೆಯಾಗಿ ಕೇಳುತ್ತಾನೆ. ಇದು ಗಾಲವನಿಂದ ಅಸಾಧ್ಯವೆಂದು ತಿಳಿದು, ಅವನ ಹಠವನ್ನು ಹತ್ತಿಕ್ಕುವ ಇಚ್ಛೆಯಿಂದ ವಿಶ್ವಾಮಿತ್ರ ಈ ಬೇಡಿಕೆಯನ್ನಿಡುತ್ತಾನೆ. ಆದರೆ ಈ ಇಬ್ಬರು ಋಷಿಗಳ ಹಠ ಕೋಪಕ್ಕೆ ತುತ್ತಾದವಳು ಮಾತ್ರ ಮಾಧವಿ, ಅವಳ ಬದುಕು.

ಆದ್ದರಿಂದ ಋಷಿಗಳ ಬೋಧನೆಗೂ ಆಚರಣೆಗೂ ಬಹಳ ಅಂತರವಿದ್ದುದನ್ನು ಇಲ್ಲಿ ಗಮನಿಸಬಹುದು. ಹೀಗೆ ಧರ್ಮ, ಆತ್ಮಗಳ ಬಗ್ಗೆ ಭಾರೀ ಜಿಜ್ಞಾಸೆ ನಡೆಸುವಂತಹ ಮುನಿಗಳು ಮಾಧವಿಯ ಸಂಕಟವನ್ನು ಅರ್ಥಮಾಡಿಕೊಳ್ಳಲಿಲ್ಲ ಎನ್ನುವುದು ಶೋಚನೀಯ ವಿಚಾರವಾಗಿ ಕಂಡುಬರುತ್ತದೆ. ಯಜುರ್ವೇದ ಪಂಡಿತನಿಗೆ ಗುರುದಕ್ಷಿಣೆ ಸಲ್ಲಿಸುವುದು ಮುಖ್ಯವಾಗಿತ್ತೇ ವಿನಾ ಅದಕ್ಕಾಗಿ ಅನುಸರಿಸುವ ವಿಧಾನ ಮುಖ್ಯವಾಗಿರಲಿಲ್ಲ. ತನ್ನ ಸ್ವಾರ್ಥ ಮುಚ್ಚಿಕೊಳ್ಳಲು ತನ್ನ ಗುರುದಕ್ಷಿಣೆ ಸಲ್ಲಿಕೆಗೆ ಸಹಾಯಕಳಾದ ಮಾಧವಿಗೆ ಪರಲೋಕದಲ್ಲಿ ಸದ್ಗತಿ ಸಿಗುತ್ತದೆಂಬುದಾಗಿ ದೊಡ್ಡ ದೊಡ್ಡ ಮಾತನ್ನಾಡುವ ಗಾಲವನಂಥ **ಸ್ವಾರ್ಥಮುನಿ**ಯನ್ನು ಇಲ್ಲಿ ಗುರುತಿಸಬಹುದು. ಹಾಗಾಗಿ ತಂಗಿ, ಹೆಂಡತಿಯರನ್ನು, ಮಕ್ಕಳನ್ನು ತಮ್ಮ ಸ್ವಾರ್ಥಲಾಭಗಳಿಗೋಸ್ಕರ ಬಳಸಿಕೊಳ್ಳುವ ಇಂಥವರು **ಹೊಸ ಮುಖವಾಡ**ಗಳೊಂದಿಗೆ ಇಂದಿಗೂ ನಮ್ಮ ಸಮಾಜದಲ್ಲಿ ಕಂಡುಬರುವುದನ್ನು ಗುರುತಿಸಿದ್ದಾರೆ ಅನುಪಮಾರವರು.

ವಿಶ್ವಾಮಿತ್ರನ ಬಗ್ಗೆ ಪುರಾಣಗಳಲ್ಲಿ ಆದರ್ಶಕಲ್ಪನೆಗಳೇ ಹೆಚ್ಚು. ಆತ ಮಹಾಕ್ಷತ್ರಿಯ, ರಾಜರ್ಷಿ. ಆದರೆ ಮಾಧವಿಯನ್ನು ಗಾಲವ ತನ್ನಲ್ಲಿಗೆ ಕರೆದುತಂದಾಗ ಆತ ಆಡುವ ಮಾತುಗಳು ಹೀಗಿವೆ: "ಎಂಟುನೂರು ಕುದುರೆಗಳಿಗೆ ಬದಲಾಗಿ 'ಈ ಮಾಧವಿಯನ್ನೇ ಸ್ವೀಕರಿಸಿ' ಎಂದು ಹೇಳಿ ಇವಳನ್ನು ನನ್ನಲ್ಲಿ ತಂದುಬಿಟ್ಟಿದ್ದರೆ ಎಷ್ಟು ಚೆನ್ನಾಗಿತ್ತು! ನಾನೇ ಇವಳನ್ನು ಭೋಗಿಸಿ ಜಗತ್ತಿಗೆ ಶ್ರೇಷ್ಠರಾದ ನಾಲ್ಕುಮಂದಿ ಪುತ್ರರನ್ನು ಪಡೆಯುತ್ತಿದ್ದೆ". ಈ ಮಾತುಗಳನ್ನಾಡಿದವನು ಅರಿಷಡ್ವರ್ಗಗಳನ್ನು ಜಯಿಸಿದವನು ಎಂದು ಖ್ಯಾತಿಪಡೆದ ವಿಶ್ವಾಮಿತ್ರ. ಆ ವೇಳೆಗೆ ಸಾಕಷ್ಟು ವೃದ್ಧನಾಗಿದ್ದ ಅವನಲ್ಲಿ ಮಾಧವಿ ಮೋಹಗೊಳ್ಳುವುದಾದರೂ ಎಂತು? ಇಂತಹವರ ಬಗ್ಗೆ ಆಕೆಗೆ ತಿರಸ್ಕಾರ, ಹೇಸಿಗೆ ಉದ್ಭವಿಸುವುದರಲ್ಲಿ ಯಾವ ಸಂಶಯವೂ ಇರಲಿಲ್ಲ.

ಹರ್ಯಶ್ವ, ಉಶೀನರ, ದಿವೋದಾಸನಂತಹ ರಾಜರ ವರ್ತನೆ, ನಡತೆಯನ್ನು ಕಂಡಾಗ ಮಾನವೀಯತೆಯನ್ನೇ ಮರೆತು ಇವರು ವರ್ತಿಸುತ್ತಿರುವರೋ ಎಂಬ ಸಂಶಯ ಬರುತ್ತದೆ. ಇವರೆಲ್ಲರೂ ಮಾಧವಿಯ ರೂಪವನ್ನು ಕಂಡು **ಮೋಹಗೊಂಡು ಕಾಮಾಕಾಂಕ್ಷೆ**ಯಿಂದ ತಮ್ಮ ಬಳಿಯಿದ್ದ ಆ ವಿಚಿತ್ರ ಲಕ್ಷಣಗಳುಳ್ಳ ಕುದುರೆಗಳನ್ನು ಮಾತ್ರವಲ್ಲದೇ, ಸಕಲ ಸಂಪತ್ತನ್ನು ಕೊಡಲು ಬಯಸಿದ್ದವರು. ಆದರೆ ಮೂಲ 'ಮಾಧವಿ ಕಥೆ'ಯಲ್ಲಿ ಪುತ್ರಾಕಾಂಕ್ಷೆಯಿಂದಲೇ ರಾಜರು ಮಾಧವಿಯನ್ನು ಪರಿಗ್ರಹಿಸಿದ್ದರು. ಅನುಪಮಾರವರ 'ಮಾಧವಿ'ಯಲ್ಲಿ ಕಂಡುಬರುವ ರಾಜರು ಮೋಹ, ಕಾಮ, ಪ್ರೇಮಗಳಿಗೆ ಮಾತ್ರ ಬೆಲೆಕಟ್ಟುವಂತಹವರು. ಕನ್ಯಾಶುಲ್ಕವನ್ನು ಕೊಟ್ಟು ಕನ್ಯೆಯನ್ನು ಕೊಂಡುಕೊಳ್ಳತಕ್ಕವರು. ಜೊತೆಗೆ ಇವರು ತಮ್ಮ ಕೆಲಸವಾದ ಮೇಲೆ ಆಕೆಯನ್ನು ಅಷ್ಟೇ ನಿರಾಸಕ್ತಿಯಿಂದ ಧರ್ಮದ ಹೆಸರಿನಲ್ಲಿ ಹೊರಹಾಕಲೂ ಹೇಸದಂಥವರಾಗಿದ್ದರು. ಇಂಥವರು ಅಂದಿನ ಉದಾತ್ತರು, ಶೂರರು, ಆದರ್ಶಪುರುಷರು!.

ಈ ನಾಲ್ಕೂ ಜನ ರಾಜರಲ್ಲಿ ಒಬ್ಬನಾದರೂ ಮಾಧವಿಯ ಬಗ್ಗೆ ಅನುಕಂಪದಿಂದ ವರ್ತಿಸಲಿಲ್ಲ. ಇದರಿಂದ ಅಂದಿನ ಸಮಾಜದಲ್ಲಿ ಹೆಣ್ಣಿನ ಬಗೆಗಿದ್ದ ನಿಕೃಷ್ಟ ಭಾವನೆಯು ಸ್ಪಷ್ಟವಾಗುತ್ತದೆ. ಹರ್ಯಶ್ವರಾಜನು ಮಾಧವಿಯಲ್ಲಿ ಮೋಹಗೊಂಡು ಕೇವಲ ಎರಡುನೂರ ಅಶ್ವಗಳನ್ನು ಕನ್ಯಾಶುಲ್ಕವಾಗಿ ನೀಡಿ ಆಕೆಯಿಂದ ಕಾಮಸುಖ ಸವಿದು ಪುತ್ರಸಂತಾನವನ್ನು ಪಡೆದುದಲ್ಲದೇ, ಉಳಿದ ಕುದುರೆಗಳನ್ನು ಸಂಪಾದಿಸಲು ಮಾಧವಿಯನ್ನು ಇನ್ನೊಬ್ಬ ರಾಜನಿಗೊಪ್ಪಿಸುವ ಸಲಹೆಯನ್ನೂ ನೀಡುತ್ತಾನೆ. ಪುತ್ರಸಂತಾನದ ನಂತರ ಆಕೆಗೂ ತನಗೂ ಸಂಬಂಧವಿಲ್ಲವೆಂಬಂತೆ

ಮಾಧವಿಯನ್ನು ಕಳುಹಿಸಿಕೊಟ್ಟಿದ್ದಂಥವನು. ಇನ್ನು ದಿವೋದಾಸನೋ ಪರನಾರೀ ಸಹೋದರನೆಂಬುದಾಗಿ ಪಾಣಿಗ್ರಹಣವೆಂಬ ಮುಖವಾಡ ಧರಿಸಿ ಮಾಧವಿಯಿಂದ ಸುಖ, ಪುತ್ರಸಂತಾನವೊಂದನ್ನು ಪಡೆದಿದ್ದನು. ಆದರೆ ಉಶೀನರನಂತೂ ತನಗಿಬ್ಬರು ಮಕ್ಕಳಿದ್ದರೂ ಮಾಧವಿಯಿಂದಲೂ ಕಾಮಸುಖ ಅನುಭವಿಸಿ, ಪುತ್ರನನ್ನು ಪಡೆದು ಯಾವುದೇ ಸಂಬಂಧವಿಲ್ಲವೆಂಬಂತೆ ಗಾಲವನೊಂದಿಗೆ ಕಳುಹಿಸಿಕೊಟ್ಟನು. ಹೀಗೆ ಪ್ರತಿಯೊಬ್ಬ ರಾಜನೂ ಮನುಷ್ಯತ್ವ ಕಳೆದುಕೊಂಡವರಂತೆ ವರ್ತಿಸಿದ್ದವರು.

ಮಾಧವಿ ರಾಜಕುಮಾರಿಯಾಗಿ ಅರಮನೆಯಲ್ಲಿ ಸುಕೋಮಲೆಯಾಗಿ ಬೆಳೆದಿದ್ದವಳು. ತನ್ನನ್ನು ಗಾಲವನಿಗೆ ದಾನಕೊಟ್ಟಿರುವ ವಿಚಾರ ತಿಳಿದಾಗ ತಿರಸ್ಕಾರದಿಂದ ಪ್ರತಿಭಟಿಸುವ ಧನಿಯನ್ನು ಎತ್ತಿದಳಾದರೂ ಯಯಾತಿಯ ಪ್ರಭುತ್ವ ಅಧಿಕಾರವು ಅವಳನ್ನು ಅಸಹಾಯಕಳನ್ನಾಗಿಸಿತ್ತು. ಗಾಲವನೊಂದಿಗೆ ಹೊರಟ ಮಾಧವಿಯು ಕಾಡಿನಲ್ಲಿ ನಡೆಯುವಾಗ ಕಲ್ಲು, ಮುಳ್ಳುಗಳಿಂದ ನೋವನ್ನನುಭವಿಸಿ, ಕ್ರೂರಮೃಗಗಳನ್ನು ಕಂಡು ಭಯಗೊಂಡು ಆಯಾಸದಿಂದಾಗಿ ತಾನಿನ್ನು ನಡೆಯಲಾರೆನೆಂದು ಪ್ರತಿಭಟಿಸಬೇಕೆಂದುಕೊಂಡವಳು; ಜೊತೆಗೆ ಆ ರಾಜರುಗಳ ಅರಮನೆಯ ರಾಣಿಯರ ನಿಂದನೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುವ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಳು.

ಮಾಧವಿ ಮುಗ್ಧೆಯಾಗಿಯೂ ಕಂಡುಬರುತ್ತಾಳೆ. ಅಂದರೆ ಇಲ್ಲಿ ಮಾಧವಿ ತನ್ನನ್ನು ಗಾಲವನು ಹರ್ಯಶ್ವನಿಗೇ ಸಂಪೂರ್ಣವಾಗಿ ಒಪ್ಪಿಸಿ ಕನ್ಯಾಶುಲ್ಕವಾಗಿ ಎಂಟುನೂರು ಕುದುರೆಗಳನ್ನೂ ಪಡೆದಿದ್ದಾನೆಂದುಕೊಂಡಿದ್ದಳು. ಆದರೆ ಗಾಲವನು ಕೇವಲ ಎರಡು ನೂರು ಕುದುರೆಗಳಿಗೆ ಪ್ರತಿಯಾಗಿ, ತನ್ನಿಂದ ಒಂದು ಪುತ್ರಸಂತಾನ ಪಡೆಯುವ ಒಂದು ವರ್ಷದ ಅವಧಿಗೆ ಮಾತ್ರ ತನ್ನನ್ನು ಹರ್ಯಶ್ವನಿಗೆ ನೀಡಿದ್ದಾಗಲೀ ಉಳಿದ ಕುದುರೆಗಳನ್ನು ಪಡೆಯಲು ಮತ್ತೊಬ್ಬ ರಾಜನ ಬಳಿ ಕರೆದೊಯ್ಯುವ ವಿಚಾರವಾಗಲೀ ಆಕೆಗೆ ತಿಳಿದಿರಲಿಲ್ಲ. ಅದು ತಿಳಿದದ್ದು ಗಾಲವ ಆಕೆಯನ್ನು ಕರದುಕೊಂಡುಹೋಗಲು ಬರುವ ವಿಚಾರವನ್ನು ಹರ್ಯಶ್ವನು ಹೇಳಿದಾಗ ಅವಳಿಗೆ ಗೊತ್ತಾದದ್ದು. ಹೀಗೆ ಗುರುದಕ್ಷಿಣೆಯ ಸಂಪಾದನೆಗೋಸ್ಕರ ತನ್ನನ್ನೇ ಮುಡಿಪಾಗಿಟ್ಟಿದ್ದ ಮಾಧವಿಗೇ ಅವಳನ್ನು ದಾನ ನೀಡಿದ್ದರ ವಿಧಾನ, ಒಪ್ಪಂದವಾಗಲೀ ತಿಳಿಯದಿದ್ದದ್ದು ವಿಷಾದವೇ ಸರಿ.

ವಿಶ್ವಾಮಿತ್ರನ ಶಿಷ್ಯರುಗಳಲ್ಲಿದ್ದ **ವೈರುಧ್ಯಗಳನ್ನು** ಇಲ್ಲಿ ಗುರುತಿಸಬಹುದು. ವಿಶ್ವಾಮಿತ್ರನಿಗೆ ಗಾಲವನಂಥ ಹಠಮಾರಿ ಶಿಷ್ಯನೂ ಇದ್ದನು. ವಿಶ್ವಾಮಿತ್ರನ ಬೋಧನೆಯನ್ನು ಏನೊಂದೂ ಅರ್ಥಮಾಡಿಕೊಳ್ಳಲಾಗದಂತಹ ಸುಪರ್ಣ ಮತ್ತು ಮನುಸ್ವತರಂಥ ಶಿಷ್ಯರೂ ಇದ್ದರು. ಹಾಗೆಯೇ ಸ್ವರ್ಗ ನರಕಗಳಂತಹ ಹಳೆಯ ನಂಬಿಕೆಗಳನ್ನು ಧಿಕ್ಕರಿಸುವ ಯದುವಿನಂಥ ಶಿಷ್ಯನೂ ಇದ್ದನು. ಮಾಧವಿಗೆ ಯದು, ಪುರುವೆಂಬ ಸಹೋದರರಿದ್ದು, ತನ್ನ ಸಹೋದರನ ಹೆಸರನ್ನೇ ಹೊಂದಿರುವ ವಿಶ್ವಾಮಿತ್ರನ ಶಿಷ್ಯನಾದ ಯದುವಿನ ಮೇಲೆ ಆಕೆಗೆ **ವಾತ್ಸಲ್ಯ**ವಿತ್ತು, ಮೆಚ್ಚುಗೆಯೂ ಇತ್ತು. ಯದುವಿಗೆ ಹಾವು ಕಚ್ಚಿ ಅಕಾಲ ಮರಣವನ್ನಪ್ಪಿದಾಗ ಮಾಧವಿ ಗೊಳೋ ಎಂದು ಅತ್ತಿದ್ದಂತಹ **ಸೂಕ್ಷ್ಮ ಹೃದಯ** ಅವಳದು.

ಮಾತೃಹೃದಯಿ ಮಾಧವಿಯನ್ನು ಇಲ್ಲಿ ಕಾಣಬಹುದು. ಮಾಧವಿಯು ನಾಲ್ವರ ಬಳಿ ನಾಲ್ವರು ಮಕ್ಕಳನ್ನು ಬಿಟ್ಟು ಬಂದಾಗಲೂ ಅವಳ ಮಾತೃವಾತ್ಸಲ್ಯ ಅವಳನ್ನು ಕಾಡದೇ ಇರಲಿಲ್ಲ. ಮಕ್ಕಳನ್ನು ಬಿಟ್ಟು ಬಂದಾಗ ಎಷ್ಟೋ ಸಾರಿ ಎದೆಯಲ್ಲಿ ಮಗುವಿಗೆ ಕುಡಿಸದೇ ಉಳಿದುಕೊಂಡಿದ್ದ ಹಾಲು ಎದೆತುಂಬಿ ಬಂದು ವೇದನೆಯನ್ನು ಅನುಭವಿಸಿದ್ದಳು. ಮಾನಸಿಕವಾಗಿಯೂ ಅಸ್ವಸ್ಥಗೊಂಡಿದ್ದಳು. ದಾಸಿಯರ ಮಕ್ಕಳು ಅಳುತ್ತಿರುವುದನ್ನು ಕೇಳಿದಾಗ ತನ್ನ ಮಗುವೇ ಅಳುತ್ತಿದೆಯೇನೋ ಎಂದು ಗಾಬರಿಯಾಗುತ್ತಿದ್ದಳು. ಕೆಲವೊಮ್ಮೆ ತಾನು ಹೆತ್ತ ಮಗುವನ್ನು ತಾನೇ ಸಾಕಿಕೊಳ್ಳಲು ಬಯಸಿದಳಾದರೂ, ಅದು ಅಸಾಧ್ಯವಾದುದೆಂದು ನೆನೆದು ಸುಮ್ಮನಾಗುತ್ತಿದ್ದಳು.

ಮಾಧವಿಯ ದುಃಸ್ಥಿತಿಯನ್ನು ಕಂಡು ಮಾಧವಿಯನ್ನು ಸಲಹಿದ ವೃದ್ಧದಾಸಿಯಾದ ಅವ್ವೆ, ಚಾರುನೇತ್ರೆ, ದಾಸಿ ಕನಕಾಂಬರಿ, ಋಷಿಪತ್ನಿಯರನ್ನು ಬಿಟ್ಟರೆ, ಉಳಿದವರ್‍ಯಾರು ಮರುಕ ವ್ಯಕ್ತಪಡಿಸಿದವರಲ್ಲ. ಮೂಲದಲ್ಲಿ ಗರುಡನು ಗಾಲವನಿಗೆ ಗುರುದಕ್ಷಿಣೆ ಸಂಪಾದಿಸುವ ದಾರಿಯನ್ನು ಸೂಚಿಸುತ್ತಾನೆ. ಇಲ್ಲಿ ಗರುತ್ಮಂತರೆಂಬ ಮುನಿಯು ಗಾಲವನಿಗೆ ಯಯಾತಿ ಬಳಿ ಹೋಗುವಂತೆ ಮಾರ್ಗದರ್ಶನ ನೀಡುವುದನ್ನು ಕಾಣಬಹುದು.

ಪ್ರೀತಿಯ ರಾಜಕುಮಾರನ **ಕನಸನ್ನು** ಕಟ್ಟಿದ್ದವಳು ಮಾಧವಿ. ಅವಳನ್ನು ದಾನ ನೀಡಲ್ಪಟ್ಟಿದ್ದರಿಂದ ಅವಳ ಕನಸು ನುಚ್ಚುನೂರಾಗಲು, "ದೇವರೇ ಮುಂದಿನ ಜನ್ಮದಲ್ಲಾದ್ರೂ ನಾನು ಪ್ರೀತಿಸಿದೋನನ್ನು ಮದುವೆಯಾಗೋ ಭಾಗ್ಯ ಕೊಡು!" ಎಂದು ಬೇಡಿದ್ದಳು. ತನಗೊದಗಿದ ದುಃಸ್ಥಿತಿಯಿಂದಾಗಿ ವೈವಾಹಿಕ ಜೀವನದ ಬಗ್ಗೆ ಜುಗುಪ್ಸೆ

ಹೊಂದಿದ್ದ ಮಾಧವಿಯ ಮಮಕಾರವೂ ಹರಿದು ಹಂಚಿಹೋಗಿತ್ತು. ಈ ಬದುಕಿನಲ್ಲಿ ಏನೂ ಬೇಡವೆನಿಸಿ, ಒಂಟಿಯಾಗಿ ಯಾರಿಗೂ ಕಾಣದ ಹಾಗೆ ಇದ್ದುಬಿಡಬೇಕೆಂಬ ಬಯಕೆ ಅದಮ್ಯವಾಗಿತ್ತು. ಹಾಗಾಗಿ ಮಾಧವಿ ತನ್ನ ತಂದೆಯು ಏರ್ಪಡಿಸಿದ ಸ್ವಯಂವರವನ್ನು ಧಿಕ್ಕರಿಸಿ ಕಾಡಿಗೆ ಹೊರಟುಹೋಗುವುದನ್ನು ಕಾಣಬಹುದು.

ಯಯಾತಿ ಮಹಾರಾಜನು ಯಾವ ತಂದೆಯೂ ಮಾಡಬಾರದಂತಹ ಕೆಲಸ ಮಾಡಿದ ಪಾಪಕ್ಕೆ ಗುರಿಯಾಗಿದ್ದನು. ಧರ್ಮಕ್ಕೆ ಕಟ್ಟುಬಿದ್ದು ಮಾಧವಿಯನ್ನು ದಾನ ಮಾಡಿದರೂ, ಗಾಲವನು ಅವಳನ್ನು ಯಾರಾದರೊಬ್ಬ ಪುಣ್ಯವಂತ ರಾಜನಿಗೆ ಕೊಟ್ಟು ಕನ್ಯಾಶುಲ್ಕ ರೂಪದಲ್ಲಿ ಗುರುದಕ್ಷಿಣೆಗೆ ಬೇಕಾದ ಅಶ್ವಗಳನ್ನು ಪಡೆದುಕೊಳ್ಳಲು ಮಾತ್ರ ಹೇಳಿದ್ದನು. ಆದರೆ ಗಾಲವನು ಮಾಧವಿಯನ್ನು ನಾಲ್ವರಿಗೆ ಮಾರಿ ಕನ್ಯಾಶುಲ್ಕವಾಗಿ ಅಶ್ವಗಳನ್ನು ಪಡೆದು ಅವಳ ಬದುಕನ್ನೇ ಹಾಳು ಮಾಡಿದ್ದನ್ನು ಕೇಳಿದ ಯಯಾತಿಯು ಕೋಪದಿಂದ ಗಾಲವರ ಮೇಲೆ ಕೂಗಾಡುತ್ತಾನೆ, ತನ್ನ ತಪ್ಪಿನ ಬಗ್ಗೆಯೂ ಅರಿವಾಗಿ ಸುಮ್ಮನಾಗುತ್ತಾನೆ. ಯಯಾತಿ ತನ್ನ ಮೇಲೆ ಬರಬಹುದಾದ ಪಾಪ ಪರಿಹಾರಕ್ಕೆ ಮಾಧವಿಯ ಸ್ವಯಂವರದ ಯೋಜನೆ ಹಾಕುತ್ತಾನೆ. ಆದರೆ ತನ್ನೆಲ್ಲ ದುಃಖಕ್ಕೂ ಮೂಲ ಕಾರಣನಾದ ತಂದೆಯನ್ನು ಕ್ಷಮಿಸಿ, ಅವರೆಲ್ಲರಿಂದ ದೂರಸಾಗುವ ಮಾಧವಿ ಇಡೀ ಪುರುಷಕುಲವನ್ನೇ ಮನ್ನಿಸಿ, ತನ್ನ ಔದಾರ್ಯದಿಂದಾಗಿ ಎಲ್ಲರಿಗಿಂತ ದೊಡ್ಡ ಜೀವವಾಗಿ ಶೋಭಿಸುತ್ತಾಳೆ.

ಮಾಧವಿಯ ಭಾವನೆಗಳು ಪ್ರತಿಕ್ರಿಯೆಗಳು, ಎಲ್ಲಾ ಕಾಲದ ಸ್ತ್ರೀಯರೂ ತೋರಿಸುವಂಥವು. ತಂದೆ ಯಯಾತಿ ಹಸುಕರುಗಳನ್ನು ದಾನಮಾಡುವ ಹಾಗೆ ಮಾಧವಿಯನ್ನು ದಾನವಾಗಿ ಕೊಡುತ್ತಾನೆ. ಆದರೆ ತಾನು ಒಲ್ಲದ ಮುದಿರಾಜರ ಜೊತೆ ಅವಳು ಬಾಳ್ವೆ ಮಾಡಬೇಕಾಗಿ ಬಂದರೂ, ಆ ಜೀವನದ ಬಗ್ಗೆ ಹೇಸಿಗೆಯಾದರೂ ಅದರಿಂದ ಅವಳಿಗೆ ಬಿಡುಗಡೆಯಿರಲಿಲ್ಲ. ಕೊನೆಯಲ್ಲಿ ಯಯಾತಿ ಸ್ವಯಂವರವನ್ನು ಏರ್ಪಡಿಸಿ ನಿನಗಿಷ್ಟ ಬಂದವನನ್ನು ಆರಿಸಿಕೋ ಎಂಬ ಸ್ವಾತಂತ್ರ್ಯವನ್ನು ಕೊಟ್ಟಾಗ ಆ ಮಾತು ಅವಳಿಗೆ ಅರ್ಥಹೀನವಾಗಿ ಕಾಣುತ್ತದೆ. ಜೀವನದ ಬಗ್ಗೆ ಮನುಷ್ಯನ ದಬ್ಬಾಳಿಕೆಯ ಬಗ್ಗೆ ತೀವ್ರ ತಿರಸ್ಕಾರ ಮೂಡಿದ್ದ ಮಾಧವಿ ಅವರೆಲ್ಲರಿಂದ ದೂರ ಹೊರಟು ಹೋಗುತ್ತಾಳೆ. ಇದು ಮಾಧವಿಯ ಬಂಡಾಯವಾಗಿದ್ದು, ಈ ಸಮರದಲ್ಲಿ ವೈಯಕ್ತಿಕ ಗೆಲವು ಅವಳದಾಗಿದ್ದನ್ನು ಕಾಣುತ್ತೇವೆ.

ಹಾಗಾಗಿ ಅನುಪಮಾರವರು " ಈ ಉಪಭೂಖಂಡದಲ್ಲಿ ಸ್ತ್ರೀದಾಸ್ಯದ ವಿರುದ್ಧ ಮೊದಲು ಬಂಡೆದ್ದವಳು ಮಾಧವಿ"[೧] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮಾಧವಿಯಂಥ ಸ್ವಾತಂತ್ರ್ಯ ಬಯಸುವ ವ್ಯಕ್ತಿ ಎಲ್ಲ ಕಾಲದಲ್ಲೂ ಇರಬಹುದಾದ ಸ್ತ್ರೀ ಮಾತ್ರವಲ್ಲ, ಮಾಧವಿ ಎಲ್ಲ ಕಾಲದ ಶೋಷಿತ ಸ್ತ್ರೀಯರ ಪ್ರತಿನಿಧಿಯಾಗಬಲ್ಲವಳು. ಈ ಎಲ್ಲಾ ದೃಷ್ಟಿಯಿಂದಲೂ ಅನುಪಮಾರವರು ಮಾಧವಿಯನ್ನು ಬಿಟ್ಟು ಉಳಿದ ಯಾರನ್ನೂ ಆದರ್ಶವ್ಯಕ್ತಿಯನ್ನಾಗಿ ಚಿತ್ರಿಸಿಲ್ಲ. ಈ 'ಮಾಧವಿ' ಕಾದಂಬರಿಯಲ್ಲಿ ಬರುವ ಎಲ್ಲಾ ಪಾತ್ರಗಳು ಮಾನವರೇ, ಮಾನವರು ಮಾನವರಿಗೆ ಸಹಜವಾದ ದೌರ್ಬಲ್ಯಗಳನ್ನೂ ಜಟಿಲತೆಗಳನ್ನು ತುಂಬಿಕೊಂಡವರಾಗಿ ಚಿತ್ರಿಸಲ್ಪಟ್ಟಿದ್ದಾರೆ.

ಅನುಪಮಾರವರ 'ಮಾಧವಿ' ಕಾದಂಬರಿಯಲ್ಲಿ ಹರ್ಯಶ್ವನ ಅಯೋಧ್ಯ ನಗರದಲ್ಲಿ ನಡೆಯುವ ವಸಂತೋತ್ಸವದ ವರ್ಣನೆಯನ್ನು ಕಾಶೀನಗರದ ದಿವೋದಾಸನು ನಡೆಸುವ ಅಶ್ವಮೇಧಯಾಗ ಮತ್ತು ಪುತ್ರಕಾಮೇಷ್ಟಿಯಾಗದ ಚಿತ್ರಣವನ್ನು, ಭೋಜನಗರದ ಉಶೀನರನಿಗೂ – ಮಾಹೇಯ ರಾಜ ಮಾಹಿಷ್ಮತಿಗೂ ನಡೆದ ಯುದ್ಧದ ವಿವರಗಳನ್ನು ಕಾಣಬಹುದು. ಅನುಪಮಾರವರು ತಮ್ಮ ಕಾದಂಬರಿಯುದ್ದಕ್ಕೂ ಆಡುಭಾಷೆ ಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಓದುಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಡಾ.ಎಂ.ಎಸ್.ವೇದಾರವರು **'ಮಹಾಭಾರತ'**ದಲ್ಲಿ ಬರುವ ಮಾಧವಿಯ ಜೀವನ ಸಂದರ್ಭವನ್ನು ಎಂದೂ, ಯಾರೂ ಒಪ್ಪಿಕೊಳ್ಳಲಾಗದಂತಹ ಅಪಮೌಲ್ಯವುಳ್ಳದ್ದು ಎಂದು ಭಾವಿಸಿದ್ದು, ಮಾನವೀಯ ಮೌಲ್ಯಗಳನ್ನೇ ಒಳಗೊಳ್ಳದ ಮಾಧವಿಯ ದುರಂತ ಬದುಕನ್ನು ಕುರಿತು ವರ್ತಮಾನದ ಹಲವು ಒಳವಿವರಗಳೊಂದಿಗೆ ತಮ್ಮ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಹೀಗೆ ಚಿತ್ರಿಸುವಲ್ಲಿ ಮೂಲಕ್ಕಿಂತಲೂ ಅನುಪಮಾರವರ ಕಾದಂಬರಿಗಿಂತಲೂ ಹೆಚ್ಚಿನ ಪಾತ್ರಗಳಿಂದ ದುಡಿಸಿಕೊಂಡಿದ್ದಾರೆ. ಉದಾಹರಣೆಗೆ; ಮಾಧವಿಯ ಅವ್ವೆಯಾಗಿ ಲಕ್ಷ್ಮಿ, ತಾತ ಶರಭಯ್ಯ, ಅತ್ತೆ ಪಾರ್ವತಿ ಮತ್ತು ಆಕೆಯ ಅವ್ವೆ, ಮಾಧವಿಯ ಪ್ರೀತಿಯ ಹುಡುಗನಾಗಿ ಆದಿಮ, ಮಲ್ಲಿಕಾ ಮತ್ತು ಸೇವಂತಿ ಎಂಬ ದಾಸಿಯರ ಪಾತ್ರಗಳು. ಇವು 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕಾದಂಬರಿಯ ಇನ್ನಿತರ ಪಾತ್ರಗಳಾಗಿದ್ದು,

---

೧. ಅನುಪಮಾ ನಿರಂಜನ– 'ಮಾಧವಿ' ಪು. ೧೨.

ಮಾಧವಿಯ ದುರಂತದ ಬದುಕನ್ನು ಚಿತ್ರಿಸುವಲ್ಲಿ ಸಹಾಯಕವಾಗಿರುವುದನ್ನು ಗುರುತಿಸಬಹುದು.

ಅನುಪಮಾರವರ ಮಾಧವಿಯು ರಾಜಕುಮಾರಿಯಾಗಿ ಹುಟ್ಟಿದ್ದರೂ ಸಾಮಾನ್ಯ ಸ್ತ್ರೀಯಂತೆ ಕಷ್ಟ-ನಷ್ಟಗಳನ್ನು ಅನುಭವಿಸಿದವಳು, ಆದರೆ ವೇದಾರವರ ಮಾಧವಿಯು ಸಾಮಾನ್ಯದಾಸಿಯೊಬ್ಬಳಲ್ಲಿ ಮಗಳಾಗಿ ಹುಟ್ಟಿ ರಾಜಕುಮಾರಿಯೆಂದು ಗುರುತಿಸಲ್ಪಟ್ಟು ಶೋಷಣೆಗೆ ಗುರಿಯಾಗುವುದನ್ನು ಕಾಣಬಹುದು. ಇದರಿಂದ ಹೆಣ್ಣು ಎಲ್ಲಿ ಹುಟ್ಟಿದರೂ ಅವಳಿಗೆ ಹಿಂಸೆ ಶೋಷಣೆ ತಪ್ಪಿದ್ದಲ್ಲ ಎಂಬುದು ತಿಳಿದುಬರುತ್ತದೆ.

ಹಕ್ಕಿಗೂಡಿನ ಚಿತ್ರಣದೊಂದಿಗೆ ಆರಂಭವಾಗುವ ವೇದಾರವರ ಕಾದಂಬರಿ-ಯಲ್ಲಿ, ಮಾಧವಿಗೆ **ಹಕ್ಕಿಗೂಡಿನ ಕಲ್ಪನೆಯೇ** ಅವಳ ಬದುಕಿನ ಆದರ್ಶನವಾಗಿತ್ತು. ಅಂದರೆ, ಹಕ್ಕಿಯ ಬದುಕು! ನೆಲದ ಹಂಗಿಲ್ಲದಂತೆ, ಆಕಾಶವನ್ನು ಅಳೆಯುವ ಹಕ್ಕಿ! ಪ್ರೀತಿಗಾಗಿ ಮತ್ತೆ ನೆಲದ ಕಡೆಗೇ ಹಾರಿಬರುತ್ತದೆ. ಗೂಡು ಕಟ್ಟುತ್ತದೆ. ಸಂಸಾರ ಮಾಡುತ್ತದೆ. ಮೊಟ್ಟೆ ಇಡುತ್ತದೆ, ಕಾವುಕೊಟ್ಟು ಮರಿ ಮಾಡುತ್ತದೆ. ರೆಕ್ಕೆ ಬಂದ ಮರಿ ಹಕ್ಕಿಗಳು ಹಾರಿಬಿಟ್ಟಾಗ ಅವೂ ಮತ್ತೊಂದು ಗೂಡು ಕಟ್ಟುವ ಕಾರ್ಯದಲ್ಲಿ ನಿರತವಾಗುತ್ತವೆ. ಇಂಥ ಹಕ್ಕಿಗಳ ಸ್ವಾತಂತ್ರ್ಯದ ಬದುಕಿನ ಸುಂದರ ಚಿತ್ರಣವನ್ನು ತನ್ನ ಮನದಲ್ಲಿ ತುಂಬಿಕೊಂಡ ಮಾಧವಿಯ ಕನಸು ಅವಳ ಬದುಕಿನಲ್ಲಿ ಈಡೇರದೆ ಭಗ್ನವಾಗುತ್ತದೆ.

ಯಯಾತಿಯ ಅರಮನೆಯ ಊಳಿಗದವಳಾಗಿದ್ದ ಲಕ್ಷ್ಮಿಯು ಮಹಾರಾಣಿ ದೇವಯಾನಿದೇವಿಯ ಅಂತಃಪುರದ ಓರ್ವ ದಾಸಿ. ಲಕ್ಷ್ಮಿ ತನ್ನ ಓರಗೆಯವಳಾದ ಪಾರ್ವತಿಯಂತೆಯೇ ಗಂಡ, ಮಕ್ಕಳು, ಸಂಸಾರವನ್ನು ಬಯಸಿದ್ದಳಾದರೂ, ಪಾರ್ವತಿಯ ಗಂಡ ಯುದ್ಧದಲ್ಲಿ ಸಾವನ್ನಪ್ಪಲು ಅವಳು ತನ್ನ ಕನಸಿನ ಸಂಸಾರವನ್ನು ದೂರವಿರಿಸಿ ಊಳಿಗಕ್ಕೆ ಸೇರಿದ್ದವಳು. ಆದರೆ ಆಕಸ್ಮಿಕವಾಗಿ ಯಯಾತಿಯ ಕಾಮಾಕಾಂಕ್ಷೆಗೆ ಬಲಿಯಾಗಿ ಅತ್ಯಾಚಾರಕ್ಕೆ ಗುರಿಯಾಗಿದ್ದಳು. ಬದುಕಿನ ದುರಂತಕ್ಕೆ ಯಾವುದೇ ಹೊಣೆಯೂ ಇಲ್ಲದೆ ಸಂಪೂರ್ಣ ಆಹುತಿಯಾದ ಪಾಪದ ಹುಡುಗಿಯಾಗಿದ್ದಳು. ಮಾನಸಿಕ ಹಾಗೂ ದೈಹಿಕವಾಗಿ ಸಂಪೂರ್ಣವಾಗಿ ಜರ್ಜರಿತಳಾಗಿದ್ದ ಲಕ್ಷ್ಮಿಯ ಕತ್ತಲೆಯ ಬದುಕಿನಲ್ಲಿ ಒಂದು ಬೆಳ್ಳಿ ರೇಕು ಮೂಡಿದಂತೆ ಮಾಧವಿ ಹುಟ್ಟಿದ್ದಳು. ಹಾಗಾಗಿ ಲಕ್ಷ್ಮಿ ತಾನು ಬಯಸಿದ ಕನಸಿನ ಸಂಸಾರದ ಸುಖ ಸಿಗದಿದ್ದರೂ, ಆಕ್ರಮಣದಿಂದಲಾದರೂ ತಾಯ್ತನದ ಸುಖ ಸಿಕ್ಕಿದ್ದು ತಾನು

ಭಾಗ್ಯವಂತಳೆಂದುಕೊಂಡಳು. ಮುಂದೆ ತನ್ನ ಮಗಳು ಮಾಧವಿಗಾಗಿ ಜೀವಹಿಡಿದು ಬದುಕಿದ್ದಳು.

ಲಕ್ಷ್ಮಿಯಂತಹ ಸಾಮಾನ್ಯ ಹೆಣ್ಣುಮಕ್ಕಳು ಇಂದಿನ ಆಧುನಿಕ ಸಮಾಜದಲ್ಲಿ ಪುರುಷರ ದೌರ್ಜನ್ಯಕ್ಕೆ ಒಳಗಾಗಿದ್ದರೂ, ತಾಯ್ತನದ ತೃಪ್ತಿಯನ್ನು ಪಡೆದು ಮಕ್ಕಳಿಗಾಗಿ ಬದುಕುತ್ತಿರುವುದನ್ನು ಕಾಣಬಹುದು. ಅಲ್ಲದೇ ಇಲ್ಲಿ ಅತ್ಯಾಚಾರಕ್ಕೊಳಗಾದ ಲಕ್ಷ್ಮಿಗೆ ಯಯಾತಿ ರಾಜನ ಅನುಪಸ್ಥಿತಿಯಲ್ಲಿ ತುಕ್ಕುಹಿಡಿದ ಕಠಾರಿಯೊಂದಿಗೆ ವಿವಾಹ ಮಾಡಲಾಗುತ್ತದೆ. ಈ ವಿವಾಹ ಲಕ್ಷ್ಮಿ ಮೇಲೆ ನಡೆಸಿದ ಅತ್ಯಾಚಾರದ ಬೆತ್ತಲೆಯನ್ನು ಮುಚ್ಚಿ ಹಾಕಲು ರಾಜತ್ವದ ವ್ಯವಸ್ಥೆ ತೊಡಿಸಿದ ಒಂದು ಅಂಗಿಯಾಗಿ ಕಂಡುಬರುತ್ತದೆ. ಇತ್ತ ಲಕ್ಷ್ಮಿಯ ತಂದೆ ಶರಭಯ್ಯನು ಇದ್ದುದರಲ್ಲಿ ತೃಪ್ತಿಪಡದೆ ಅತಿಯಾಸೆ ಪಟ್ಟು ನಾಶವಾಗುತ್ತಾನೆ. ಅಂದರೆ ತನ್ನ ಮಗಳನ್ನು ಅತ್ಯಾಚಾರದ ಮೂಲಕ ಮಹಾರಾಜರು ಬಲಿದಿರುವುದೇ ಪುಣ್ಯವೆಂದು ತಿಳಿದು, ಲಕ್ಷ್ಮಿಗೆ ಅರಮನೆಯಲ್ಲಿ ಮಹಾರಾಣಿಯಪಟ್ಟವನ್ನು ಕೊಡಿಸುವ ಅಸಾಧ್ಯ ಸಾಹಸಕ್ಕೆ ಕೈಹಾಕಿ ಪ್ರಭುತ್ವದ ಕೆಂಗಣ್ಣಿಗೆ ಗುರಿಯಾಗಿ ಗುರುತೇ ಸಿಗದಹಾಗೆ ಮರಣಹೊಂದಿದ್ದನು. ಅತಿಯಾಸೆ ಗತಿಕೇಡಿನಂತಾಗಿತ್ತು ಶರಭಯ್ಯನ ಸ್ಥಿತಿ. ಇದರಿಂದ **ಪ್ರಭುತ್ವದ ತುಳಿತಕ್ಕೆ** ಸ್ತ್ರೀ-ಪುರುಷರೆಂಬ ಭೇದವಿಲ್ಲವೆಂಬಂತೆ ಶರಭಯ್ಯನೂ ಒಳಗಾಗಿದ್ದನ್ನು ಕಾಣಬಹುದು.

ಲಕ್ಷ್ಮಿ ತನ್ನ ಬದುಕಿನಲ್ಲಿ ನೋವುಂಡಿದ್ದರೂ, ತನ್ನ ಮಗಳು ಮಾಧವಿಯ ಭವಿಷ್ಯ ಸುಖವಾಗಲಿ ಎಂದು ಹರಸಿದವಳು. ಅವಳ ಸ್ವಾತಂತ್ರ್ಯವನ್ನು ಗೌರವಿಸಿದ್ದವಳು. ಆದ್ದರಿಂದಲೇ, "ಮಾಧವಿ ಅವಳ ಬದುಕನ್ನು ಅವಳು ಇಷ್ಟಬಂದಂತೆ ಅವಳೇ ಬದುಕಲಿ. ಅವಳ ಬದುಕಿನ ಮೇಲೆ ಅವಳಿಗೇ ಸಂಪೂರ್ಣ ಅಧಿಕಾರವಿರಲಿ" ಎಂದು ಆಶಿಸಿದವಳು. ಅಲ್ಲದೇ ಮಾಧವಿಯನ್ನು ಪ್ರೀತಿಸಿದ್ದ ಆದಿಮ ಕೂಡ ಮಾಧವಿಯ ಸ್ವಭಾವವನ್ನು ವ್ಯಾಖ್ಯಾನಿಸಿದ ರೀತಿ ಅಪೂರ್ವವಾಗಿದೆ, "ಮಾಧವಿಗೆ ಪ್ರೀತಿಯ ಸಂಬಂಧವೂ ಬೇಕು. ನಿರ್ಭೀತಿಯ ಸ್ವಾತಂತ್ರ್ಯವೂ ಬೇಕು ಎಂಬ ಆಸೆ ಇದೆಯೆಂದು ಕನಸು ಇದೆಯೆಂದು" ಆದಿಮನಿಗೆ ಅನಿಸುತ್ತದೆ.

ಯಯಾತಿಯು ತಮ್ಮಲ್ಲಿ ದೇಹಿ ಎಂದು ಬಂದ ಗಾಲವರನ್ನು ಮರಳಿ ಕಳುಹಿಸುವುದು ಧರ್ಮವಲ್ಲವೆಂದು ತಿಳಿದಿದ್ದನು. ಯಾವ ರಾಜರ ಬಳಿಯೂ ಹೋಗದೆ ಗಾಲವ ಋಷಿಯು ತನ್ನ ಬಳಿ ಬಂದಿರುವುದು ಯಯಾತಿಗೆ ಹೆಮ್ಮೆಯೆನಿಸಿದ್ದ ವಿಷಯವಾಗಿತ್ತು. ಆದ್ದರಿಂದ ತಮ್ಮ ಖ್ಯಾತಿಯ ಪ್ರತಿಪಾದನೆಗಾಗಿ

ತಕ್ಷಣದಲ್ಲಿ ಹೊಳೆದ ಒಂದು ಸಾಧನವಾಗಿ ಮಾತ್ರ ಮಾಧವಿ ಕಂಡುಬಂದಿದ್ದಳು. ತಮ್ಮ ಮಗಳೆಂದು ಗುರುತಾಗಿ ಯಾವುದೋ ಒಂದು ಪುಟ್ಟಹಳ್ಳಿಯಲ್ಲಿ ಬದುಕುತ್ತಿರುವ ಮಗಳ ಮೇಲೆ ತಮಗೆ ಸಂಪೂರ್ಣವಾಗಿ ಅಧಿಕಾರ ಇದೆಯೆಂದೇ ಅವರು ಭಾವಿಸಿದ್ದರು. ಅದೂ ರಾಣಿಯರಲ್ಲಿ ಹುಟ್ಟಿದ ಮಗಳಲ್ಲ! ದಾಸಿಯೋರ್ವಳಲ್ಲಿ ಹುಟ್ಟಿದ ಮಗಳು. ಮತ್ತೊಬ್ಬ ದಾಸಿ? ಆದರೆ ಮಾಧವಿ ತನ್ನ ತಂದೆಯೂ ಆಗಿರುವ ಮಹಾರಾಜರ ಸೇವೆಗೆ ಸಿದ್ಧಳಾಗಿರಲೇಬೇಕಿತ್ತು. ರಾಜಾಜ್ಞೆ ಎಂದಮೇಲಂತೂ ತೀರಿಯೇ ಹೋಯಿತು. ಹಾಗಾಗಿ ಮಾಧವಿ ರಾಜಾಜ್ಞೆಯಂತೆ ನಡೆದುಕೊಳ್ಳಬೇಕಿತ್ತು. ಇಲ್ಲವೇ ತಲೆಯನ್ನು ದಂಡವಾಗಿ ಒಪ್ಪಿಸಬೇಕಾದ ಸ್ಥಿತಿಗೆ ಒಳಗಾಗಿದ್ದಳು.

ಪ್ರಭುತ್ವದ ಅಧಿಕಾರ, ಶಕ್ತಿಗಳನ್ನು ಇಟ್ಟುಕೊಂಡು ಯಯಾತಿಯು ಮಾಧವಿಯನ್ನು ಅರಮನೆಗೆ ಕರೆತರಿಸಿದ್ದನು. ರಾಜಧಾನಿಗೆ ಬಂದ ಮಗಳೆನ್ನಿಸಿಕೊಂಡ ಮಾಧವಿಯ ರೂಪು ಸ್ವತಃ ಯಯಾತಿಯನ್ನೇ ದಂಗುಗೊಳಿಸಿತ್ತು. ಯಾವನೇ ಓರ್ವ ತಂದೆ ಅಭಿಮಾನಪಡಬೇಕಾದಂತಹ ಅಪರೂಪವಾದ ಸೌಂದರ್ಯ. ಆದರೆ ಯಯಾತಿ ಅವಳ ಸೌಂದರ್ಯವನ್ನು ತನ್ನ ಸ್ವಾರ್ಥಸಾಧನೆಗಾಗಿ ಬಳಸಿಕೊಂಡನು. ಹಾಗಾಗಿ ಇಲ್ಲಿ ಯಯಾತಿ ಪರಮಸ್ವಾರ್ಥಿಯಾಗಿ ಕಂಡುಬರುತ್ತಾನೆ. ಅಲ್ಲದೇ ಅವನದು **ಕಟುಕ ಪಿತೃಮನ**, ಅಕಾಲ ವೃದ್ಧಾಪ್ಯದ ಶಾಪಕ್ಕೆ ಒಳಗಾದಾಗಿದ್ದ ಯಯಾತಿ ತನ್ನ ಮಗ ಪುರುವಿನ ಯೌವ್ವನವನ್ನು ಪಡೆಯಲು ಹಿಂದುಮುಂದು ನೋಡದ ಕ್ರೂರ ತಂದೆಯಾಗಿ ವರ್ತಿಸಿದ್ದವನು.

ಯಯಾತಿಯು ತನ್ನ ಸ್ವಾರ್ಥ ಸಾಧನೆಗಾಗಿ ಮಾಧವಿಯನ್ನು ಗಾಲವನಿಗೆ ದಾನ ನೀಡಿದ ಪರಿಣಾಮವಾಗಿ ತನ್ನ ಬದುಕಿನ ಪತನವಾಗುತ್ತದೆ ಎಂಬುದರ ಅರಿವಿದ್ದ ಮಾಧವಿಯು, ದೊಡ್ಡವೆಯಾದ ದೇವಯಾನಿ, ಶರ್ಮಿಷ್ಠೆಯರಿಂದ ಸಿಕ್ಕ ಶಕ್ತಿಯನ್ನೂ ಬಳಸಿಕೊಂಡು ಕೊಂಚ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಳು. ತಂದೆ, ಮಹಾರಾಜರು ಎರಡೂ ಪಾತ್ರಗಳನ್ನು ಒಬ್ಬನೇ ವ್ಯಕ್ತಿಯಾಗಿ ಹೊಂದಿದ್ದ ಯಯಾತಿ ಮಹಾರಾಜನನ್ನು ಮಾಧವಿ ಕ್ಷುದ್ರಹುಳು ಎಂಬಂತೆ ಕಂಡಿದ್ದಳು. ತನ್ನ ಅಧಿಕಾರ, ಸ್ವಾರ್ಥಮಯ ವ್ಯಕ್ತಿತ್ವ, ಕ್ರೂರತನಗಳಿಂದ ಎಲ್ಲರನ್ನೂ ನಡುಗಿಸುವ ಯಯಾತಿಯು ಅವಳಿಗೆ ಓರ್ವ ಕ್ಷುಲ್ಲಕ ಜೀವಿಯಾಗಿಯೇ ಕಂಡುಬಂದಿದ್ದನು. ಆದರೆ ಯಯಾತಿಯು ಅದಾವುದನ್ನೂ ತೋರಗೊಡದಂತೆ ವರ್ತಿಸಿದ್ದನು. ಏಕೆಂದರೆ ಮೊದಲಿಗೆ ಅವನ ಕಾರ್ಯಸಾಧನೆ–ಯಾಗುವುದು ಮುಖ್ಯವಾಗಿತ್ತು.

'ಪುರುಷ ರಾಜಕಾರಣವು ಸೃಷ್ಟಿಸಿರುವ ಪುರಾಣದ ಹಲವಾರು ಮಿಥ್ಯೆಗಳನ್ನು ಈ ಕಾದಂಬರಿಯು ಒಡೆಯುವ ಕಾರ್ಯವನ್ನು ಮಾಡುತ್ತದೆ' ಎನ್ನುತ್ತಾರೆ. ಸಂವೇದನಾಶೀಲ ಬರಹಗಾರ್ತಿಯಾದ ಡಾ.ಎನ್.ಗಾಯತ್ರಿಯವರು. ಅನುಪಮಾರವರ ಕಾದಂಬರಿಯಲ್ಲಿ ಶರ್ಮಿಷ್ಠೆ ಮತ್ತು ದೇವಯಾನಿಯವರು ಪರಸ್ಪರ ದೂಷಿಸಲ್ಪಡುವ, ಕಚ್ಚಾಡುವ ಸವತಿಯರಾಗಿ ಚಿತ್ರಿತರಾಗಿದ್ದಾರೆ. ಆದರೆ ಈ ಕಾದಂಬರಿಯಲ್ಲಿ ಆರಂಭದಲ್ಲಿ ಕಚ್ಚಾಡುತ್ತಿದ್ದ ಸವತಿಯರು ಕೂಡಲೇ ತಮ್ಮ ಸಮಸ್ಯೆಯ ಮೂಲವನ್ನು ಅರಿತುಕೊಂಡು ಸಹೋದರಿಯರಾಗಿ ಮಾರ್ಪಡುವುದನ್ನು ಕಾಣಬಹುದು. ಹಠಮಾರಿ, ಅಹಂಕಾರಿ, ಪ್ರತೀಕಾರಿ, ದ್ವೇಷದ ಮೊಟ್ಟೆ, ಸ್ವಾರ್ಥದ ಗೂಡು ಏನೆಲ್ಲಾ ಆಗಿದ್ದ ಹಳೆಯ ದೇವಯಾನಿಯಾಗಲೀ, ತನ್ನ ಬದುಕಿನ ಎಲ್ಲ ದುರಂತಗಳಿಗೆ ಕಾರಣಳಾದಳೆಂದು ದೇವಯಾನಿಯನ್ನು ದ್ವೇಷಿಸುತ್ತಿದ್ದ ಶರ್ಮಿಷ್ಠೆಯಾಗಲೀ ಯಯಾತಿ ರಾಜನ ಸ್ವಾರ್ಥಲಾಲಸೆಯ ಮುಂದೆ ಒಂದಾಗುತ್ತಾರೆ. ಅಲ್ಲದೇ ಪುರು ಮತ್ತು ಮಾಧವಿಯ ದುಃಖಕ್ಕೆ ಸಮಾನವಾಗಿ ಪ್ರತಿಕ್ರಿಯಿಸುವ ತಾಯಿಯರಾಗಿ ಕಂಡುಬರುತ್ತಾರೆ. ಅಲ್ಲದೇ ಉಶೀನರ ಮಹಾರಾಜನ ಹೆಂಡತಿಯರೂ ಕೂಡ ತಮ್ಮ ಮಾವನ ಕಾಟವನ್ನು ತಡೆಯಲು ತಮ್ಮ ಈರ್ಷ್ಯೆ ಮರೆತು ಒಂದಾಗುತ್ತಾರೆ. ಹೀಗೆ ಇಲ್ಲಿನ ಹೆಣ್ಣುಗಳು ತಾವೆಲ್ಲರೂ ಸಮಾನವಾಗಿ ಅನುಭವಿಸುವ ನೋವು, ತುಳಿತಕ್ಕೊಳಗಾದವರೆಂಬ ಸಮಾನ ಭಾವನೆ ಮೂಡಿ, ಎಲ್ಲರೂ ಒಂದುಗೂಡುವುದನ್ನು ಗುರುತಿಸಬಹುದು. ಹಾಗಾಗಿ ಆಧುನಿಕ ಸ್ತ್ರೀವಾದಿ ಪ್ರಜ್ಞೆಯ ಪ್ರಮುಖ ಅಂಶಗಳಲ್ಲೊಂದಾದ **ಸಹೋದರಿತ್ವ** ಭಾವನೆಯು ಈ ಕಾದಂಬರಿಯಲ್ಲಿ ಪ್ರಕಟವಾಗಿರುವುದು ಕಂಡುಬರುತ್ತದೆ.

ಕನ್ಯಾಶುಲ್ಕಕ್ಕೆ ಪ್ರತಿಯಾಗಿ ಪುತ್ರಸಂತಾನವೊಂದನ್ನು ನಿಗಧಿತ ಅವಧಿಯಲ್ಲಿ ಹೆತ್ತುಕೊಡುವಲ್ಲಿ ದಾನ ನೀಡಲ್ಪಡುವ ಮಾಧವಿಯು, ಇಂದಿನ ಮಾರುಕಟ್ಟೆ ಸಂಸ್ಕೃತಿಯಲ್ಲಿ ಮೌಲ್ಯವಾಗಿ ಕಾಣಿಸಿಕೊಂಡಿರುವ **'ಬಾಡಿಗೆ ತಾಯಿ'**ಯ ಕಲ್ಪನೆಯನ್ನು ಮೂಡಿಸುತ್ತಾಳೆ. ಇಲ್ಲಿ ಮಾಧವಿಗೆ ಬಾಡಿಗೆ ತಾಯಿಯಾಗುವುದು ವೈಯಕ್ತಿಕ ಆಯ್ಕೆಯಾಗಿರಲಿಲ್ಲ. ಬದಲಾಗಿ ಪ್ರಭುತ್ವದ ಅಧಿಕಾರಶಾಹಿಯ ಕ್ರೌರ್ಯಕ್ಕೆ ಒಳಗಾದ ಮಾಧವಿಯು ಮದುವೆಯಾಗದೆ ಬಾಡಿಗೆ ತಾಯಿಯಾಗಬೇಕಾದ ಒತ್ತಾಯಕ್ಕೆ ತುತ್ತಾಗಿದ್ದಳು. ಇದಕ್ಕೆ ಇಲ್ಲಿ ಧರ್ಮದ ಅಂಗೀಕಾರವೂ ಇತ್ತು, ಪ್ರಭುತ್ವದ ಮುದ್ರೆಯೂ ಇದ್ದುದನ್ನು ಗುರುತಿಸಬಹುದು.

ಯಯಾತಿ ಮಹಾರಾಜನು ಮಾಧವಿಯನ್ನು ಗಾಲವರಿಗೆ ದಾನ ಮಾಡುವಾಗ ಅವಳು 'ಫಲವತ್ತಾದ ಭೂಮಿ' ಯೆಂದು ನುಡಿದಿದ್ದನು. ಹಾಗಾಗಿ ಈ

ಮಾತುಗಳನ್ನಾಡಿದ ಯಯಾತಿಯು ಹಸು, ಎಮ್ಮೆಗಳನ್ನು ಮಾರಾಟ ಮಾಡುವ ವ್ಯಾಪಾರಿಯಂತೆ ಮಾಧವಿಗೆ ಕಂಡುಬರುತ್ತಾನೆ.

ಒಬ್ಬ ಹೆಣ್ಣಿನ ತಾಯ್ತನವನ್ನು, ಅವಳ ಭೂಮಿಯಂತ ಈ ಫಲವತ್ತತೆಯನ್ನು ಕುರಿತು ಪ್ರಚಾರ ಮಾಡುವ ಯಯಾತಿಯಂತಹ ಸ್ವಾರ್ಥಪರವಾದ ಗಂಡಸರನ್ನು ಇಲ್ಲಿ ಕಾಣಬಹುದು. ದಿವೋದಾಸ ಮಹಾರಾಜನ ಮಹಾರಾಣಿಯಾದ ಐಶ್ವರ್ಯಾದೇವಿ-ಯೊಂದಿಗೆ ಮಾಧವಿಯಾಡುವ ಮಾತುಗಳು ಹೆಣ್ಣಿನ ಅಸಲಿ ಒಳಧ್ವನಿಗಳಂತೆ ಕಂಡುಬರುತ್ತವೆ. "... ಹೆರುವುದೇನು? ಎಲ್ಲಾ ಹೆಣ್ಣುಮಕ್ಕಳು ಮಾಡಬಹುದಾದ ಕಾರ್ಯವೇ! ನಿಮ್ಮ ಹಾಗೆ ಹಾಡುವುದಕ್ಕೆ, ನೃತ್ಯಮಾಡುವುದಕ್ಕೆ ಕನಿಷ್ಠ ಪಕ್ಷ ಮಾತನಾಡುವುದಕ್ಕೂ ನನಗೆಲ್ಲಿ ಶಕ್ತಿ ಇದೆ" ಎಂದು ಮಾಧವಿಯಾಡುವ ಮಾತಿನ ಮೂಲಕ ಹೆಣ್ಣಿನ ಫಲವಂತಿಕೆಯನ್ನು ತಾಯ್ತನವೊಂದರಿಂದಲೇ ಗುರುತಿಸದೇ, ಅದರ ವಿವಿಧ ರೂಪಗಳನ್ನು ಅರ್ಥೈಸುವ, ವಿಸ್ತರಿಸುವ ಮನೋಧರ್ಮವೇ ಈ ಕಾದಂಬರಿಯ ಮುಖ್ಯ ಆಶಯವಾಗಿದೆ.

ದೇಹವು ನಿರ್ವಹಿಸಬೇಕಾದ ಕಾರ್ಯಕ್ಕಾಗಿಯೇ ದಾನ ಕೊಡಲ್ಪಟ್ಟವಳು ಮಾಧವಿ. ಆದರೆ ಅವಳು ಈ ಸಂದರ್ಭದಲ್ಲಿ ತನ್ನನ್ನು ಸಂತೈಸಿಕೊಳ್ಳುವಾಗ 'ದೇಹ'ದ ಬಗೆಗಿನ ಜಿಜ್ಞಾಸೆಯನ್ನು ಹುಟ್ಟುಹಾಕುತ್ತಾಳೆ. ತನ್ನ ದೇಹಮೂಲವಾದ ಪ್ರಜ್ಞೆಯನ್ನು ಅಳಿಸಿಕೊಂಡು ಬಿಡುತ್ತೇನೆ. ತನ್ನ ಮನಸ್ಸು ಮಾತ್ರ ತನ್ನದೇ ಎಂಬ ಮನೋಮೂಲ-ಪ್ರಜ್ಞೆಯನ್ನು ಇಟ್ಟುಕೊಂಡಿದ್ದ ಮಾಧವಿಗೆ, ಬಾಡಿಗೆ ತಾಯಿಯಾಗುವಾಗ ಕಾಡದಿದ್ದ ಈ ದೇಹಮೂಲವಾದ ಪ್ರಜ್ಞೆಯು, ತನ್ನನ್ನು ಪ್ರೀತಿಸುವ ಆದಿಮನನ್ನು ಸಂಧಿಸಬೇಕೆಂದಾಗ ಕಾಡುತ್ತದೆ. ಹಾಗಾಗಿ ಇಂತಹ ದೇಹ ಮತ್ತು ಮನಸ್ಸುಗಳ ಅಂತರ್‌ಸಂಬಂಧ ಇಂದಿಗೂ **ಬೆಲೆವೆಣ್ಣಾಗಿ** ಬಾಳಬೇಕಾದ ಹೆಣ್ಣುಮಕ್ಕಳ ಸಮಸ್ಯೆಯಾಗಿರಬಹುದೆಂಬುದನ್ನು ಗುರುತಿಸಬಹುದು.

ಈ ಕಾದಂಬರಿಯಲ್ಲಿ ಸ್ವಾರ್ಥತುಂಬಿದ **ಗುರುಶಿಷ್ಯರ** ವರ್ಣನೆಯನ್ನೂ ಕಾಣಬಹುದು. ಇಲ್ಲಿ ವಿಶ್ವಾಮಿತ್ರನು ತನ್ನ ಗುರುತನದ ಪ್ರತಿಷ್ಠೆಯನ್ನು ಸಾಧಿಸು-ವುದಕ್ಕಾಗಿ ಯಾರಿಗೂ ಪ್ರಯೋಜನಕ್ಕೆ ಬಾರದ 'ಎಂಟುನೂರು ಕಪ್ಪು ಕಿವಿಯ ಬಿಳಿಯ ಕುದುರೆಗಳ'ನ್ನು ಗುರುದಕ್ಷಿಣೆಯಾಗಿ ಕೇಳುವ ಮೂಲಕ ಮಾಧವಿಯ ಬದುಕನ್ನು ದುರಂತಕ್ಕೊಳಪಡಿಸುವುದನ್ನು ಕಾಣಬಹುದು. ಹೀಗೆ ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ವಿಶ್ವಾಮಿತ್ರನಂತಹ ಗುರುವು, ಮಾಧವಿಯಂತಹ ಅಮಾಯಕ ಹೆಣ್ಣಿನ

ಬದುಕನ್ನು ಬೆಳಕಿನಿಂದ ಕತ್ತಲೆಗೆ ಒಳಪಡಿಸಿದ್ದು ಆತನ ಗುರುತನಕ್ಕೆ ಅವಮಾನಕರವಾದದ್ದು. ಇನ್ನು ಗಾಲವನೋ ಗುರುವನ್ನು ಮೀರಿಸಿದ ಶಿಷ್ಯನೆಂಬಂತೆ ತಾನು ಗುರುದಕ್ಷಿಣೆ ಸಲ್ಲಿಸುವಲ್ಲಿ ಮಾಧವಿಯ ಜೀವನವನ್ನೇ ಛಿದ್ರಗೊಳಿಸಿದ್ದನು.

'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕಾದಂಬರಿಯಲ್ಲಿ ಪ್ರಮುಖವಾಗಿ **ಗಂಡು-ಹೆಣ್ಣಿನ** ಸಂಬಂಧಗಳಲ್ಲಿರುವ **ವೈರುಧ್ಯಗಳನ್ನು** ಗಮನಿಸಬಹುದು. ಸಂಬಂಧವನ್ನು ಪೋಷಿಸದ ಯಯಾತಿ ಮಾಧವಿಯನ್ನು ದಾನ ಮಾಡಲು ಮುಂದಾಗುವುದು, ಸಂಬಂಧವೇ ಇಲ್ಲದ ಗಾಲವ ಋಷಿಯು ಅವಳನ್ನು ದಾನವಾಗಿ ಸ್ವೀಕರಿಸುವುದು, ಸಂಬಂಧವೇ ಇಲ್ಲದ ನಾಲ್ವರು ಹರ್ಯಶ್ವ, ದಿವೋದಾಸ, ಉಶೀನರ, ವಿಶ್ವಾಮಿತ್ರರು ಕೇವಲ ನಾಲ್ಕು ಕಾಲಿನ ಸೃಷ್ಟಿಯಲ್ಲಿ ಏನೋ ವೈಚಿತ್ರ್ಯ ಹೊಂದಿದ ಒಂದಷ್ಟು ಕುದುರೆಗಳಿಗೆ ವಿನಿಮಯ ಮಾಡಿಕೊಂಡು ಅವಳನ್ನು ಅನುಭೋಗಿಸುವುದು ಎಂದೂ, ಎಲ್ಲಿಯೂ ನಡೆಯದ, ಒಪ್ಪದ ಸಂಗತಿಗಳೇ ಆಗಿವೆ ಎಂದರೆ ತಪ್ಪಾಗಲಾರದು. ಆದರೆ ಮಾಧವಿಯ ಮಾತಿನಲ್ಲಿಯೇ ಹೇಳುವುದಾದರೆ ಈ ಪುರುಷರ ದೌರ್ಜನ್ಯವು ಯಾವ ಸಮಾಜವೂ ಯಾವ ಹೆಣ್ಣುಗಳೂ ಒಪ್ಪದ ಅಮಾನುಷವಾದ ಕ್ರೌರ್ಯವೇ ಆಗಿದೆ. ಅದು ಮಾಧವಿಗೊದಗಿದ ರೌರವ ನರಕದರ್ಶನ.

ಮಾಧವಿಯು ಯಯಾತಿಯ ಮಗಳೆಂದು, ರಾಜಕುಮಾರಿಯೆಂದು ಗುರುತಾದ ಮರುಕ್ಷಣದಲ್ಲಿಯೇ ದಾಸಿಯಾಗಿಬಿಟ್ಟಿದ್ದಳು. ಅದೂ ನಿರ್ದಿಷ್ಟವಾಗಿ ದೈಹಿಕ ದಾಸ್ಯಕ್ಕೆ ಗುರಿಯಾಗಿದ್ದಳು. ಗಂಡುಸಂತಾನವನ್ನು ಹೆರಲಾಗದಿದ್ದ ಹೆಣ್ಣಿನ ಬದಲಿಗೆ ತನ್ನ ಗರ್ಭದಲ್ಲಿ ಸಂತಾನವನ್ನು ಬೆಳೆಸಿಕೊಟ್ಟು ಹೊರಟು ಬರುವ ಒಂದು ಯಂತ್ರಮಾತ್ರವಾಗಿದ್ದಳು. ಹೆಣ್ಣಿಗಿರುವ ಈ ಫಲವಂತಿಕೆಯೂ ಅವಳಿಗೆ ಶಾಪವಾಗಿದ್ದನ್ನು ಕಾಣಬಹುದು. ಗಂಡುಸಂತಾನದ ಕಾರಣವಾಗಿ ಮಾಧವಿಯ ಜೊತೆಗೆ ಹರ್ಯಶ್ವನದು ಆಕ್ರಮಣಕಾರಿಯಾದ ಸಂಬಂಧವನ್ನು ಹೊಂದಿದರೆ, ದಿವೋದಾಸನು ಸಾಂಗತ್ಯ ಸಾಹಚರ್ಯಗಳ ಮುಖವಾಡದ ಸಂಬಂಧವನ್ನು ಹೊಂದಿದ್ದು, ಉಶೀನರನು ಒಂದು ಬಗೆಯ ನಿರ್ಲಿಪ್ತತೆಯಿಂದ ಕೂಡಿದ ಸಂಬಂಧವನ್ನು ಹೊಂದಿದ್ದನು. ಇದರಿಂದ ಗಂಡು-ಹೆಣ್ಣಿನ ನಡುವೆ ನಿಸ್ವಾರ್ಥ ದೈಹಿಕ ಸಂಬಂಧವೇ ಸಾಧ್ಯವಿಲ್ಲವೇನೋ ಎಂದು ರೋಸಿ ಹೋಗಿದ್ದವಳಿಗೆ ಸಹಜವಾಗಿ ಚಿಂತಿಸುವ ಮನಸ್ಥಿತಿಯೇ ಬೇಡವೆನಿಸಿಬಿಡುತ್ತದೆ. ಹಾಗಾಗಿ ಒಳ್ಳೆಯ ಅಪ್ಪ, ಗಂಡ, ಅಣ್ಣ, ಗೆಳೆಯನಂತೆ ಪ್ರೀತಿ, ವಿಶ್ವಾಸ ತೋರುವ ಆದಿಮನನ್ನು ಯಾವ ದೈಹಿಕ ಬಂಧನದಲ್ಲೂ ಸಿಲುಕಿಸಲು ಇಚ್ಛಿಸದ ಮಾಧವಿಗೆ ಆದಿಮ ಬದುಕಿನಲ್ಲಿ ಕೊನೆಗೆ

ತಳೆಯುವ ನಿಲುವು ನುಂಗಲಾರದ ತುತ್ತಾಗಿ ಕಾಣುತ್ತದೆ. "ನನ್ನ ಪ್ರೀತಿ ಒಂದಲ್ಲ ಒಂದು ದಿನ ನಿನ್ನನ್ನು ಮಣಿಸಬಹುದೆಂಬ ಆಸೆಯನ್ನು ಮಾತ್ರ ಬಿಟ್ಟುಕೊಡಲು ನಾನು ಸಿದ್ಧನಿಲ್ಲ" ಎನ್ನುವ ಆದಿಮನ ಭರವಸೆಯ ಮಾತುಗಳು ಮಾಧವಿಗೆ ಅಶಾಂತಿಯನ್ನು ತಂದರೂ ಆಶಾಕಿರಣವೂ ಆಗುವುದನ್ನು ಗಮನಿಸಬಹುದು. **ಹೊಸಬದುಕನ್ನು** ಆಹ್ವಾನಿಸುವ ಎಳೆಯ ಜೋಡಿಗಳಾಗಿ ಮಾಧವಿ - ಆದಿಮರು ಕಂಡುಬರುತ್ತಾರೆ.

ಪ್ರಭುತ್ವ ಮತ್ತು ಧರ್ಮಗಳೆಂಬ ತಮ್ಮ ಅಧಿಕಾರದ ನೆಲೆಗಳಿಂದ ತಮ್ಮ ಸ್ವಾರ್ಥಕ್ಕಾಗಿ ಸಮಾಜದ ಯಾವ ನೀತಿ ನಿಯಮಗಳಿಗೂ ಬದ್ಧರಾಗದೆ ಮಾಧವಿಯ ಬದುಕನ್ನು ಶೋಷಣೆಗೊಳಪಡಿಸಿದರೂ, ದೌರ್ಜನ್ಯದ ಆಘಾತದಲ್ಲೂ ಸೆಟೆದು ನಿಲ್ಲುವ, ಕಷ್ಟದ ಮೂಸೆಯಲ್ಲಿ ಕರಗಿದರೂ ಅಪ್ಪಟ ಚಿನ್ನವಾಗಿ ಪರಿವರ್ತಿತಳಾಗಿ ಸುಂದರ ಕನಸು ಕಾಣಬಲ್ಲ ಸಶಕ್ತ ಪಾತ್ರವಾಗಿ ಮಾಧವಿ ಚಿತ್ರಿಸಲ್ಪಡುತ್ತಾಳೆ. **ಪಿತೃವಾಕ್ಯ ಪರಿಪಾಲಕಳಾದ** ಮಾಧವಿಯನ್ನು ಮೆಚ್ಚಿದ ಯಯಾತಿಯು ಅವಳಿಗೆ ವಿವಾಹ ಮಾಡಲು ಬಯಸಿದನು. ತನ್ನ ಕೀರ್ತಿಗೆ ಕಾರಣಳಾದ ಮಗಳು ಮಾಧವಿ 'ಏನೇ ಕೇಳಿದರೂ ಇಲ್ಲವೆನ್ನುವುದಿಲ್ಲ' ಎಂದು ಆನಂದತುಂದಿಲನಾಗಿ ಯಯಾತಿ ಮಾತುಕೊಟ್ಟು ತನ್ನ ಮಗಳ ಇಚ್ಛೆಯಂತೆ ಅವಳಿಗೆ ಬಿಡುಗಡೆಯ ಸ್ವಾತಂತ್ರ್ಯವನ್ನು ನೀಡುತ್ತಾನೆ. ಅದೂ ಮಾಧವಿ ತನ್ನವ್ವೆಯ ಮುದ್ದಿನ ಮಗಳಾಗಿ ತನ್ನ ಗೂಡಿಗೆ ಬಂದು ಸೇರುತ್ತಾಳೆ. ಇದು ಮಾಧವಿಯು ಯಯಾತಿಯ ಮೇಲೆ ಸಾಧಿಸಿದ ದಿಗ್ವಿಜಯವೇ ಆಗಿತ್ತು.

ಮಾಧವಿಯ ಅತ್ತೆ ಪಾರ್ವತಿಯು, ನಾಲ್ವರೊಂದಿಗೆ ಇದ್ದು ನಾಲ್ಕು ಮಕ್ಕಳನ್ನು ಹೆತ್ತುಕೊಟ್ಟು ಬಂದ ಮಾಧವಿಯನ್ನು ಆದಿಮನ ಹೆಂಡತಿಯಾಗಿ, ತನ್ನ ಸೊಸೆಯಾಗಿ ನೋಡಲು ಬಯಸಲು ಇಷ್ಟಪಡುವುದಿಲ್ಲ. ಇಲ್ಲಿ ಪಾರ್ವತಿಯ ಸ್ತ್ರೀಸಹಜವಾದ ವರ್ತನೆಯನ್ನು ಕಾಣುತ್ತೇವೆ. ಆದರೆ ಆದಿಮನಲ್ಲಿ ಅಷ್ಟೇ ದೃಢವಾಗಿ ಬೇರೂರಿದ್ದ ಮಾಧವಿಯ ಬಗೆಗಿನ ಪ್ರೀತಿಯನ್ನೂ ಕಾಣಬಹುದು. ಹಾಗೆಯೇ ಮಲ್ಲಿಕಾಳಂತಹ ಸಂವೇದನಾಶೀಲ ದಾಸಿಯನ್ನೂ, ಸೇವಂತಿಯಂತಹ ಸತ್ಯನಿಷ್ಠುರವಾದ ದಾಸಿಯನ್ನು ಅಂಬಿಕೆಯಂತಹ ಅಸಹಾಯಕ ದಾಸಿಯರನ್ನು ಈ ಕಾದಂಬರಿಯಲ್ಲಿ ಗುರುತಿಸ-ಬಹುದು.

ವೇದಾರವರ ಕಾದಂಬರಿಯ ಶೀರ್ಷಿಕೆಯಾದ 'ಕಪ್ಪುಕಿವಿಯ ಬಿಳಿಯ ಕುದುರೆಗಳು' ಒಂದು ಅದ್ಭುತ ರೂಪಕವಾಗಿ ಇಡೀ ಕಾದಂರಿಯ ಆಶಯವನ್ನು ಧ್ವನಿಸುವಲ್ಲಿ ಯಶಸ್ವಿಯಾಗಿದೆ. ಅಶ್ವಮೇಧಯಾಗದಲ್ಲಿ ವಿಶೇಷವಾಗಿ ಬಳಸಲ್ಪಡುವ ಈ

ಕುದುರೆಗಳು ರಾಜ-ಮಹಾರಾಜರುಗಳ ಕ್ರೌರ್ಯ, ಪರಾಕ್ರಮಗಳ ಪ್ರದರ್ಶನ, ಸಾಮ್ರಾಜ್ಯ ವಿಸ್ತರಣೆಯ ದಾಹ, ಅಧಿಕಾರದ ವ್ಯಾಮೋಹ, ಭೂಮಿಯ ಮೇಲಿರುವ ಸಕಲ ಚರಾಚರ ವಸ್ತುಗಳೆಲ್ಲಾ ತನ್ನ ಸುಖಭೋಗಕ್ಕಾಗಿಯೇ ಇರುವುದೆನ್ನುವ ಅಹಂ, ಈ ಎಲ್ಲಾ ಅಂಶಗಳನ್ನು ಧ್ವನಿಸುವ ಕಾವ್ಯಾತ್ಮಕ ಪ್ರತಿಮೆಯಾಗಿ ಬಳಸಲ್ಪಡುತ್ತದೆ. ರಾಜ ಮಹಾರಾಜರುಗಳ ಆಸೆ-ಆಕಾಂಕ್ಷೆಗಳ ಕಾಲಡಿಯಲ್ಲಿ ಧೂಳಾಗಿ ನೋಯುವ ಹಲವು ಹೆಣ್ಣುಗಳ ಪ್ರತಿನಿಧಿಯಾಗಿರುವಳು ಇಲ್ಲಿನ ಮುಖ್ಯ ಪಾತ್ರವಾದ 'ಮಾಧವಿ'. ಪ್ರಭುತ್ವದ ಅಮಾನವೀಯತೆಯನ್ನು, ನಿರಂಕುಶತ್ವವನ್ನು ಡಂಭಾಚಾರವನ್ನು ಪ್ರಶ್ನಿಸಿ, ಎದುರಿಸುವ ದಿಟ್ಟ ಧ್ವನಿಯಾಗಿ ಮಾರ್ಪಡುತ್ತಾಳೆ. ಪುರುಷ ರಾಜಕಾರಣದಿಂದಾಗಿ ನೋವಿನ ಮುದ್ದೆಯಾಗಿ, ಶೋಷಿತರ ಪ್ರತಿನಿಧಿಯಾಗಿ ಮಾಧವಿ ಚಿತ್ರಿತಳಾಗಿದ್ದಾಳೆ. ಅಲ್ಲದೇ ರಾಜಕಾರಣದ ಬೇರುಗಳನ್ನು ವಿವಿಧ ಮಗ್ಗುಲುಗಳನ್ನು ಶೋಧಿಸುತ್ತಾಳೆ. ಈ ಮೂಲಕ ಪ್ರಭುತ್ವ ಮತ್ತು ಧರ್ಮದ ಸಂಗವು ಸೃಷ್ಟಿಸಿರುವ ವಿಷವರ್ತುಲದಲ್ಲಿ ನೋಯುವ ಹೆಣ್ಣುಗಳ ಮನಸ್ಸು ಅನಾವರಣಗೊಳ್ಳುತ್ತದೆ. ಹಾಗಾಗಿ ಮಾಧವಿ ಇಲ್ಲಿ ಆಧುನಿಕ ಚಿಂತನೆಯನ್ನು ಉಸಿರಾಡುವುದನ್ನು ಕಾಣಬಹುದು.

ಅಲ್ಲದೇ ವೇದಾರವರು ತಮ್ಮ ಕಾದಂಬರಿಯಲ್ಲಿ ಆಧುನಿಕ ಸಾಹಿತ್ಯ ರಚನೆಯ ವಿಶಿಷ್ಟ ಲಕ್ಷಣಗಳಲ್ಲೊಂದಾದ ಗಾದೆಗಳ ಬಳಕೆಯನ್ನು ಕಾದಂಬರಿಯುದ್ದಕ್ಕೂ ಸಮರ್ಪಕವಾಗಿ ಬಳಸಿಕೊಂಡಿದ್ದಾರೆ.

ಉದಾ: 'ಮಿಂಚಿಹೋಗಿದ್ದಕ್ಕೆ ಚಿಂತಿಸಿ ಫಲವಿಲ್ಲ' (ಲಕ್ಷ್ಮಿಯ ಅತ್ಯಾಚಾರ), 'ಕೊಟ್ಟ ಶಾಪ ಬಿಟ್ಟ ಬಾಣ ಮರಳಿ ಹಿಂತಿರುಗಲಾರವು (ಯಯಾತಿಯ ಅಕಾಲ ವೃದ್ಧಾಪ್ಯದ ಸಾಪ), 'ನಾಯಿ ಹಸಿದಿತ್ತು, ಹಿಟ್ಟು ಹಳಸಿತ್ತು'(ಸೇವಂತಿಯ ಚುಚ್ಚುಮಾತು, ಮಾಧವಿಯ ಬಾಡಿಗೆ ತಾಯ್ತನ), ಕಾಮಾಲೆ ಕಣ್ಣಿನವರಿಗೆ ಲೋಕವೆಲ್ಲಾ ಹಳದಿಯಂತೆ', 'ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆತಂದಂತಾಯ್ತು' – ಇತ್ಯಾದಿ.

ಅಧ್ಯಾಯ – ೫

ಉಪಸಂಹಾರ

ವ್ಯಾಸ ವಿರಚಿತ 'ಮಹಾಭಾರತದ' ಉದ್ಯೋಗಪರ್ವದ ೧೧ನೇ ಸಂಪುಟದಲ್ಲಿ ಉಲ್ಲೇಖವಾಗಿರುವ 'ಮಾಧವಿ ಕತೆ'ಯನ್ನು ಆಧರಿಸಿ ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡಿರುವ ಅನುಪಮಾ ನಿರಂಜನರ 'ಮಾಧವಿ' ಕಾದಂಬರಿಯನ್ನಾಗಲೀ ಮತ್ತು ಎಂ.ಎಸ್.ವೇದಾರವರ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕಾದಂಬರಿಯನ್ನಾಗಲೀ ಗಮನಿಸಿದಾಗ, ಆಯಾ ಕಾಲಧರ್ಮಕ್ಕನುಗುಣವಾದ ಬದಲಾವಣೆ ಮಾಡಿಕೊಂಡಿರು-ವುದನ್ನು ಗುರುತಿಸಬಹುದು. ಮೂಲದಲ್ಲಿರುವಂತೆ ಮಾಧವಿಗೆ ಬ್ರಹ್ಮವಾದಿಯೊಬ್ಬ ನೀಡಿದ್ದ ವರದ ವಿಚಾರವನ್ನು, ಗಾಲವನು ಹತ್ತುಸಾವಿರ ವರ್ಷಗಳ ಕಾಲ ವಿಶ್ವಾಮಿತ್ರನ ಶಿಷ್ಯತ್ವ ಪಡೆದಿದ್ದನೆಂಬ ನಂಬಲರ್ಹವಲ್ಲದ ವಿಚಾರಗಳನ್ನು ಪ್ರಸ್ತುತ ಕಾದಂಬರಿಗಳಲ್ಲಿ ಎಲ್ಲಿಯೂ ಉಲ್ಲೇಖಿಸಿಲ್ಲ.

ಅನುಪಮಾರವರು ಮಾಧವಿಯನ್ನು ತಮ್ಮ ಕಾದಂಬರಿಯ ಕೇಂದ್ರ ಪಾತ್ರವಾಗಿ ತೆಗೆದುಕೊಂಡು, ಆಕೆಯನ್ನು ಶೋಷಿತ ಸ್ತ್ರೀಯರ ಪ್ರತಿನಿಧಿಯಾಗಿ, ಬಂಡುಗಾರ್ತಿ-ಯಾಗಿ, ಸ್ವಾತಂತ್ರ್ಯ ಬಯಸುವ ಸ್ತ್ರೀಯಾಗಿ ಚಿತ್ರಿಸಿದ್ದಾರೆ. ಇಲ್ಲಿನ ಎಲ್ಲಾ ಪಾತ್ರಗಳು ಅಂದಿನ ವರ್ಣಸಮಾಜದ ಪ್ರತಿನಿಧಿಗಳಾಗಿ ಆ ಸಮಾಜ ವ್ಯವಸ್ಥೆಗೆ ತಕ್ಕಂತೆ ವರ್ತಿಸಿದವರು ಕಂಡುಬಂದಿದ್ದಾರೆ. ಅಂದರೆ ಕ್ಷತ್ರಿಯರು ರಾಜ್ಯವಾಳುವ ಹಕ್ಕನ್ನು; ಬ್ರಾಹ್ಮಣರು ಯಜ್ಞ, ಯಾಗ, ಪೂಜೆ ಮಾಡುವ ವಿದ್ಯೆ ನೀಡುವ ಹಕ್ಕನ್ನು ಪಡೆದಿದ್ದರು. ಈ ಬ್ರಾಹ್ಮಣರಲ್ಲಿ ಕೆಲವರು ಕಾಡುಗಳ ಮಧ್ಯೆ ಗುರುಕುಲ ಸ್ಥಾಪಿಸಿದ್ದು, ರಾಜರಿಂದ ಧನಕನಕ ಸಹಾಯ ಪಡೆದಿದ್ದರು. ವೈಶ್ಯರು ನೆಲ ಉಳುವ ಕೆಲಸ ಮಾಡುತ್ತಿದ್ದರು. ಆದರೆ ಶೂದ್ರರು ಈ ಎಲ್ಲಾ ವರ್ಣಗಳ ಜನರಿಗೆ ಊಳಿಗದವರಾಗಿ ಇರುತ್ತಿದ್ದುದನ್ನು ಕಾಣಬಹುದು. ಆದ್ದರಿಂದಲೇ ಅನುಪಮಾರವರು ತಮ್ಮ 'ಮಾಧವಿ' ಕಾದಂಬರಿಯ ಮುನ್ನುಡಿಯಲ್ಲಿ ಲಂಡನ್ನಿನ ಭಾರಾತಾಧ್ಯಯನ ಪ್ರಾಧ್ಯಾಪಕ ಭಾಷಾಮ್‌ರವರು ಹೇಳಿರುವ "ಹೆಂಗಸು ಯಾವ ವರ್ಣಕ್ಕೆ ಸೇರಿದ್ದರೂ ಸಮಾಜದಲ್ಲಿ ಅವಳ ಸ್ಥಾನ ಶೂದ್ರರಿಗೆ ಸರಿಸಮಾನವಾಗಿರುತ್ತಿತ್ತು" ಎಂಬ ಹೇಳಿಕೆಯನ್ನು ಮಾಧವಿ ಪಾತ್ರದ ಮೂಲಕ ಸಮಂಜಸಗೊಳಿದ್ದಾರೆನ್ನಬಹುದು. ಹಾಗಾಗಿಯೇ ಮಾಧವಿ ರಾಜಕುಮಾರಿ ಯಾಗಿದ್ದರೂ ಸಾಮಾನ್ಯ ಸ್ತ್ರೀಯಂತೆ ಕಷ್ಟಗಳನ್ನನುಭವಿಸಿದ್ದಳು.

ಅನುಪಮಾರವರ ಕಾದಂಬರಿಯಲ್ಲಿ ದೇವಯಾನಿಯಂತಹ ಮಲತಾಯಿಯ ತಾತ್ಸಾರಕ್ಕೆ ಗುರಿಯಾಗಿ ಸಂಕಷ್ಟವನ್ನನುಭವಿಸುವ ಹೆಣ್ಣುಮಗಳಾಗಿ ಮಾಧವಿಯ ಚಿತ್ರ ಕಾಣುತ್ತೇವೆ. ಪುರುಷ ಸಮಾಜವು ತಮ್ಮ ಅಸಹಾಯಕತೆಯನ್ನು ಮುಚ್ಚಿಡುವಲ್ಲಿ ಸ್ತ್ರೀಯರನ್ನು ಶೋಷಣೆಗೊಳಪಡಿಸುತ್ತಿದ್ದ ರೀತಿ ಇಲ್ಲಿ ಅನಾವರಣಗೊಂಡಿದೆ. ಯಯಾತಿಗೆ ತನ್ನ ರಾಜ್ಯದ ಬೊಕ್ಕಸ ಬರಿದಾಗಿ ಮಾಧವಿಯನ್ನು ವಿವಾಹ ಮಾಡಲಾಗದ ಅಸಹಾಯಕತೆ ಒಂದು ಕಡೆಯಾದರೆ, ಮತ್ತೊಂದು ಕಡೆ ದೇಹಿ ಎಂದು ಬಂದ ಗಾಲವನಿಗೆ ಏನನ್ನೂ ನೀಡಲಾಗದ ಅಸಹಾಯಕತೆ, ಗಾಲವನಿಗೆ ತಾನು ಗುರುದಕ್ಷಿಣೆಯನ್ನು ಹೇಗೆ ಸಂಪಾದಿಸುವುದೆಂಬ ಅಸಹಾಯಕತೆ, ಹರ್ಯಶ್ವ ಮತ್ತು ದಿವೋದಾಸರಿಗೆ ಪುತ್ರಸಂತಾನವಿಲ್ಲದ ಅಸಹಾಯಕತೆ... ಹೀಗೆ ಇವರೆಲ್ಲರ ಅಸಹಾಯಕತೆಗೆ ಗುರಿಯಾಗಿ ನಲುಗಿದವಳು ಮಾತ್ರ ಮಾಧವಿ. ಇದುವೇ ಮಾಧವಿಯ ಅಸಹಾಯಕತೆಯೂ ಹೌದು. ಇದೆಲ್ಲದರ ಒಟ್ಟು ಮೊತ್ತವೇ ಮಾಧವಿಯ ಪ್ರತಿಭಟನೆಯಾಗಿದ್ದು, ಈ ಮೂಲಕ ಶೋಷಿತರು ತಮ್ಮ ಪರಿಸ್ಥಿತಿಯ ವಿರುದ್ಧ ಬಂಡಾಯವೇಳುವ ಸಹಜವಾದ ಪ್ರತಿಕ್ರಿಯೆ ಇಲ್ಲಿ ವ್ಯಕ್ತವಾಗಿದೆ.

ಹಾಗೆಯೇ ಒಂದು ಹೆಜ್ಜೆ ಮುಂದೆ ಹೋಗಿರುವ ವೇದಾರವರು ಇಡೀ ಮಾಧವಿ ಕತೆಯನ್ನು ತೆಗೆದುಕೊಂಡು ಮಾಧವಿ ಮತ್ತು ಆಕೆಯ ಸುತ್ತ ನಡೆಯುವ ಕತೆಯನ್ನು ವರ್ತಮಾನದ ಒಡಲಲ್ಲಿಟ್ಟು ಅನೇಕ ಒಳವಿವರಗಳನ್ನು ನೀಡಿದ್ದಾರೆ. ಆಧುನಿಕ ಸ್ತ್ರೀವಾದಿ ಪ್ರಜ್ಞೆಯ ಪ್ರಮುಖ ಅಂಶಗಳೆನ್ನಬಹುದಾದ ಸೋದರಿತ್ವ, ಮಾತೃತ್ವದ ಮಹತ್ವವನ್ನು ಕುರಿತು ಹೇಳಿದ್ದಾರೆ. ಪುರುಷ ಪ್ರಧಾನವಾದ ಕುಟುಂಬವಿದ್ದರೂ ಗಂಡುಮಕ್ಕಳಿಗೆ ವಿಶೇಷವಾದ ಪ್ರಾಮುಖ್ಯತೆ ಇದ್ದರೂ ಇಲ್ಲಿ ಪುರು ಕೂಡಾ ತಂದೆಯ ದೌರ್ಜನ್ಯಕ್ಕೆ ಒಳಗಾಗಿ ಅಕಾಲ ವೃದ್ಧಾಪ್ಯವನ್ನು ಅನುಭವಿಸುತ್ತಿದ್ದನು. ಆದ್ದರಿಂದ ೨೧ನೇ ಶತಮಾನದ ಆಧುನಿಕ ಯುಗದಲ್ಲಿ ಪುರುಷ ರಾಜಕಾರಣವು ಸ್ತ್ರೀ ಪುರುಷರೆಂಬ ಭೇದವಿಲ್ಲದೇ ತಮ್ಮ ದೌರ್ಜನ್ಯವೆಸಗುತ್ತಿರುವುದನ್ನು ಮಾಧವಿ ಮತ್ತು ಪುರುವಿನ ಮೂಲಕ ಚಿತ್ರಿಸಿದ್ದಾರೆ.

ಯಯಾತಿ ಇಲ್ಲಿ ಯಾರೂ ನೀಡದಂತಹ ದಾನವನ್ನು ನೀಡಿ ಖ್ಯಾತಿ ಪಡೆಯಬೇಕೆಂದು ಬಯಸಿ ಮುಂದೆ ಯಾವ ತಂದೆಯೂ ಮಾಡಬಾರದಂತಹ ಕೆಲಸ ಮಾಡಿದನೆಂಬ ಕುಖ್ಯಾತಿಗೆ ಗುರಿಯಾಗುತ್ತಾನೆ. ಸ್ವಾರ್ಥಮಯ ಪುರುಷ ಸಮಾಜವೇ ಇಲ್ಲಿ ವಿಜೃಂಭಿಸುತ್ತದೆ. ಯಯಾತಿ, ಗಾಲವ, ವಿಶ್ವಾಮಿತ್ರ, ಹರ್ಯಶ್ವ, ದಿವೋದಾಸ,

ಉಶೀನರ, ಶರಭಯ್ಯ ಈ ಎಲ್ಲಾ ಪಾತ್ರಗಳು ಸ್ವಾರ್ಥಿಗಳಾಗಿ, ಸಮಯ ಸಾಧಕರಾಗಿ ಸ್ವೇಚ್ಛೆಯಿಂದ ಹೆಣ್ಣನ್ನು ತಮ್ಮ ಮನೋಯಿಚ್ಛೆ ಬಳಸಿಕೊಂಡವರಾಗಿ ಕಂಡುಬರುತ್ತಾರೆ.

ಹಕ್ಕಿಗೂಡಿನ ಸ್ವಚ್ಛಂದದ ಬದುಕನ್ನು ಇಷ್ಟಪಡುವ ಮಾಧವಿಯನ್ನು ನಿಸರ್ಗ ಪ್ರಿಯೆಯಾಗಿ, ಪಿತೃವಾಕ್ಯಪರಿಪಾಲನಳಾಗಿ ಚಿತ್ರಸಲಾಗಿದೆ. ಜೊತೆಗೆ ಬಾಡಿಗೆ ತಾಯಿಯಾಗಿ ಕಂಡುಬರುವ ಮಾಧವಿಯ ಮೂಲಕ ಬಾಡಿಗೆ ತಾಯಿಗೂ ಮತ್ತು ಬೆಲೆವೆಣ್ಣಿಗೂ ನಡುವೆ ಇರುವ ಸ್ಪಷ್ಟ ಚಿತ್ರಣವನ್ನು ನೀಡಿದ್ದಾರೆ ವೇದಾರವರು. ಮಾಧವಿ ಪ್ರಭುತ್ವದ ಅಧಿಕಾರಕ್ಕೆ ಒಳಪಟ್ಟು ನಾಲ್ಕೂ ಜನರ ಬಾಯಿಗೆ ಆಹಾರವಾಗಿದ್ದವಳೆಂದು ಗೊತ್ತಾದರೂ ಆದಿಮನಿಗೆ ಆಕೆಯ ಮೇಲಿದ್ದ ಪ್ರೀತಿ ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಬದಲಾಗಿ ಮಾಧವಿಗೆ ಅನ್ಯಾಯವಾಗುವಾಗ ಪ್ರತಿರೋಧಿಸ–ಲಾಗದೆ ಅಸಹಾಯಕನಾಗಿದ್ದ ಆದಿಮನಲ್ಲಿ ಆಕೆಯ ಅಗಲಿಕೆ ಇನ್ನಷ್ಟು ಪ್ರೀತಿಯನ್ನು ಹೆಚ್ಚಿಸಿತ್ತು. ಹಾಗೆಯೇ ಮಾಧವಿಗೆ ತನ್ನ ಬದುಕಿನಲ್ಲಿ ಬಂದ ತಾತ, ತಂದೆ, ಹರ್ಯಶ್ವ ದಿವೋದಾಸ, ಉಶೀನರ, ವಿಶ್ವಾಮಿತ್ರ, ಗಾಲವರಂತಹ ಗಂಡಸರ ನಡವಳಿಕೆಯ ಬಗ್ಗೆ ಹೇವರಿಕೆ ಮೂಡಿದ್ದರೂ ಆದಿಮನನ್ನು ಮಾತ್ರ ಆ ಗುಂಪಿಗೆ ಸೇರಿಸದೇ, ತನ್ನ ಪ್ರೀತಿಯ ಹುಡುಗನಾಗಿ, ಒಡನಾಡಿಯಾಗಿಯೇ ನೋಡಿದ್ದಳು. ಹೀಗೆ ಮಾಧವಿ–ಆದಿಮರ ಮೂಲಕ ನಿಜವಾದ ಪ್ರೀತಿಯೇ ಅರ್ಥವನ್ನು ತಿಳಿಸುವುದರ ಜೊತೆಗೆ, ಇಂಥ ಪ್ರೀತಿಯ ಮಾಧವಿಗೆ ಹೊಸ ಬದುಕನ್ನು ಕಟ್ಟಿಕೊಟ್ಟಿತೆಂಬುದನ್ನು ತಿಳಿಸಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ನೋಡಿದಾಗ ಇಲ್ಲೆಲ್ಲಾ ಗಂಡು – ಹೆಣ್ಣಿನ ಸಂಬಂಧಗಳ ವಿವಿಧ ರೂಪ ದರ್ಶನವಾಗುವುದನ್ನು ಕಾಣಬಹುದು.

ಮಾಧವಿ ತಾನು ಪ್ರಭುತ್ವದ ದೌರ್ಜನ್ಯಕ್ಕೆ ಒಳಪಡುವಾಗ ತನ್ನನ್ನು ತಾನು ಸಂತೈಸಿಕೊಳ್ಳಲು ಹುಟ್ಟುಹಾಕಿದ **'ದೇಹ ಮೂಲವಾದ ಪ್ರಶ್ನೆ'**ಯು ಇಂದಿಗೂ ಬಗೆಹರಿಯದ ಪ್ರಶ್ನೆಯೆಂದೇ ಹೇಳಬಹುದು. ಇದರಿಂದ ದೇಹ ಮತ್ತು ಮನಸ್ಸುಗಳ ಅಂತರ್ ಸಂಬಂಧವು ಸಮಸ್ಯೆಯಾಗೇ ಉಳಿದಿರುವುದನ್ನು ತಿಳಿಯಬಹುದು. ಪ್ರಸ್ತುತ ಮಾಧವಿಯ ಬದುಕಿನ ದುರಂತಕ್ಕೆ ಕಾರಣಗಳಲ್ಲೊಂದಾದ ಕಪ್ಪು ಕಿವಿಯ ಬಿಳಿಯ ಕುದುರೆಗಳು ವಿಚಿತ್ರ, ವಿಶೇಷ, ಅಪರೂಪದ ಕುದುರೆಗಳಾಗಿ ವರ್ಣಿಸಲ್ಪಟ್ಟಿವೆ. ಈ ಕುದುರೆಗಳು ನೋಡಲು ಆಕರ್ಷಣೀಯವಾಗಿದ್ದರೂ, ಅವುಗಳನ್ನು ಸಂಪಾದಿಸುವಲ್ಲಿ ಮಾಧವಿಯ ಮೇಲಾದ ಪರಿಣಾಮ ಮಾತ್ರ ಘೋರವಾದುದು. ಹಾಗಾಗಿ ಈ ಕುದುರೆಗಳು ರಾಜಮಹಾರಾಜರುಗಳ ಶೌರ್ಯ, ಅಧಿಕಾರದ ವ್ಯಾಮೋಹ ಪ್ರಭುತ್ವದ

ಅಮಾನವೀಯತೆ, ಡಂಭಾಚಾರ, ನಿರಂಕುಶತ್ವದ ಪ್ರತಿಮೆಯಾಗಿ ಕಾದಂಬರಿಗಳಲ್ಲಿ ಹಲವು ಧ್ವನಿಗಳನ್ನು ಪ್ರಕಟಿಸುವುದು ಕಂಡುಬರುತ್ತದೆ.

ಒಟ್ಟಾರೆ ಮಾಧವಿ ಪುರಾಣಪಾತ್ರವಷ್ಟೇ ಅಲ್ಲ, ಆಧುನಿಕ ಮನಸ್ಸುಗಳ ಪ್ರತಿಬಿಂಬವಾಗಿದ್ದಾಳೆ. ಆಧುನಿಕ ಚಿಂತನೆಗಳನ್ನು ಉಸಿರಾಡುತ್ತಿದ್ದಾಳೆ. ಮಹಾಭಾರತ ಪುರಾಣಗಳು ಅಗೆದಷ್ಟು ಹೊರಬರುವ ರತ್ನಗರ್ಭಗಳು. ಹಾಗಾಗಿ ಮಹಾಭಾರತದಲ್ಲಿ ಬಿಂದುಮಾತ್ರವಾಗಿದ್ದ ಮಾಧವಿ ಕತೆಯನ್ನು ಕಾಲಧರ್ಮಕ್ಕನುಗುಣವಾದ ಬದಲಾವಣೆಗೊಳಪಡಿಸಿ, ಸಮಕಾಲೀನ ಚರ್ಚೆಗೊಳಪಡಿಸಿರುವ ಆ ಇಬ್ಬರು ಕಾದಂಭರಿಕಾರ್ತಿಯರ ಶ್ರಮ ಶ್ಲಾಘನೀಯವಾದುದು. ಈ ದೃಷ್ಟಿಯಿಂದ ಅನುಪಮಾ ನಿರಂಜನರ 'ಮಾಧವಿ' ಮತ್ತು ವೇದಾರವರ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕನ್ನಡ ಸಾಹಿತ್ಯದ ಕಾದಂಬರಿ ಕ್ಷೇತ್ರಕ್ಕೆ ನೀಡಲ್ಪಟ್ಟ ಅಮೂಲ್ಯ ಕೊಡುಗೆಗಳೆನ್ನಬಹುದು. ನಿಂತನೆಲೆಯನ್ನು ನೋಡಬೇಕಾದರೆ ಇತಿಹಾಸವನ್ನು ನೋಡುವುದು ಅತ್ಯಗತ್ಯ, ಆದ್ದರಿಂದ ಇಂಥ ಆಧುನಿಕ ಮನಸ್ಸುಗಳು ಸಾಹಿತ್ಯ ಸೃಷ್ಟಿಸುವಲ್ಲಿ ಮತ್ತೆ ಪುರಾಣದ ಕಡೆಗೆ ವಾಲಿರುವುದನ್ನು ಗಮನಿಸಬಹುದು. ಮಾಧವಿ ಕತೆಯ ವಸ್ತುವನ್ನಾಧರಿಸಿ ಖ್ಯಾತ ಹಿಂದಿ ಲೇಖಕರಾದ ಭೀಷ್ಮ ಸಹಾನಿಯವರು ಬರೆದ 'ಮಾಧವಿ' ನಾಟಕ ಕನ್ನಡದ ಅನುವಾದದಲ್ಲಿ ಓದುಗರಿಗೆ ಲಭ್ಯವಾಗಿರುವುದು ತಿಳಿದುಬರುತ್ತದೆ. ಹಾಗೆಯೇ ಮಾಧವಿಯ ತಂದೆಯಾದ ಯಯಾತಿಯನ್ನು ಕೇಂದ್ರವಾಗಿಟ್ಟುಕೊಂಡು ಗಿರೀಶ್‌ಕಾರ್ನಾಡರು ಕನ್ನಡದಲ್ಲಿ 'ಯಯಾತಿ' ಎಂಬ ನಾಟಕವನ್ನು ರಚಿಸಿದ್ದಾರೆ. ಜೊತೆಗೆ ವಿ.ಎಂ.ಇನಾಂದಾರ್‌ರವರು ಮರಾಠಿ ಕಾದಂಬರಿಕಾರ ವಿ.ಸ.ಖಾಂಡೇಕರರ 'ಯಯಾತಿ' ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಹೀಗೆ ಸಮಕಾಲೀನತೆಗೆ ಅನ್ವಯಿಸಿ ಪುರಾಣವನ್ನು ಕಟ್ಟುವ ಕೆಲಸ ಕನ್ನಡ ಸಾಹಿತ್ಯದುದ್ದಕ್ಕೂ ನಡೆದುಕೊಂಡು ಬಂದಿರುವುದು ಸ್ಪಷ್ಟವಾಗುತ್ತದೆ.

ಗ್ರಂಥಋಣ

೧) ವ್ಯಾಸ-ವಿರಚಿತ 'ಮಹಾಭಾರತ' ಕನ್ನಡ ಗದ್ಯಾನುವಾದ, ಉದ್ಯೋಗ ಪರ್ವ, ಸಂಪುಟ-೧೧

೨) 'ಮಾಧವಿ' – ಡಾ.ಅನುಪಮಾ ನಿರಂಜನ, ಪ್ರಕಾಶಕರು: ಡಿ.ವಿ.ಕೆ ಮೂರ್ತಿ, ಮೈಸೂರು-೪.

೩) 'ಕಪ್ಪು ಕಿವಿಯ ಬಿಳಿಯ ಕುದುರೆಗಳು'- ಡಾ.ಎಂ.ಎಸ್.ವೇದಾ-ಪ್ರಕಾಶಕರು, ಮೈಸೂರು ಹಿಂದೀ ಪ್ರಚಾರ, ಪರಿಷದ್, ಬೆಂಗಳೂರು-೧೦.

೪) 'ಕನ್ನಡ ಸಾಹಿತ್ಯ ಕೋಶ' – ರಾಜಪ್ಪ ದಳವಾಯಿ.